ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 5 ಶನಿವಾರ 2025

45

ಸಂಪುಟ: 45 | ಸಂಚಿಕೆ: 345 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com, website: www.mysurumithra.com

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871


ಮೈಸೂರು ವಿಶ್ವವಿದ್ಯಾನಿಲಯದ ಆರ್ಥಿಕ ದುಸ್ಥಿತಿ

ಸರ್ಕಾರ ಕೊಟ್ಟರೆ ಪೆನ್ಷನ್ ಇಲ್ಲದೆ ಹೋದರೆ ಟೆನ್ಷನ್!

● ಪ್ರಸಕ್ತ ಸಾಲಿನ ಬಜೆಟ್ ಮಂಡನೆ ಬಳಿಕ ಕುಲಪತಿ ಪ್ರೊ.ಲೋಕನಾಥ್ ಆತಂಕ ● ಈ ಬಾರಿಯ 107 ಕೋಟಿ ಆರ್ಥಿಕ ಕೊರತೆ ಹೇಗಪ್ಪಾ ಹೊಂದಿಸೋದು ● ಕ್ರೀಡಾ ಚಟುವಟಿಕೆಗಳಿಗೆ ಹಣದ ಕೊರತೆ ಬಗ್ಗೆ ಕುಲಪತಿಗಳ ಹತಾಶೆ ● ಸಾಂವಿಧಾನಿಕ ಹಕ್ಕಾದ ಶಿಕ್ಷಣಕ್ಕೆ ರಾಜ್ಯ ಸರ್ಕಾರ ಗ್ಯಾರಂಟಿ ಕೊಡಬಹುದಿತ್ತಲ್ವಾ!

ಮೈಸೂರು, ಏ.4(ಎಂಕೆ)– ದೇಶದ ಪ್ರತಿಷ್ಠಿತ ವಿಶ್ವವಿದ್ಯಾನಿಲಯಗಳಲ್ಲಿ ಒಂದಾದ ಶತಮಾನದ ಭವ್ಯ ಇತಿಹಾಸ ಹೊಂದಿರುವ ಮೈಸೂರು ವಿಶ್ವ ವಿದ್ಯಾಲಯ ಆರ್ಥಿಕ ಸಂಕಷ್ಟದಲ್ಲಿದ್ದು, ರಾಜ್ಯ ಸರ್ಕಾರ ಅನುದಾನ ಕೊಟ್ಟರೆ ಪೆನ್ಷನ್... ಇಲ್ಲದಿದ್ದರೆ ಟೆನ್ಷನ್ ಎಂಬಂತಾಗಿದೆ...!

ಮೈಸೂರು ವಿವಿ ಕ್ರಾಫರ್ಡ್ ಭವನದ ಸಭಾಂಗಣದಲ್ಲಿ ಶುಕ್ರವಾರ ನಡೆದ ಶಿಕ್ಷಣ ಮಂಡಳಿ ವಿಶೇಷ ಸಭೆಯಲ್ಲಿ ಬಜೆಟ್ ಮಂಡನೆ ಬಳಿಕ ಮಾತನಾಡಿದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ರಾಜ್ಯ ಸರ್ಕಾರ ಪಿಂಚಣಿ ಅನುದಾನವನ್ನು ಕೊಡದಿದ್ದರೆ ಕಷ್ಟವಾಗುತ್ತದೆ. ಮಾರ್ಚ್ ಅಂತ್ಯದವರೆಗೆ ನಾವು ಪಿಂಚಣಿ ನೀಡಿದ್ದೇವೆ. ಆದರೆ ಏಪ್ರಿಲ್ ತಿಂಗಳಿಂದ ತೊಂದರೆ ಆಗುತ್ತದೆ. ಒಂದು ವೇಳೆ ಸರ್ಕಾರ ಅನುದಾನ ಕೊಡದೇ ಹೋದರೆ ನಮ್ಮಿಂದಲೂ ಕೊಡಲು ಸಾಧ್ಯವಾಗದ ಪರಿಸ್ಥಿತಿ ಎದುರಾಗಬಹುದು. ಹಾಗಾಗಿ ನಾನು ಸರ್ಕಾರದ ಮಟ್ಟದಲ್ಲಿ ಪ್ರಯತ್ನಗಳನ್ನು ಮಾಡುತ್ತಿದ್ದೇನೆ ಎಂದು ಹತಾಶೆ ವ್ಯಕ್ತಪಡಿಸಿದರು.



ಮೈಸೂರು ವಿವಿ ಕ್ರಾಫರ್ಡ್ ಭವನದ ಸಭಾಂಗಣದಲ್ಲಿ ಶುಕ್ರವಾರ ಶಿಕ್ಷಣ ಮಂಡಳಿ ವಿಶೇಷ ಸಭೆ ನಡೆಯಿತು. ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಕುಲಸಚಿವರಾದ ಎಂ.ಕೆ.ಸವಿತಾ, ನಾಗರಾಜು, ಹಣಕಾಸು ಅಧಿಕಾರಿ ಕೆ.ಎಸ್.ರೇಖಾ ಮತ್ತಿತರರಿದ್ದರು.

107 ಕೋಟಿ ರೂ. ಕೊರತೆ ಇದ್ದು, ಸರ್ಕಾರ ಅನುದಾನ ಕೊಡದಿದ್ದರೆ, ಎಲ್ಲಿಂದ ಅಷ್ಟೊಂದು ಹಣವನ್ನು ಹೊಂದಿಸುವುದೆಂಬುದೇ ಪ್ರಶ್ನೆಯಾಗಿದೆ. ಸರ್ಕಾರ ಹೊಸದಾಗಿ ಪ್ರಾಧ್ಯಾಪಕರ ನೇಮಕ ಮಾಡಿದರೆ ಅತಿಥಿ ಉಪನ್ಯಾಸಕರಿಗೆ ನೀಡುವ ಹಣ ಉಳಿತಾಯವಾಗುತ್ತದೆ. ಪಿಂಚಣಿ ನೀಡುವುದು ಮತ್ತು ಬೋಧಕರ ನೇಮಕ ಸಂಬಂಧ ನಾನು ■6ನೇ ಪುಟಕ್ಕೆ

ಮೈಸೂರು ವಿವಿಯಲ್ಲಿ 107.72 ಕೋಟಿ ಕೊರತೆ ಬಜೆಟ್

2025–26ನೇ ಸಾಲಿನ ವಿವಿಯ ಆಯವ್ಯಯ ಮಂಡಿಸಿದ ಹಣಕಾಸು ಅಧಿಕಾರಿ ಕೆಎಸ್.ರೇಖಾ, ಅಂದಾಜು ಒಟ್ಟಾರೆ ನಿರೀಕ್ಷಿತ ಆದಾಯ 295.59 ಕೋಟಿ ರೂ.ಗಳಿದ್ದು, ವೆಚ್ಚ 403.31 ಕೋಟಿ ರೂ. ಆಗಿದೆ. ರಾಜ್ಯ ಸರ್ಕಾರ 157.54 ಕೋಟಿ ರೂ. ಪಿಂಚಣಿ ಅನುದಾನ ಬಿಡುಗಡೆ ಮಾಡಿದರೆ 18 ಲಕ್ಷ ರೂ.ಮಾತ್ರ ಕೊರತೆಯಾಗುತ್ತಿತ್ತು. ಆದರೆ 50 ಕೋಟಿ ರೂ.ಮಾತ್ರ ಅನುದಾನ ನೀಡಿರುವುದರಿಂದ 107.72 ಕೋಟಿ ರೂ.ಕೊರತೆಯುಂಟಾಗಿದೆ ಎಂದು ತಿಳಿಸಿದರು. ಖಾಯಂ ಸಿಬ್ಬಂದಿ ವೇತನಾನುದಾನ 127.68 ಕೋಟಿ ರೂ., ಪಿಂಚಣಿ ಅನುದಾನ 50 ಕೋಟಿ ರೂ. ಸೇರಿ 177.68 ಕೋಟಿ ರೂ. ಸರ್ಕಾರದಿಂದ ಮಂಜೂರಾಗಿದೆ. ಇದರ ಜೊತೆಗೆ ■6ನೇ ಪುಟಕ್ಕೆ

ಮೈಸೂರು ವಿಮಾನ ನಿಲ್ದಾಣ ರನ್‌ವೇ ವಿಸ್ತರಣೆ ಕಾಮಗಾರಿ ಶೀಘ್ರವೇ ಆರಂಭಿಸಿ

● ಕೇಂದ್ರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಒತ್ತಾಯ ● ನಾಗರಿಕ ವಿಮಾನಯಾನ ಸಚಿವ ಕಿಂಜರಾಪು ರಾಮಮೋಹನ ನಾಯ್ಡುಗೆ ಈ ಸಂಬಂಧ ಮನವಿ ಸಲ್ಲಿಕೆ ● ಈಗಾಗಲೇ ಅಗತ್ಯವಿರುವ 240 ಎಕರೆ ಭೂಮಿ ಸ್ವಾಧೀನಕ್ಕೆ 319.14 ಕೋಟಿ ಅನುದಾನ ಬಿಡುಗಡೆ ● 7 ಕಾಲುವೆ ಸ್ಥಳಾಂತರಕ್ಕೆ ಕಾವೇರಿ ನಿಗಮಕ್ಕೆ 70 ಕೋಟಿ; ವಿದ್ಯುತ್ ಲೈನ್ ಸ್ಥಳಾಂತರಕ್ಕೆ 31.82 ಕೋಟಿ ವೆಚ್ಚ

ಬೆಂಗಳೂರು, ಏ.4(ಕೆಎಂಶಿ)– ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದಿಂದ ಮೈಸೂರು ವಿಮಾನ ನಿಲ್ದಾಣದ ರನ್‌ವೇ ವಿಸ್ತರಣೆ ಕಾಮಗಾರಿಯನ್ನು ಶೀಘ್ರವೇ ಕೈಗೆತ್ತಿಕೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಮೂಲಸೌಕರ್ಯ ಸಚಿವ ಎಂ.ಬಿ. ಪಾಟೀಲ್ ಜೊತೆಗೂಡಿ ದೆಹಲಿಯಲ್ಲಿ ಇಂದು ಕೇಂದ್ರ ನಾಗರಿಕ ವಿಮಾನಯಾನ ಖಾತೆ ಸಚಿವ ಕಿಂಜರಾಪು ರಾಮಮೋಹನ ನಾಯ್ಡು ಅವರನ್ನು ಭೇಟಿ ಮಾಡಿ, ಮೈಸೂರು, ಕಲಬುರಗಿ, ವಿಜಯಪುರ ವಿಮಾನ ನಿಲ್ದಾಣಗಳ ಅಭಿವೃದ್ಧಿ ಕುರಿತು ಚರ್ಚೆ ನಡೆಸಿ ಮನವಿಪತ್ರ ಸಲ್ಲಿಸಿದರು. ಮೈಸೂರು ವಿಮಾನ ನಿಲ್ದಾಣ ಅಭಿವೃದ್ಧಿಗಾಗಿ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದೊಂದಿಗೆ 2005ರಲ್ಲಿ ಆಗಿರುವ ಒಪ್ಪಂದದ ನಿಯಮದ ಪ್ರಕಾರ ನಿಲ್ದಾಣದ ವಿಸ್ತರಣೆಗಾಗಿ ಅಗತ್ಯವಿರುವ ಹೆಚ್ಚುವರಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಯಾವುದೇ ಋಣ ಭಾರವಿಲ್ಲದೆ ವರ್ಗಾಯಿಸಬೇಕು. ಅದರಂತೆ ಕರ್ನಾಟಕ ಸರ್ಕಾರ ಅಗತ್ಯವಿರುವ ಭೂಮಿಯನ್ನು ಉಚಿತ ವಾಗಿ ಪ್ರಾಧಿಕಾರಕ್ಕೆ ವರ್ಗಾಯಿಸಿದೆ. ಇದೀಗ ವಿಮಾನ ನಿಲ್ದಾಣದ ಅಭಿವೃದ್ಧಿ ಬಂಡವಾಳ ವೆಚ್ಚ, ಮಾರ್ಪಾಡುಗಳು, ಬಲಪಡಿಸುವಿಕೆ ಮತ್ತು ಮೇಲ್ದರ್ಜೆಗೇರಿಸುವ ■6ನೇ ಪುಟಕ್ಕೆ



ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ನವದೆಹಲಿಯಲ್ಲಿ ಕೇಂದ್ರ ವಿಮಾನಯಾನ ಸಚಿವ ಕಿಂಜರಾಪು ರಾಮಮೋಹನ ನಾಯ್ಡು ಅವರನ್ನು ಭೇಟಿಯಾಗಿ ಮೈಸೂರು ವಿಮಾನ ನಿಲ್ದಾಣ ರನ್‌ವೇ ವಿಸ್ತರಣೆ ಸಂಬಂಧ ಮಾತುಕತೆ ನಡೆಸಿದರು.

ಮೈಸೂರಲ್ಲಿ ಮಳೆ ಆರ್ಭಟ

ಮೈಸೂರು, ಏ.4(ಎಂಕೆ)– ಮೈಸೂರಲ್ಲಿ ಮಳೆರಾಯನ ಆರ್ಭಟ ಶುರುವಾಗಿದ್ದು, ಶುಕ್ರವಾರ ನಗರದೆಲ್ಲೆಡೆ ತಡರಾತ್ರಿಯವರೆಗೂ ಸುರಿಯಿತು.

ರಾತ್ರಿ 8 ಗಂಟೆ ಸುಮಾರಿಗೆ ಕೆ.ಆರ್.ವೃತ್ತ, ರಾಮಸ್ವಾಮಿ ವೃತ್ತ, ಕೆ.ಜಿ.ಕೊಪ್ಪಲು, ಕೃಷ್ಣಮೂರ್ತಿಪುರಂ ಸೇರಿದಂತೆ ಕೆಲ ಭಾಗಗಳಲ್ಲಿ ಸುಮಾರು 15–20 ನಿಮಿಷಗಳ ಕಾಲ ಸುರಿದ ಮಳೆ ತಂಪೆರೆಯಿತು. ನಂತರ ರಾತ್ರಿ 10.30ರ ಸುಮಾರಿಗೆ ಬನ್ನಿಮಂಟಪ, ಯಾದವಗಿರಿ, ಕೆ.ಟಿ.ಸ್ಟ್ರೀಟ್ ಸೇರಿದಂತೆ ನಗರದಾದ್ಯಂತ ■6ನೇ ಪುಟಕ್ಕೆ

ವಕ್ಫ್ ತಿದ್ದುಪಡಿ ಮಸೂದೆಗೆ ಸಂಸತ್ ಅಂಗೀಕಾರ

ಶುಕ್ರವಾರ ಮುಂಜಾನೆ ರಾಜ್ಯಸಭೆಯಿಂದಲೂ ಪಾಸ್: ಇನ್ನು ರಾಷ್ಟ್ರಪತಿ ಮುದ್ರೆ ಬಳಿಕ ಜಾರಿ

ನವದೆಹಲಿ, ಏ.4– ಲೋಕಸಭೆಯಲ್ಲಿ ಸುಗಮವಾಗಿ ಅಂಗೀಕಾರ ಗೊಂಡಿದ್ದ ವಕ್ಫ್(ತಿದ್ದುಪಡಿ) ಮಸೂದೆಯು ಮತ್ತೊಂದು ಮ್ಯಾರಾಥಾನ್ ಚರ್ಚೆಯ ಬಳಿಕ ಶುಕ್ರವಾರ ಬೆಳಗಿನ ಜಾವ ರಾಜ್ಯಸಭೆಯಲ್ಲಿ ಅಂಗೀಕಾರ ಗೊಂಡಿದೆ. ರಾಜ್ಯಸಭೆಯಲ್ಲಿ ಮಸೂದೆಯ ಪರವಾಗಿ 128 ಮತ್ತು ವಿರುದ್ಧ ವಾಗಿ 95 ಮತಗಳು ಬಿದ್ದಿವೆ. ರಾಷ್ಟ್ರಪತಿ ಅಂಗೀಕಾರ ಪಡೆಯುವುದಷ್ಟೇ ಬಾಕಿ.

ಕಾಂಗ್ರೆಸ್ ಮತ್ತು ಬಿಜೆಪಿಯಿಂದ ಸಮಾನ ಅಂತರವನ್ನು ಕಾಯ್ದು ಕೊಂಡಿರುವ ನವೀನ್ ಪಟ್ನಾಯಕ್ ನೇತೃತ್ವದ ಬಿಜು ಜನತಾ ದಳ (ಬಿಜೆಡಿ) ವು ಮತದಾನಕ್ಕೆ ಕೆಲವೇ ಗಂಟೆಗಳ ಮುನ್ನ ತಮ್ಮ ಆತ್ಮಸಾಕ್ಷಿಯಂತೆ ಮತಚಲಾಯಿಸಲು ರಾಜ್ಯಸಭೆಯಲ್ಲಿನ ತನ್ನ ಏಳು ಸದಸ್ಯರಿಗೆ ಕರೆ ನೀಡಿತ್ತು.

ರಾಜ್ಯಸಭೆಯಲ್ಲಿ ವಾದಗಳು ನಿರೀಕ್ಷಿತ ರೀತಿಯಲ್ಲಿಯೇ ಇದ್ದವು. ಚರ್ಚೆಯನ್ನು ಆರಂಭಿಸಿದ ಅಲ್ಪಸಂಖ್ಯಾತರ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು ಮಸೂದೆಯು ಮುಸ್ಲಿಮರ ಹಿತಾಸಕ್ತಿಗಳಿಗೆ ಹಾನಿಯನ್ನುಂಟು ಮಾಡಲಿದೆ ಎಂಬ ಆರೋಪಗಳನ್ನು ತಳ್ಳಿ ಹಾಕಿದರು. ವಕ್ಫ್ ಮಂಡಳಿಯ ನಿರ್ವಹಣೆ, ರಚನೆಯಲ್ಲಿ ಸಂಪೂರ್ಣವಾಗಿ ಮುಸ್ಲಿಮರೇ ಇರುತ್ತಾರೆ ಮತ್ತು ಫಲಾನುಭವಿಗಳೂ ಅವರೇ ಆಗಿರುತ್ತಾರೆ. ಹೀಗಾಗಿ ಮಂಡಳಿಯಲ್ಲಿ ಮುಸ್ಲಿಮೇತರರು ಹಸ್ತಕ್ಷೇಪ ಮಾಡಲು ಸಾಧ್ಯವಿಲ್ಲ ಎಂದು ಪ್ರತಿಪಾದಿಸಿದರು.

ಮಸೂದೆಯು ಧರ್ಮದ ಕುರಿತಾಗಿಲ್ಲ, ಆದರೆ ಆಸ್ತಿ ಮತ್ತು ಅದರ ನಿರ್ವಹಣೆಯ ಕುರಿತಾಗಿದೆ. ಭ್ರಷ್ಟಾಚಾರವನ್ನು ಬೇರು ಸಹಿತ ಕಿತ್ತು ಹಾಕುವ ಗುರಿಯನ್ನು ಹೊಂದಿದೆ ಎಂದು ಒತ್ತಿ ಹೇಳಿದ ರಿಜಿಜು, ಈಗ ಆಸ್ತಿಯನ್ನು ■6ನೇ ಪುಟಕ್ಕೆ

ಅನ್ವರ್ ಮಾಣಿಪ್ಪಾಡಿಗೆ ಬೆದರಿಕೆ ಕರೆ

ಮಂಗಳೂರು, ಏ.4– ವಕ್ಫ್ ಬಿಲ್ ಅಂಗೀಕಾರ ಆಗಿರುವ ಹಿನ್ನೆಲೆಯಲ್ಲಿ ವಕ್ಫ್ ಅಕ್ರಮದ ಬಗ್ಗೆ ವರದಿ ತಯಾರಿಸಿದ್ದ ಅಲ್ಪಸಂಖ್ಯಾತ ಆಯೋಗದ ಮಾಜಿ ಅಧ್ಯಕ್ಷ ಅನ್ವರ್ ಮಾಣಿಪ್ಪಾಡಿಗೆ ಬೆದರಿಕೆ ಕರೆಗಳು ಬಂದಿವೆ.

ಕಳೆದ ಎರಡು ಮೂರು ದಿನಗಳಿಂದ ನಿರಂತರ ಇಂಟರ್‌ನೆಟ್ ಕಾಲ್ ಮೂಲಕ ಬೆದರಿಕೆ ಬರುತ್ತಿದೆ. ಕನ್ನಡ, ಇಂಗ್ಲಿಷ್, ಉರ್ದು, ಮರಾಠಿ ಭಾಷೆ ಗಳಲ್ಲಿ ಬೆದರಿಕೆ ಹಾಕುತ್ತಿದ್ದಾರೆ. ನಿನ್ನನ್ನು ಬಿಡುವುದಿಲ್ಲ, ನಿನ್ನ ವರದಿಯಿಂದ ತೊಂದರೆಯಾಗಿದೆ ಅನ್ನೋ ಕರೆಗಳು ಬರುತ್ತಿವೆ ಎಂದು ಅನ್ವರ್ ತಿಳಿಸಿದ್ದಾರೆ.

ಬೆದರಿಕೆ ಕರೆ ಬಗ್ಗೆ ಮಾಧ್ಯಮದ ಜೊತೆ ಮಾತನಾಡಿದ ಅವರು, ನೀನು ಬಹಳಷ್ಟು ನಾಯಕರು, ವ್ಯಕ್ತಿಗಳ ವಿರುದ್ಧ ತಪ್ಪು ಮಾಹಿತಿ ಕೊಟ್ಟಿದ್ದೀಯಾ. ಎಲ್ಲರೂ ನೊಂದಿದ್ದಾರೆ. ಯಾರು ಕೂಡ ನಿನ್ನನ್ನು ಕ್ಷಮಿಸಲ್ಲ. ನಿಮ್ಮನ್ನು ಮುಗಿಸುತ್ತೇವೆ ಎಂದು ಬೆದರಿಕೆ ಹಾಕಿದ್ದಾರೆ. ನನ್ನ ವರದಿಯಲ್ಲಿ ಮಲ್ಲಿಕಾರ್ಜುನ್ ಖರ್ಗೆ ಅವರ ಹೆಸರನ್ನು ಉಲ್ಲೇಖಿಸಿದ್ದೇನೆ. ಕಲಬುರಗಿಯಲ್ಲಿ ದೊಡ್ಡ ದೊಡ್ಡ ಮಾಲ್, ಬಿಲ್ಡಿಂಗ್‌ಗಳಿವೆ. ಅವರ ಹೆಸರಲ್ಲಿ ಅಲ್ಲದಿದ್ದರೂ, ಬೇರೆಯವರ ಹೆಸರಲ್ಲಿ ಒತ್ತುವರಿಯಾಗಿದೆ. ಬಹುಪಾಲು ಬೇನಾಮಿ ಆಸ್ತಿ ಎಂದು ತಿಳಿಸಿದ್ದಾರೆ.

ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಸುದೀರ್ಘ ಚರ್ಚೆಯೊಂದಿಗೆ ವಕ್ಫ್ ತಿದ್ದುಪಡಿ ಮಸೂದೆ ಅಂಗೀಕಾರ ಆಗಿದೆ. ಚರ್ಚೆ ವೇಳೆ ಕರ್ನಾಟಕದ ವಕ್ಫ್ ಒತ್ತುವರಿ ಕುರಿತು ಅನ್ವರ್ ಮಾಣಿಪ್ಪಾಡಿ ವರದಿಯನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಪ್ರಸ್ತಾಪಿಸಿದ್ದರು. ಮಾಣಿಪ್ಪಾಡಿ ಅವರ ವರದಿ ಉಲ್ಲೇಖಿಸಿ ವಿಪಕ್ಷಗಳಿಗೆ ಟಾಂಗ್ ಕೊಟ್ಟಿದ್ದರು.

ಕೊಡಗು ಮೂಲದ ಬಿಜೆಪಿ ಕಾರ್ಯಕರ್ತ ವಿನಯ್ ಸೋಮಯ್ಯ ಆತ್ಮಹತ್ಯೆ

ಶಾಸಕರಾದ ಎ.ಎಸ್.ಪೊನ್ನಣ್ಣ, ಮಂತರ್‌ಗೌಡ, ಕಾಂಗ್ರೆಸ್ ಮುಖಂಡ ತೆನ್ನೀರಾ ಮೈನಾ ನನ್ನ ಸಾವಿಗೆ ಕಾರಣ; ನನ್ನ ಮೇಲೆ ರೌಡಿಶೀಟ್ ಓಪನ್ ಮಾಡುವ ಹುನ್ನಾರ ನಡೆಸಿದವರಿಗೆ ಶಿಕ್ಷೆಯಾದರೆ ನನ್ನ ಸಾವಿಗೆ ನ್ಯಾಯ ಸಿಗುತ್ತೆ; ಡೆತ್‌ನೋಟ್ ಸಂದೇಶ

ಬೆಂಗಳೂರು, ಏ.4(ಕೆಎಂಶಿ)– ತಮ್ಮ ಸಾವಿಗೆ ವಿರಾಜಪೇಟೆ ಶಾಸಕ ಎ.ಎಸ್. ಪೊನ್ನಣ್ಣ, ಮಡಿಕೇರಿ ಶಾಸಕ ಮಂತರ್ ಗೌಡ ಮತ್ತು ಕಾಂಗ್ರೆಸ್ ಮುಖಂಡ ತೆನ್ನೀರಾ ಮೈನಾ ಕಾರಣ ಎಂದು ಕೊಡಗು ಮೂಲದ ಬಿಜೆಪಿ ಕಾರ್ಯಕರ್ತ ವಿನಯ್ ಸೋಮಯ್ಯ ಡೆತ್‌ನೋಟ್ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಡೆದಿದೆ.

ನಗರದ ಎಲೆಕ್ಟ್ರಾನಿಕ್ಸ್ ಸಿಟಿಯಲ್ಲಿ ಈ ಘಟನೆ ನಡೆದಿದ್ದು, ಆತ್ಮಹತ್ಯೆಗೂ ಮುನ್ನ ಸಾಮಾಜಿಕ ಜಾಲತಾಣದಲ್ಲಿ ಡೆತ್ ನೋಟ್ ಪೋಸ್ಟ್ ಮಾಡಿದ್ದು, ರಾಜಕೀಯ ಪ್ರೇರಿತವಾಗಿ ಎಫ್‌ಐಆರ್ ದಾಖಲಿಸಿದ್ದಲ್ಲದೇ ಜಾಮೀನು ಪಡೆದು, ಎಫ್‌ಐಆರ್‌ಗೆ ಹೈಕೋರ್ಟ್ ತಡೆಯಾಜ್ಞೆ ನೀಡಿದ್ದರೂ ಪೊಲೀಸರು ನೀಡಿದ ಕಿರುಕುಳ ಹಾಗೂ ಸಾಮಾಜಿಕ ಜಾಲತಾಣದಲ್ಲಿ ತಮ್ಮನ್ನು ಕಿಡಿಗೇಡಿ ಎಂದು ಬಿಂಬಿಸಿದ್ದರಿಂದ ಮನನೊಂದು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಾಗಿ ವಿನಯ್ ಸೋಮಯ್ಯ ಡೆತ್ ನೋಟ್‌ನಲ್ಲಿ ತಿಳಿಸಿದ್ದರು. ತಮ್ಮ ಮೇಲಿನ ಕಿರುಕುಳಕ್ಕೆ ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ, ಮಡಿಕೇರಿ ಶಾಸಕ ಮಂತರ್‌ಗೌಡ ಮತ್ತು ಕಾಂಗ್ರೆಸ್ ಮುಖಂಡ ತೆನ್ನೀರಾ ಮೈನಾ ಕಾರಣ ಎಂದು ಅವರು ಆರೋಪಿಸಿದ್ದಾರೆ.



ವಿನಯ್ ಸೋಮಯ್ಯ

ಇವರು ರಾಜಕೀಯ ದ್ವೇಷದಿಂದ ನಮ್ಮ ಬದುಕಿನೊಂದಿಗೆ ಆಟವಾಡಿದ್ದಾರೆ. ನನ್ನ ಮೇಲೆ ಎಫ್‌ಐಆರ್ ದಾಖಲಿಸಿ ಕಿಡಿಗೇಡಿ ಎಂದು ಕೊಡಗು ಜಿಲ್ಲೆಯಲ್ಲಿ ನನ್ನ ಬಗ್ಗೆ ಅಪಪ್ರಚಾರ ಮಾಡಿದ್ದಾರೆ ಎಂದು ದೂರಿರುವ ವಿನಯ್, ■6ನೇ ಪುಟಕ್ಕೆ

ಕಾಂಗ್ರೆಸ್ ಮುಖಂಡನ ವಿರುದ್ಧ ಎಫ್‌ಐಆರ್

ಬೆಂಗಳೂರು, ಏ.4– ಮಡಿಕೇರಿಯ ಬಿಜೆಪಿ ಕಾರ್ಯಕರ್ತ ವಿನಯ್ ಸೋಮಯ್ಯ ಆತ್ಮಹತ್ಯೆ ಸಂಬಂಧ ಕೊಡಗಿನ ಕಾಂಗ್ರೆಸ್ ಮುಖಂಡ ತೆನ್ನೀರ ಮೈನಾ ವಿರುದ್ಧ ಹೆಣ್ಣೂರು ಠಾಣೆ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ. ಮೃತನ ಸಹೋದರ ಜೀವನ್ ಎಂಬವರು ನೀಡಿದ ದೂರಿನ ಮೇರೆಗೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಎಫ್‌ಐಆರ್‌ನಲ್ಲೇನಿದೆ: ವಿನಯ್ ಖಾಸಗಿ ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದರು. ಪತ್ನಿ ಹಾಗೂ ಒಂದು ಹೆಣ್ಣು ಮಗುವಿದೆ. ಸದಾ ಸಾಮಾಜಿಕ ಚಟುವಟಿಕೆಯಲ್ಲಿ ಕ್ರಿಯಾಶೀಲರಾಗಿದ್ದರು. ಇದಕ್ಕಾಗಿ ಕೊಡಗಿನ ಸಮಸ್ಯೆಗಳು ಹಾಗೂ ಪರಿಹಾರಗಳು ಎಂಬ ಹೆಸರಿನಲ್ಲಿ ವಾಟ್ಸಪ್ ಗ್ರೂಪ್ ರಚಿಸಲಾಗಿತ್ತು. ಈ ಗ್ರೂಪ್‌ಗೆ ವಿನಯ್ ಸಹ ಅಡ್ಮಿನ್ ಆಗಿದ್ದರು. ಕಳೆದ ಫೆಬ್ರವರಿಯಲ್ಲಿ ತೆನ್ನೀರಾ ಮಹಿನಾ ಎಂಬುವರು ವಾಟ್ಸಪ್ ಗ್ರೂಪ್ ಅಡ್ಮಿನ್ ಆದ ತನ್ನ ಮೇಲೆ ಸುಳ್ಳು ಪ್ರಕರಣ ದಾಖಲಿಸಿದ್ದಾರೆ. ಈ ಸಂಬಂಧ ಹೈ ಕೋರ್ಟ್‌ನಲ್ಲಿ ಪ್ರಕರಣಕ್ಕೆ ತಡೆಯಾಜ್ಞೆ ■6ನೇ ಪುಟಕ್ಕೆ

ಮೈಸೂರು ಮಿತ್ರ

ಶನಿವಾರ 5 ಏಪ್ರಿಲ್ 2025

ವಿಶ್ವ ಕಿಡ್ನಿ ದಿನಾಚರಣೆ ಅಂಗವಾಗಿ ನಾಳೆ ಸಿಗ್ಮಾದಲ್ಲಿ ಉಚಿತ ಮೂತ್ರಪಿಂಡ ತಪಾಸಣಾ ಶಿಬಿರ



ಸುದ್ದಿಗೋಷ್ಠಿಯಲ್ಲಿ ಆಸ್ಪತ್ರೆಯ ನಿರ್ದೇಶಕ ಡಾ.ಕೆ.ಎಂ.ಮಾದಪ್ಪ ಮಾತನಾಡಿದರು.

ಮೈಸೂರು, ಏ.4(ಜಿಎ)–ವಿಶ್ವ ಕಿಡ್ನಿ ದಿನಾಚರಣೆ ಅಂಗವಾಗಿ ಸಿಗ್ಮಾ ಆಸ್ಪತ್ರೆಯ ವತಿಯಿಂದ ಏ.6 ರಂದು ಉಚಿತ ಮೂತ್ರ ಪಿಂಡ ಆರೋಗ್ಯ ತಪಾಸಣಾ ಶಿಬಿರವನ್ನು ನಗರದ ಸರಸ್ವತಿಪುರಂನಲ್ಲಿರುವ ಸಿಗ್ಮಾ ಆಸ್ಪತ್ರೆಯ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಆಸ್ಪತ್ರೆಯ ನಿರ್ದೇಶಕ ಡಾ.ಕೆ.ಎಂ.ಮಾದಪ್ಪ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಿಗ್ಗೆ 8 ಗಂಟೆಗೆ ಶಿಬಿರ ಆರಂಭಗೊಳ್ಳಲಿದ್ದು, ಬೆಳಿಗ್ಗೆ 10ಕ್ಕೆ ಕಿಡ್ನಿ ದಾನಿಗಳಿಗೆ ಸನ್ಮಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಮುಖ್ಯ ಅತಿಥಿಯಾಗಿ ಮೈಸೂರು ರಾಜವಂಶಸ್ಥರಾದ ಪ್ರಮೋದ ದೇವಿ ಒಡೆಯರ್, ಶಾಸಕ ಕೆ.ಹರೀಶ್ ಗೌಡ ಪಾಲ್ಗೊಳ್ಳಲಿದ್ದಾರೆ. ಮಧ್ಯಾಹ್ನ 2 ರವರೆಗೆ ಶಿಬಿರ ನಡೆಯಲಿದೆ ಎಂದರು.

ಶಿಬಿರದಲ್ಲಿ ತಜ್ಞ ವೈದ್ಯರಿಂದ ಸಮಾಲೋಚನೆ, ಮೂತ್ರ ಪರೀಕ್ಷೆ, ಬಿಪಿ, ಶುಗರ್ ಪರೀಕ್ಷೆ, ಅಗತ್ಯವಿದ್ದಲ್ಲಿ ಹಿಮೋಗ್ಲೋಬಿನ್, ಕಿಡ್ನಿ ಅಲ್ಟ್ರಾಸೌಂಡ್ ಸ್ಕ್ಯಾನ್ ಪರೀಕ್ಷೆ ನಡೆಸಲಾಗುತ್ತದೆ. ಹೊಟ್ಟೆ ನೋವು, ಸೊಂಟ ನೋವು, ಬೆನ್ನು ನೋವು, ಉರಿ ಮೂತ್ರ ಅಥವಾ ಮೂತ್ರದಲ್ಲಿ ರಕ್ತ, ಕಿಡ್ನಿಯಲ್ಲಿ ಕಲ್ಲು, ಪುರುಷ ಬಂಜೆತನ, ಮುಖ ಹಾಗೂ ಕಾಲು ಊತ, ಅಧಿಕ ರಕ್ತದೊತ್ತಡ, ಹಸಿವಾಗದಿರುವುದು, ಅತಿಯಾದ ಸುಸ್ತು ಇತ್ಯಾದಿ ಲಕ್ಷಣಗಳು ಇರುವವರು ಶಿಬಿರದ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸಿಗ್ಮಾ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಎಸ್.ಜ್ಞಾನ ಶಂಕರ್, ನೆಫ್ರಲಾಜಿಸ್ಟ್ ಡಾ. ಅನಿಕೇತ್ ಪ್ರಭಾಕರ್, ಮಕ್ಕಳ ತಜ್ಞರಾದ ಡಾ.ರಾಜೇಶ್ವರಿ ಉಪಸ್ಥಿತರಿದ್ದರು.

ಮೈಸೂರು ಡಿಸಿ ಕಚೇರಿ ಮುಂದೆ ಮದ್ಯ ವರ್ತಕರ ಪ್ರತಿಭಟನೆ

ಚಿಲ್ಲರೆ ಮದ್ಯ ಮಾರಾಟದ ಮೇಲೆ ಶೇ.20ರಷ್ಟು ಲಾಭಾಂಶಕ್ಕೆ ಆಗ್ರಹ



ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಮೈಸೂರು, ಚಾಮರಾಜನಗರ ಜಿಲ್ಲಾ ಮದ್ಯವರ್ತಕರ ಸಂಘದಿಂದ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಿ, ಅಪರ ಜಿಲ್ಲಾಧಿಕಾರಿ ಶಿವರಾಜು ಅವರಿಗೆ ಮನವಿ ಪತ್ರ ನೀಡಿ, ಬೇಡಿಕೆಗಳನ್ನು ಈಡೇರಿಸುವಂತೆ ಕೋರಿದರು.

ಮೈಸೂರು, ಏ.4(ಜಿಎ)– ಚಿಲ್ಲರೆ ಮದ್ಯ ಮಾರಾಟದ ಮೇಲೆ ಕನಿಷ್ಠ ಶೇ.20 ಲಾಭಾಂಶ ನೀಡಬೇಕು ಎಂಬ ಬೇಡಿಕೆ ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಮೈಸೂರು, ಚಾಮರಾಜನಗರ ಜಿಲ್ಲಾ ಮದ್ಯ ವರ್ತಕರ ಸಂಘದಿಂದ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.

ಚಿಲ್ಲರೆ ಮದ್ಯ ಮಾರಾಟದ ಮೇಲೆ ಕನಿಷ್ಠ ಶೇ.20ರಷ್ಟು ಲಾಭಾಂಶ ನೀಡಬೇಕು. ಹೆಚ್ಚುವರಿ ಅಬಕಾರಿ ಶುಲ್ಕ ಕಡಿಮೆ ಮಾಡಬೇಕು. ಯಾವುದೇ ಕಾರಣಕ್ಕೂ ಸನ್ನದು ಶುಲ್ಕ ಹೆಚ್ಚಿಸಬಾರದು. ಕೆಲವೊಂದು ಸನ್ನದುಗಳನ್ನು ಏಲಂ ಮಾಡುವ ಸುದ್ದಿ ಮಾಧ್ಯಮಗಳಲ್ಲಿ ಬರುತ್ತಿದ್ದು, ಯಾವುದೇ ಕಾರಣಕ್ಕೂ ಸನ್ನದುಗಳನ್ನು ಏಲಂ ಮಾಡಬಾರದು. ಸಿ.ಎಲ್ 2ಗಳಲ್ಲಿ ಮದ್ಯ ಸೇವಿಸಲು ಅವಕಾಶ ಕೊಡಬೇಕು. ಸನ್ನದು ಆವರಣದಲ್ಲಿ ನಿಗದಿಪಡಿಸಿದ ನಿರ್ದಿಷ್ಟ ಸ್ಥಳ ಮತ್ತು ಮೊದಲೇ ತಯಾರಿಸಿದ ಆಹಾರಗಳನ್ನು ನೀಡಲು ಅವಕಾಶ ಮಾಡಿ ಕೊಡಬೇಕು ಎಂದು ಆಗ್ರಹಿಸಿದರು.

2005ರಲ್ಲಿ ತಿದ್ದುಪಡಿ ಆಗಿರುವ ಅಬಕಾರಿ ಕಾಯ್ದೆ ಕಲಂ 29ನ್ನು ಪುನರ್ ವಿಮರ್ಶಿಸಿ ತಿದ್ದುಪಡಿ ಮಾಡಬೇಕು. ಎಂಎಸ್ಐಎಲ್ ಸನ್ನದುಗಳ ಕುರಿತು ನ್ಯಾಯಸಮ್ಮತವಾದ ತೀರ್ಮಾನ ಕೈಗೊಳ್ಳುವ ಕುರಿತು ಗ್ರಾಮಾಂತರ ಪ್ರದೇಶಗಳಲ್ಲಿ ಸನ್ನದುಗಳನ್ನು ತೆರೆಯದೇ ನಗರದ ಮಧ್ಯಭಾಗದಲ್ಲಿ ತೆರೆಯುತ್ತಿದ್ದಾರೆ. ನಿರೀಕ್ಷಿತ ವ್ಯವಹಾರ ಇಲ್ಲದೆ ಇರುವ ಸನ್ನದುಗಳನ್ನು ಬೇರೆಡೆಗೆ ಸ್ಥಳಾಂತರಿಸಬೇಕು. ಮಿಲಿಟರಿ ಕ್ಯಾಂಟೀನ್ ಸ್ಟೋರ್‌ಗಳ ಡ್ಯೂಟಿ ಫ್ರೀ ಹೆಸರಿನಲ್ಲಿ ಬರುವ ನಕಲಿ ಮದ್ಯ, ಗೋವಾದಿಂದ ಬರುವ ಮದ್ಯ, ನಕಲಿ ಮದ್ಯ ತಯಾರಕರ ಕಳ್ಳಭಟ್ಟಿ ಕೇಂದ್ರಗಳ ಬಗ್ಗೆ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ಪೊಲೀಸ್ ಇಲಾಖೆ ಹಸ್ತಕ್ಷೇಪ ಮಾಡಿ ಅನಗತ್ಯವಾಗಿ ಸನ್ನದುಗಳನ್ನು ಬಂದ್ ಮಾಡುತ್ತಿದ್ದು, ಸರ್ಕಾರ ಮಧ್ಯೆ ಪ್ರವೇಶಿಸಿ ಇಲಾಖೆಗೆ ಸೂಕ್ತ ನಿರ್ದೇಶನ ನೀಡಬೇಕು ಎಂದು ಒತ್ತಾಯಿಸಿದರು.

ಸಾಮಾನ್ಯ ಮೊಕದ್ದಮೆಗಳಿಗೆ ರಾಜಿ ಮೂಲಕ ಸನ್ನದುದಾರರಿಗೆ ವಿಧಿಸುವ ದಂಡನೆ ಕಡಿಮೆ ಮಾಡಿ ಲೈಸೆನ್ಸ್ ರಹಿತವಾಗಿ ಮದ್ಯ ಮಾರಾಟ ಮಾಡುವವರ ದಂಡನೆ ಹೆಚ್ಚಳ ಮಾಡಬೇಕು. ಡಾಬಾ, ಮಾಂಸಾಹಾರಿ ಹೋಟೆಲ್, ಹಳ್ಳಿಗಳಲ್ಲಿ ಮದ್ಯ ಮಾರಾಟ ಮಾಡುವುದನ್ನು ನಿಯಂತ್ರಿಸಲು ಕಠಿಣ ಕಾನೂನು ರೂಪಿಸಬೇಕು. ಮದ್ಯ ಮಾರಾಟದ ವೇಳೆಯನ್ನು ಬದಲಾಯಿಸಿ ಬೆಳಗ್ಗೆ 9 ರಿಂದ ರಾತ್ರಿ 12 ರವರೆಗೆ ವಿಸ್ತರಿಸಬೇಕೆಂದು ಮನವಿ ಮಾಡಿದರು.

ನಂತರ ಅಪರ ಜಿಲ್ಲಾಧಿಕಾರಿ ಶಿವರಾಜು ಅವರಿಗೆ ಮನವಿ ಪತ್ರ ನೀಡಿ, ಬೇಡಿಕೆಗಳನ್ನು ಈಡೇರಿಸುವಂತೆ ಕೋರಿದರು. ಪ್ರತಿಭಟನೆಯಲ್ಲಿ ಅಧ್ಯಕ್ಷ ಎಸ್.ಗುರುಸ್ವಾಮಿ, ಪ್ರಧಾನ ಕಾರ್ಯದರ್ಶಿ ಆರ್.ಲಕ್ಷ್ಮಣ್, ಕೆಎಸ್.ಮುರಳಿ, ಎಸ್. ಶ್ರೀಕಾಂತ್, ಪರಮೇಶ್, ಶ್ರೀನಿವಾಸ್, ಎಸ್.ಎನ್. ನಾಗರಾಜ್, ಹೆಚ್.ಎನ್. ಕುಮಾರ್ ಸೇರಿದಂತೆ ಮತ್ತಿತರರು ಪಾಲ್ಗೊಂಡಿದರು.

ಬೆಲೆ ಏರಿಕೆ ಜನರ ಜೀವನ ಚಿಂತಾಜನಕ

ಇಂದು ಮೈಸೂರಲ್ಲಿ ಆಮ್ ಆದ್ಮಿ ಪಕ್ಷದಿಂದ ಪ್ರತಿಭಟನೆ

ಮೈಸೂರು, ಏ.4(ಜಿಎ)– ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಆಡಳಿತ ವೈಫಲ್ಯದಿಂದ ಮಧ್ಯಮ ವರ್ಗದ ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಆಮ್ ಆದ್ಮಿ ಪಕ್ಷದ ನಗರ ಘಟಕದ ಅಧ್ಯಕ್ಷ ಎಂ.ಸೋಮಶೇಖರ್ ಕಿಡಿಕಾರಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಹುರಾಷ್ಟ್ರೀಯ ಕಂಪನಿಗಳ ಸಾಲ ಮನ್ನಾ ಮಾಡುವ ಕೇಂದ್ರ ಸರ್ಕಾರ ಜನ ಸಾಮಾನ್ಯರ ಮೇಲೆ ತೆರಿಗೆ ಹೊರೆ ಹೊರಿಸುತ್ತಿದೆ. ಪೆಟ್ರೋಲ್, ಡೀಸೆಲ್, ಗ್ಯಾಸ್ ದರವನ್ನು ಹೆಚ್ಚಿಸಿದೆ. ಚಿನ್ನದ ಬೆಲೆ ಯಂತೂ ದುಪ್ಪಟ್ಟಾಗಿದೆ. ಇದರ ಜೊತೆಗೆ ರಾಜ್ಯ ಸರ್ಕಾರ ಹಾಲು, ಮೊಸರು, ವಿದ್ಯುತ್, ನೀರು, ಮನೆ ಕಂದಾಯವನ್ನು ಹೆಚ್ಚಿಸಿದೆ. ಇದರಿಂದ ಬಡ, ಮಾಧ್ಯಮ ವರ್ಗದ ಜನರ ಪರಿಸ್ಥಿತಿ ಚಿಂತಾ ಜನಕವಾಗಿದೆ ಎಂದು ಅವರು ಆತಂಕ ವ್ಯಕ್ತಪಡಿಸಿದರು.

ಜನರಿಗೆ ತೆರಿಗೆ ಹೊರೆ ಹೊರಿಸಿ, ದಿನ ಬಳಕೆ ವಸ್ತುಗಳ ಬೆಲೆ ದುಬಾರಿಗೊಳಿಸಿ ಹಿಂಸಿಸುತ್ತಿರುವ ಸರ್ಕಾರ ಶಾಸಕರು ಮತ್ತು ಸಚಿವರ ವೇತನ, ಭತ್ಯೆಯನ್ನು ಹೆಚ್ಚಿಸಿ ಕೊಳ್ಳುತ್ತಿದ್ದಾರೆ. ಇದರಿಂದ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷದವರಿಗೆ ಜನರ ಬಗ್ಗೆ ಕಾಳಜಿ ಇಲ್ಲ ಎಂಬ ಸತ್ಯ ಮನವರಿಕೆಯಾಗುತ್ತದೆ ಎಂದು ತಿಳಿಸಿದರು.

ಮತ್ತೊಂದೆಡೆ ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಮಾಡದೇ ಮೀನಾ ಮೇಷ ಏಣಿಸುತ್ತಿದ್ದಾರೆ. ಇದರಿಂದ ಪಾಲಿಕೆಯಲ್ಲಿ ಜನಪ್ರತಿನಿಧಿಗಳು ಇಲ್ಲದೇ ಯಾವುದೇ ಅಭಿವೃದ್ದಿಗೆ ಕಾಮಗಾರಿ ಗಳು ನಡೆಯುತ್ತಿಲ್ಲ. ಅಧಿಕಾರಿಗಳು ಇಷ್ಟದ ಹಾಗೇ ಕೆಲಸ ಮಾಡುತ್ತಿದ್ದಾರೆ. ಕೂಡಲೇ ರಾಜ್ಯ ಸರ್ಕಾರ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಬೇಕು ಎಂದು ಆಗ್ರಹಿಸಿದರು.

ದಿನ ಬಳಕೆ ವಸ್ತುಗಳ ಬೆಲೆಯನ್ನು ನಿರಂತರವಾಗಿ ಹೆಚ್ಚಿಸುತ್ತಾ ಜನರಿಗೆ ತೊಂದರೆ ಕೊಡುತ್ತಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿರುದ್ಧ ನಗರದ ಟೌನ್ ಹಾಲ್ ಮುಂಭಾಗದಲ್ಲಿ ಏ.5. ರಂದು ಪ್ರತಿಭಟನೆ ಹಮ್ಮಿಕೊಂಡಿದ್ದೇವೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಪಕ್ಷದ ಕಾರ್ಯಕರ್ತರಾದ ಮೊಹಮ್ಮದ್ ಜಾಫರ್, ಸತೀಶ್ ಜಯಶ್ರೀ ಉಪಸ್ಥಿತರಿದ್ದರು.

ಭರತನಾಟ್ಯ, ಯಕ್ಷಗಾನದ ಮೂಲ ಬೇರು ಬಯಲಾಟ

ಜಾನಪದ ಕಲಾವಿದ ಡಾ.ನರಸೇಗೌಡ ಪ್ರತಿಪಾದನೆ



ಮೈಸೂರಿನ ರಂಗಾಯಣದ ಭೂಮಿಗೀತದಲ್ಲಿ ಕರ್ನಾಟಕ ಬಯಲಾಟ ಅಕಾಡೆಮಿ ಶುಕ್ರವಾರ ಆಯೋಜಿಸಿದ್ದ ಮೂಡಲಪಾಯ ಬಯಲಾಟ ಪರಂಪರೆ ಕುರಿತ ವಿಚಾರ ಸಂಕಿರಣದಲ್ಲಿ ಮೂಡಲಪಾಯ ಬಯಲಾಟದಲ್ಲಿ ಕುಣಿತ ಮತ್ತು ಹಾಡುಗಾರಿಕೆ ವಿಷಯ ಕುರಿತು ಜಾನಪದ ಕಲಾವಿದ ಡಾ.ನರಸೇಗೌಡ ಮಾತನಾಡಿದರು.

ಮೈಸೂರು, ಏ.4(ಬಿಎಲ್‌ಯು)– ಮನುಷ್ಯನ ಮೂಲ ಕಲೆಯಾದ ಬಯಲಾಟದಿಂದ ಭರತ ನಾಟ್ಯ, ಯಕ್ಷಗಾನ ಸೇರಿದಂತೆ ಈಗಿನ ಹಲವು ಪ್ರಖ್ಯಾತ ಕಲಾ ಪ್ರಕಾರಗಳು ರೂಪ ಪಡೆದಿವೆ ಎಂದು ಜಾನಪದ ಕಲಾವಿದ ಡಾ.ನರಸೇಗೌಡ ಅಭಿಪ್ರಾಯಪಟ್ಟರು.

ನಗರದ ರಂಗಾಯಣದ ಭೂಮಿಗೀತದಲ್ಲಿ ಕರ್ನಾಟಕ ಬಯಲಾಟ ಅಕಾಡೆಮಿ ಆಯೋಜಿಸಿರುವ ಮೂಡಲಪಾಯ ಬಯಲಾಟ ಪರಂಪರೆ ಕುರಿತ ವಿಚಾರ ಸಂಕಿರಣದಲ್ಲಿ ಮೂಡಲಪಾಯ ಬಯಲಾಟದಲ್ಲಿ ಕುಣಿತ ಮತ್ತು ಹಾಡುಗಾರಿಕೆ ವಿಷಯ ಕುರಿತು ಮಾತನಾಡಿದ ಅವರು, ಭರತನಾಟ್ಯಕ್ಕೆ ಶಾಸ್ತ್ರೀಯ ಸಂಗೀತದ ಮನ್ನಣೆ ಇದೆ. ಆದರೆ ಭರತ ನಾಟ್ಯದ ಮೂಲ ಬೇರು ಬಯಲಾಟವಾಗಿದೆ. ಬಯಲಾಟದಲ್ಲಿ ಭೌತಿಕ ಮಟ್ಟದ ರಚನೆಯಾದ ನಂತರ ಭರತನಾಟ್ಯ ರೂಪ ಪಡೆಯಿತು ಎಂದು ಹೇಳಿದರು. ಬಯಲಾಟವನ್ನು ಒಂದೊಂದು ಪ್ರದೇಶದಲ್ಲಿ ಒಂದೊಂದು ರೀತಿಯ ಕಲಾ ಪ್ರಕಾರದಲ್ಲಿ ವಿಭಿನ್ನ ಹೆಸರಿನಿಂದ ಕರೆಯಲಾಗುತ್ತದೆ. ಜನಪದ ರಂಗಭೂಮಿಯಲ್ಲಿ ಕುಣಿತದಿಂದ ಬಯಲಾಟ ಮತ್ತಷ್ಟು ರಂಗು ಪಡೆಯಿತು ಎಂದು ತಿಳಿಸಿದರು.

ಸೋಮನ ಕುಣಿತ, ಕೋಲಾಟ ಸೇರಿದಂತೆ ಹಲವು ಕಲಾ ಪ್ರಕಾರಗಳು ಬಯಲಾಟದ ಮೂಲ ಬೇರಾಗಿದೆ. ಮನುಷ್ಯನ ಕಲೆ ಆರಂಭವಾಗಿದ್ದೆ ಬಯಲಾಟದಿಂದ. ಮನುಷ್ಯ ಭೌತಿಕ ಹಾಗೂ ರಚನಾತ್ಮಕವಾಗಿ ಬೆಳವಣಿಕೆ ಕಂಡಂತೆ ಸಂಜ್ಞೆ ಮತ್ತು ಮಾತುಗಳಿಂದ ವಿವಿಧ ಕಲಾ ಪ್ರಕಾರಗಳು ರೂಪ ಪಡೆಯಿತು. ಕಾಡು–ಮೇಡು ಅಲೆಯುತ್ತಿದ್ದ ಮನುಷ್ಯ ಕಾಲ ಕ್ರಮೇಣ ಹಲವು ರೀತಿಯ ಕುಣಿತದಿಂದ ವಿವಿಧ ಕಲಾ ಪ್ರಕಾರಗಳಿಗೆ ರೂಪ ನೀಡಿದನು ಎಂದು ಡಾ.ನರಸೇಗೌಡ ಹೇಳಿದರು.

ಮೂಡಲಪಾಯ ಬಯಲಾಟದಲ್ಲಿ ಪಾತ್ರಗಳು ಮತ್ತು ವೇಷಭೂಷಣ ಕುರಿತು ಮಾತನಾಡಿದ ಸಿಂದನೂರಿನ ಕಲಾವಿದ ಡಾ.ಕೆ.ಖಾದಿರ್ ಪಾಷ, ಬಯಲಾಟದ ಹಲವು ರೀತಿಯ ಕಲಾ ಪ್ರಕಾರಗಳಿಂದ ನಮ್ಮ ನಾಡು ಸರ್ವ ಜನಾಂಗದ ಶಾಂತಿಯ ತೋಟವಾಗಿದೆ. ಭಿನ್ನಾಭಿಪ್ರಾಯ, ಗೊಂದಲಗಳಿಗೆ ಬಯಲಾಟ ಸೌಹಾರ್ದತೆಯ ನೆಲೆ ನೀಡಿದೆ. ಆಧುನಿಕತೆಯ ಇಂದಿನ ಸಂದರ್ಭದಲ್ಲಿ ಬಯಲಾಟ ಹೆಚ್ಚು ಬೆಳವಣಿಗೆ ಕಾಣುತ್ತಿದೆ ಎಂದು ಹೇಳಿದರು. ಅಕಾಡೆಮಿಯ ಸದಸ್ಯ ಸಂಚಾಲಕಿ ಪ್ರೊ.ಹೆಚ್.ಆರ್.ಚೇತನ, ಮಹಾರಾಜ ಕಾಲೇಜಿನ ಜಾನಪದ ವಿಭಾಗದ ಪ್ರಾಧ್ಯಾಪಕಿ ಪ್ರೊ.ವಿಜಯಲಕ್ಷ್ಮಿ ಈ ವೇಳೆ ಹಾಜರಿದ್ದರು.

ಮಾದಹಳ್ಳಿಯಲ್ಲಿ ಇಂದಿನಿಂದ ದೇವಸ್ಥಾನಗಳ ಜೀರ್ಣೋದ್ಧಾರ, ಅಂಕಸ್ಥಾಪನೆ, ಕಳಸಾರೋಹಣ ಮಹೋತ್ಸವ

ಮೈಸೂರು, ಏ.4(ಜಿಎ)–ಮೈಸೂರು ಜಿಲ್ಲೆಯ ಜಯಪುರ ಹೋಬಳಿಯ ಮಾದಹಳ್ಳಿ ಗ್ರಾಮದಲ್ಲಿ ಏ.5ರಿಂದ ಏ.7ರವರೆಗೆ ಶ್ರೀ ವೀರಭದ್ರೇಶ್ವರ, ಶ್ರೀ ಮಹದೇಶ್ವರ, ಶ್ರೀ ಬಸವೇಶ್ವರಸ್ವಾಮಿ ಮತ್ತು ಶ್ರೀ ಸಿದ್ದಪ್ಪಾಜಿ ದೇವಸ್ಥಾನಗಳ ಜೀರ್ಣೋದ್ಧಾರ, ಅಂಕ ಸ್ಥಾಪನೆ ಹಾಗೂ ಕಳಸಾರೋಹಣ ಮಹೋತ್ಸವವನ್ನು ಹಮ್ಮಿಕೊಳ್ಳಲಾಗಿದೆ ಎಂದು ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾದಹಳ್ಳಿ ಗ್ರಾಮದಲ್ಲಿ ಏ.5 ಮತ್ತು 6ರಂದು ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನೆರವೇರಲಿದ್ದು, ಏ.7ರಂದು ಬೆಳಿಗ್ಗೆ 10.30ಕ್ಕೆ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ತುಮಕೂರು ಸಿದ್ದಗಂಗಾ ಮಠದ ಶ್ರೀ ಸಿದ್ಧಲಿಂಗ ಸ್ವಾಮೀಜಿ, ಶ್ರೀ ಗುರುಮಲ್ಲೇಶ್ವರ ಮಹಾಸಂಸ್ಥಾನ ದಾಸೋಹ ಮಠದ ಶ್ರೀ ಮಹಾಂತ ಸ್ವಾಮೀಜಿ ಅವರು ಉಪಸ್ಥಿತರಿರಲಿದ್ದು, ಶಾಸಕ ಬಿ.ವೈ.ವಿಜಯೇಂದ್ರ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಶಾಸಕ ಜಿ.ಟಿ.ದೇವೇಗೌಡ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಶ್ರೀ ಕುಂದೂರು ಮಠದ ಡಾ.ಶ್ರೀ ಶರತ್ ಚಂದ್ರ ಸ್ವಾಮೀಜಿ ಅವರು ಉಪನ್ಯಾಸ ನೀಡಲಿದ್ದು, ಶ್ರೀ ಮಹಾಂತೇಶ್ವರ ಮಠದ ಶ್ರೀ ಪರಶಿವಮೂರ್ತಿ ಸ್ವಾಮೀಜಿ ಅವರು ಶ್ರೀ ಬಸವೇಶ್ವರ ಸ್ವಾಮಿ ಭಾವಚಿತ್ರವನ್ನು, ಸಾಲೂರು ಬೃಹನ್ಮಠದ ಡಾ.ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಅವರು ಶ್ರೀ ಮಹದೇಶ್ವರಸ್ವಾಮಿ ಭಾವಚಿತ್ರವನ್ನು ಹಾಗೂ ಶ್ರೀ ಉಕ್ಕಿನಕಂತೆ ಮಠದ ಶ್ರೀ ಸಾಂಬಸದಾಶಿವ ಸ್ವಾಮೀಜಿ ಅವರು ಶ್ರೀ ವೀರಭದ್ರೇಶ್ವರ ಸ್ವಾಮಿ ಭಾವಚಿತ್ರವನ್ನು ಅನಾವರಣ ಗೊಳಿಸಲಿದ್ದಾರೆ. ಮುಖ್ಯ ಅತಿಥಿಯಾಗಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಟಿ.ಎಸ್.ಶ್ರೀವತ್ಸ, ಜಿ.ಡಿ.ಹರೀಶ್‌ಗೌಡ, ವಿಧಾನ ಪರಿಷತ್ ಸದಸ್ಯ ಯತೀಂದ್ರ, ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಮತ್ತಿತರರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾದಹಳ್ಳಿ ಗ್ರಾಮ ಪಂಚಾಯಿತಿ ಸದಸ್ಯ ಎಂ.ಪಿ. ವೀರಭದ್ರಪ್ರಸಾದ್, ಮಾಜಿ ಸದಸ್ಯ ನಂಜುಂಡಸ್ವಾಮಿ, ಅಖಿಲ ಭಾರತ ವೀರಶೈವ ಮಹಾಸಭಾದ ನಿರ್ದೇಶಕ ಡಾ.ಎಂ.ಎಂ. ಮಹದೇವಪ್ಪ, ಜಯಪುರ ಹೋಬಳಿ ವಿಕಾಸ ವೇದಿಕೆ ಅಧ್ಯಕ್ಷ ದಾರಿಪುರ ಡಿ.ಚಂದ್ರಶೇಖರ್, ಟ್ರಸ್ಟ್ ಅಧ್ಯಕ್ಷ ಮಹದೇವಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ನಾಳೆ ಮೈಸೂರಲ್ಲಿ 'ವಚನ ದರ್ಶನ ಮಿಥ್ಯ ವರ್ಸಸ್ ಸತ್ಯ' ಗ್ರಂಥ ಬಿಡುಗಡೆ

ಮೈಸೂರು, ಏ.4(ಜಿಎ)–ಜಾಗತಿಕ ಲಿಂಗಾಯತ ಮಹಾಸಭಾ ಜಿಲ್ಲಾ ಘಟಕದ ವತಿಯಿಂದ ಏ.6ರಂದು ಬೆಳಗ್ಗೆ 11 ಗಂಟೆಗೆ ಶ್ರೀ ಹೊಸಮಠದ ನಟರಾಜ ಸಭಾಂಗಣದಲ್ಲಿ 'ವಚನ ದರ್ಶನ ಮಿಥ್ಯ ವರ್ಸಸ್ ಸತ್ಯ' ಎಂಬ ಗ್ರಂಥ ಬಿಡುಗಡೆ ಕಾರ್ಯಕ್ರಮ ನಡೆಯಲಿದೆ ಎಂದು ಘಟಕದ ಅಧ್ಯಕ್ಷ ಮಹಾದೇವಪ್ಪ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹೊಸಮಠದ ಶ್ರೀ ಚಿದಾ ನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸುವರು. ಡಾ. ಶಿವಾನಂದ ಜಾಮದಾರ ಅಧ್ಯಕ್ಷತೆ ವಹಿಸಲಿದ್ದಾರೆ. ಡಾ. ಶರತ್ ಚಂದ್ರ ಸ್ವಾಮೀಜಿ, ಡಾ. ಮಾತೆ ಬಸವಾಂಜಲಿ ದೇವಿ, ಬಿ.ಕೆ.ನಾಗರಾಜು, ಬ್ಯಾತಹಳ್ಳಿ ಕೆ.ಶಿವಕುಮಾರ ದೂರ ಮತ್ತಿತರರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಬಿ.ಎಂ. ಮರಪ್ಪ, ಮಂಜುನಾಥ, ಜಯಶಂಕರ, ಗಂಗಾಧರ ಸ್ವಾಮಿ ಮತ್ತಿತತರು ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ, ನನಗೆ ಹೊಸ ವರ್ಷಕ್ಕೆ ಏನ್ ಗಿಫ್ಟ್ ಕೊಡ್ತೀರಾ?
ಗಂಡ : ಏನ್ ಬೇಕು ಕೇಳು?
ಹೆಂಡತಿ : ಒಂದು ವರ್ಷ ಪೂರ ಬಾಳಿಕೆ ಬರುವಂತಹ ಗಿಫ್ಟ್ ಕೊಡ್ರಿ!
ಗಂಡ : ಡೈರೆಕ್ಟಾಗಿ ಕೇಳೇ ಕ್ಯಾಲೆಂಡರ್ ಬೇಕು ಅಂತಾ! ಕೊಡಿಸ್ತೀನಿ.

ಮೈಸೂರು ಮಿತ್ರ

ಶನಿವಾರ, 5 ಏಪ್ರಿಲ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ನಮ್ಮವರೇ ನಮ್ಮನ್ನು ತಪ್ಪಾಗಿ ತಿಳಿದುಕೊಂಡಾಗ ಒಬ್ಬಂಟಿಯಾಗಿ ಇರುವುದು ಒಳ್ಳೆಯದು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ತಿನ್ನಲು, ಉಣ್ಣಲು ಇದ್ದರೆ ಯಾವತ್ತೂ ನೆಂಟರು.

ನಿಮ್ಮ ಪತ್ರಗಳು

ಶ್ವಾನಗಳ ವಿಶ್ರಾಂತಿ ಧಾಮ ಹಳೇ ಡಿಸಿ ಕಚೇರಿ!



ಮಾನ್ಯರೆ,

ಮೈಸೂರಿನ ಪ್ರತಿಷ್ಠಿತ ಪಾರಂಪರಿಕ ಕಟ್ಟಡಗಳಲ್ಲೊಂದಾದ ಹಳೇ ಜಿಲ್ಲಾಧಿಕಾರಿಗಳ ಕಚೇರಿ ಕಟ್ಟಡವು ಈಗ ಬಿಕೋ ಎನ್ನುತ್ತಿದ್ದು, ಸದ್ದಿಲ್ಲದಂತೆ ನಿಶ್ಯಬ್ಧವಾಗಿದೆ. ಒಂದು ಕಾಲದಲ್ಲಿ ಕೆಲಸ ಕಾರ್ಯಗಳ ನಿಮಿತ್ತ ಸಾರ್ವಜನಿಕರು ತಮ್ಮ ಗಾಡಿಗಳನ್ನು ನಿಲ್ಲಿಸುವಷ್ಟು ಜಾಗ ಸಿಕ್ಕರೆ ಸಾಕು ಎಂದು ಬರುತ್ತಿದ್ದರು. ಈಗ ಒಂದು ವಾಹನ, ಒಬ್ಬ ವ್ಯಕ್ತಿಯೂ ಕಾಣದಿರುವಷ್ಟು ಖಾಲಿಯಾಗಿದೆ. ಅದರಂತೆಯೇ, ಸರ್ಕಾರಿ ನೌಕರರ ಸುರಕ್ಷತೆಗಾಗಿ ಅಂದು ಭದ್ರತಾ ಪಡೆಗಳು, ಪೊಲೀಸ್ ಸಿಬ್ಬಂದಿಗಳ ಗುಂಪು ಇರುತ್ತಿತ್ತು. ಆದರೆ, ಇಂದು ಆ ಕಟ್ಟಡಕ್ಕೆ ಒಂದು ಸೆಕ್ಯೂರಿಟಿ ಸಹ ಇಲ್ಲದೇ ನಾಯಿಗಳ ಮನೆಯಾಗಿ ಹೋಗಿದೆ. ಹೌದು!! ನಗರದ ಹಳೇ ಡಿಸಿ ಕಚೇರಿಯು ಒಂದು ಕಾಲದಲ್ಲಿ ಜನರಿಂದ ಗಿಜಿಗುಡುತ್ತಿತ್ತು. ಇಂದು ಅದೇ ಕಟ್ಟಡವು ನಾಯಿಗಳಿಗೆ ವಿಶ್ರಾಂತಿಧಾಮವಾಗಿ ಪರಿವರ್ತಿತಗೊಂಡಿದೆ. ಸರ್ಕಾರವು ಕಟ್ಟಡವನ್ನು ಮ್ಯೂಸಿಯಂ ಆಗಿ ರೂಪಾಂತರ ಮಾಡುವ ನಿರ್ಧಾರವು ಸ್ವಾಗತಾರ್ಹವೇ ಸರಿ. ಆದರೆ ಆ ನಿರ್ಣಯವು ಎಂದು ಕಾರ್ಯರೂಪಕ್ಕೆ ಬರುತ್ತದೋ, ಇಲ್ಲವೋ ಎಂಬಂತೆ ಕಾಣಿಸುತ್ತಿದೆ. ಸಧ್ಯಕ್ಕೆ ಈ ಕಟ್ಟಡವನ್ನು ನಾಯಿಗಳ ಗುಂಪೊಂದು ಕಾಯುತ್ತಿದ್ದು, ಮತ್ತೊಂದು ಕಡೆ ಮುಂಜಾನೆ ಸಮಯದಲ್ಲಿ ಓವೆಲ್ ಮೈದಾನದ ಕಡೆಗೆ ಹೋಗುವ ವಾಯುವಿಹಾರಿಗಳಿಗೆ ಹಾಗೂ ದ್ವಿಚಕ್ರ ವಾಹನ ಸವಾರರ ಮೇಲೆ ದಾಳಿ ಮಾಡುತ್ತಿವೆ. ಇದರಿಂದ ಸಾರ್ವಜನಿಕರಿಗೆ ವಿಚಿತ್ರ ತಲೆನೋವು ಎದುರಾಗುವ ಪ್ರಸಂಗ ಬಂದಿದೆ. ಈ ತಲೆನೋವಿಗೆ ಉಪಶಮನ (ಮುಕ್ತಿ) ಎಂದು ಸಿಗುವುದೋ? ಎಂದು ಜನರು ಪರಿತಪಿಸುತ್ತಿದ್ದಾರೆ.

–ಸತೀಶ್ ಅಯ್ಯಂಗಾರ್, ಮೈಸೂರು.

ಮ್ಯಾಜಿಕ್ ಆಟೋದ ಫುಟ್‌ಬೋರ್ಡ್‌ನಲ್ಲಿ ನಿಂತು ಪ್ರಯಾಣ, ಅಪಾಯ ಖಚಿತ



ಮಾನ್ಯರೆ,

ಹುಣಸೂರು ಮುಖ್ಯ ರಸ್ತೆಯಲ್ಲಿ ಬರುವ ಇಲವಾಲ, ಬೆಳವಾಡಿ, ಹೂಟಗಳ್ಳಿ, ಹಿನಕಲ್ ಸೇರಿದಂತೆ ಮೈಸೂರು ನಗರದೊಳಗೂ ಸಂಚರಿಸುವ ಟಾಟಾ ಕಂಪನಿಯ ಮ್ಯಾಜಿಕ್ ಆಟೋ ಚಾಲಕರು, ಸಾರ್ವಜನಿಕರು ಹೇಳಿದ ಜಾಗಕ್ಕೆ ಬಿಟ್ಟು, ಇಂತಿಷ್ಟು ಹಣ ಪಡೆದು ದಿನನಿತ್ಯ ಅಷ್ಟೋ ಇಷ್ಟೋ ಬಾಡಿಗೆ ದುಡಿಯುತ್ತಿದ್ದಾರೆ. ಇವರುಗಳಲ್ಲಿ ಕೆಲವು ಚಾಲಕರು ಆಟೋ ಪೂರ್ತಿ ಭರ್ತಿಯಾಗಿದ್ದರೂ, ದುಡ್ಡಿನ ದುರಾಸೆಗೆ ಬಿದ್ದು ಜನರನ್ನು ಈ ರೀತಿ (ಚಿತ್ರದಲ್ಲಿ ಕಾಣುವಂತೆ) ಫುಟ್ ಬೋರ್ಡ್ ಮೇಲೆ ನಿಲ್ಲಿಸಿಕೊಂಡು ಹೋಗುತ್ತಾರೆ. ಈ ವೇಳೆ ಫುಟ್ ಬೋರ್ಡ್ ಮುರಿದೋ ಅಥವಾ ಹಳ್ಳಕೊಳ್ಳ ಬಂದಾಗ ಕಾಲು ಜಾರಿ ಬಿದ್ದರೆ, ಇವರುಗಳು ಪ್ರಾಣ ಕಳೆದುಕೊಳ್ಳುವ ಸಂಭವವೇ ಹೆಚ್ಚು! ಜೊತೆಗೆ, ಹಿಂದೆ ಬರುವ ವಾಹನ ಸವಾರರಿಗೂ ಅಪಾಯ ಕಟ್ಟಿಟ್ಟ ಬುತ್ತಿ. ಇಷ್ಟೇ ಅಲ್ಲದೆ ಈ ಆಟೋ ಚಾಲಕರಿಗೂ ಕೋರ್ಟು, ಕೇಸು, ಶಿಕ್ಷೆ, ದಂಡ ಹೀಗೆ, ಫುಟ್ ಬೋರ್ಡ್ ಒಂದರಿಂದ ಹಲವಾರು ತೊಂದರೆಗಳು. ಹೀಗಾಗಿ, ಈ ಭಾಗದ ಸಂಚಾರಿ ಪೊಲೀಸರು ಈ ಆಟೋ ಚಾಲಕರಿಗೆ ಫುಟ್ ಬೋರ್ಡ್ ತೆಗೆಸುವಂತೆ ಅಥವಾ ಅದರ ಮೇಲೆ ಜನಗಳನ್ನು ನಿಲ್ಲಿಸದಂತೆ ಕಟ್ಟುನಿಟ್ಟಾಗಿ ತಿಳುವಳಿಕೆ ಹೇಳಿ ಮುಂದಾಗಬಹುದಾದಂತ ಅನಾಹುತಗಳನ್ನು ತಪ್ಪಿಸಬೇಕಿದೆ.

–ಬಿ. ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

ಎಸ್‌ಬಿಐನ ಹಿರಿಯ ಅಧಿಕಾರಿಗಳು ಸಾರ್ವಜನಿಕರಿಗೆ ಅರಿವು ಮೂಡಿಸಬೇಕು

ಮಾನ್ಯರೆ,

ಸರ್ಕಾರಿ ಸ್ವಾಮ್ಯದ, ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಉಳಿತಾಯ ಖಾತೆಯಲ್ಲಿ ಗ್ರಾಹಕರು ತಾವು ಇಟ್ಟಿರುವ ಹಣದಲ್ಲಿ ವ್ಯತ್ಯಾಸವಾಗಿದೆ ಎಂದು ಅನುಮಾನ ವ್ಯಕ್ತಪಡಿಸಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ಕೆಲವು ಖಾಸಗಿ ಟಿವಿ ಚಾನೆಲ್‌ಗಳು ಸಹ ಇದರ ಬಗ್ಗೆ ಸುದ್ದಿ ಪ್ರಸಾರ ಮಾಡಿರುವುದರಿಂದ, ಎಸ್‌ಬಿಐ ಗ್ರಾಹಕರು ನಿದ್ದೆಗೆಡುವಂತೆ ಮಾಡಿದೆ. ಮೈಸೂರು ನಗರದಲ್ಲೇ ಸುಮಾರು 40ಕ್ಕೂ ಹೆಚ್ಚು ಶಾಖೆಗಳನ್ನು ಹೊಂದಿದ್ದು, ಲಕ್ಷಾಂತರ ಗ್ರಾಹಕರು ಕೋಟಿಗಟ್ಟಲೇ ಹಣವನ್ನು ಎಫ್‌ಡಿ ಇಟ್ಟಿದ್ದಾರೆ. ಮೈಸೂರು ವಿಭಾಗ ಒಂದರಲ್ಲೇ ಸುಮಾರು ಎರಡು ಸಾವಿರ ಕೋಟಿ ರೂಪಾಯಿಗಳಷ್ಟು ಎಫ್‌ಡಿ ಹಣ ಇದೆ ಎಂದು ಹೇಳಲಾಗುತ್ತಿದೆ.

ಈ ಸುದ್ದಿ ಪ್ರಸಾರವಾದ ನಂತರ ಎಸ್‌ಬಿಐನಲ್ಲಿ ಅಕೌಂಟ್ ಹೊಂದಿರುವ ಎಲ್ಲಾ ಗ್ರಾಹಕರು ತಮ್ಮ ಸಮೀಪದ ಶಾಖೆಗೆ ಹೋಗಿ ತಮ್ಮ ಅಕೌಂಟ್‌ನಲ್ಲಿರುವ ಹಣವನ್ನು ಖಚಿತಪಡಿಸಿಕೊಳ್ಳುತ್ತಿದ್ದಾರೆ. ಎಸ್‌ಬಿಐನ ಹಿರಿಯ ಅಧಿಕಾರಿಗಳು ಈ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವ ಕೆಲಸ ಮಾಡಬೇಕು. ಈ ಕೂಡಲೇ ಇದು ಹೇಗೆ ಸಾಧ್ಯ ಎಂಬುದರ ಬಗ್ಗೆ ಸೂಕ್ತ ಸ್ಪಷ್ಟನೆ ನೀಡಬೇಕು. ಇಲ್ಲದೇ ಹೋದರೆ, ಸಾರ್ವಜನಿಕರು ಬ್ಯಾಂಕ್‌ಗಳ ಮೇಲೆ ಇಟ್ಟಿರುವ ವಿಶ್ವಾಸವನ್ನೇ ಕಳೆದುಕೊಳ್ಳುತ್ತಾರೆ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಯಾರಿಗ್ರೀ ಹನಿಟ್ರ್ಯಾಪ್... ಹನಿಟ್ರ್ಯಾಪ್....

ಅವಳು ಮ್ಯಾಲ್ ಬಿದ್ಲಂತೆ! ಇವರು ಎತ್ತಿ ಬಡಿದ್ರಂತೆ!!





ಜೆ.ಬಿ.ರಂಗಸ್ವಾಮಿ
ವಿಶ್ರಾಂತ ಪೊಲೀಸ್ ಅಧಿಕಾರಿ, ಮೈಸೂರು
ಮೊ: 9449010009

> ಕಾಲ ಬಂದಾಗ ಹೇಳ್ತೀನಿ... ಸೂಕ್ತ ಸಮಯದಲ್ಲಿ ಬಿಚ್ಚಿಡ್ತೀನಿ... ಇಂತಹ ಲಡಾಸು ಡೈಲಾಗುಗಳನ್ನು ಐವತ್ತು ವರ್ಷಗಳಿಂದ ಕೇಳುತ್ತಲೇ ಬಂದಿದ್ದೇವೆ. ಎಲ್ಲವೂ ಹಾವು ಬಿಡುವ ಆಟ. 'ನೋಡಿ ಸಾಮೀ... ಮುಂಗ್ಸಿಗೆ ಆ(ಹಾ)ವು ಜೋಡಿ ಬಿಡ್ತೀನಿ!' ಹಾವಾಡಿಗ ಬಿಟ್ಟಂಗೆ. ಜನ ನೋಡ್ದಂಗೆ.

ಹನಿಟ್ರ್ಯಾಪ್ ಸುದ್ದಿ ಬಿತ್ತರವಾದ ನಾಲ್ಕಾರು ದಿನದ ನಂತರ ಅರೆ, ಇದ್ರಲ್ಲಿ ಏನೋ ಇರಬಹುದು ಅನ್ನಿಸಿ ಒಂದಷ್ಟು ಟಿಪ್ಪಣಿ ಮಾಡಿದ್ದೆ. ಇತ್ತೀಚಿನ ಬೆಳವಣಿಗೆ ನನ್ನ ಊಹೆಯನ್ನು ನಿಜ ಅಂದಿದೆ. ನಾನೇನು ಭವಿಷ್ಯ ಹೇಳುವ ಕಾಲಜ್ಞಾನಿಯೂ ಅಲ್ಲ. ಇಲಾಖೆಯಲ್ಲಿದ್ದ ಕಾರಣ ಸತ್ಯಾಸತ್ಯತೆಯನ್ನು ನನ್ನಷ್ಟಕ್ಕೆ ವಿಶ್ಲೇಷಿಸಿಕೊಳ್ಳುವ ಹವ್ಯಾಸ ಅಷ್ಟೇ.

ಯಾರ ಮೇಲಾದರೂ ಬಾಯಿಗೆ ಬಂದಂತೆ ಸುಳ್ಳು ಆಪಾದನೆ ಮಾಡುವುದೇನೋ ಸುಲಭ. ಸಾಕ್ಷಿ ಏನಿದೆ ಎಂದರೆ ಒಬ್ಬನದೂ ಉಸಿರಿಲ್ಲ. ಹನಿಟ್ರ್ಯಾಪ್ ಬಗ್ಗೆ ಶಂಖ ಊದಿದ್ದೂ ಊದಿದ್ದೇ. ಯಾವನು ಮಾಡಿಸಿದ್ದ ಎಂಬ ಬಗ್ಗೆ ಮಾತ್ರ ಉತ್ತರವಿಲ್ಲವಂತೆ.

ಕಾಲ ಬಂದಾಗ ಹೇಳ್ತೀನಿ... ಸೂಕ್ತ ಸಮಯದಲ್ಲಿ ಬಿಚ್ಚಿಡ್ತೀನಿ... ಇಂತಹ ಲಡಾಸು ಡೈಲಾಗುಗಳನ್ನು ಐವತ್ತು ವರ್ಷಗಳಿಂದ ಕೇಳುತ್ತಲೇ ಬಂದಿದ್ದೇವೆ. ಎಲ್ಲವೂ ಹಾವು ಬಿಡುವ ಆಟ. 'ನೋಡಿ ಸಾಮೀ... ಮುಂಗ್ಸಿಗೆ ಆ(ಹಾ)ವು ಜೋಡಿ ಬಿಡ್ತೀನಿ!' ಹಾವಾಡಿಗ ಬಿಟ್ಟಂಗೆ. ಜನ ನೋಡ್ದಂಗೆ.

ಸಚಿವ, ಮತ್ತವರ ಮಗ ಇಬ್ಬರೂ ಹನಿಟ್ರ್ಯಾಪ್ ನಡೆದೇ ಹೋಗಿದೆ ಎಂಬಂತೆ ದುಗುಡದಿಂದ ಬೊಬ್ಬಿರಿದರು. ದೂರು ಕೊಡ್ರೀ ಅಂದ್ರೆ ಅದೇಕೆ ಮೀನಾ–ಮೇಷ! ಬೇರೆ ಏನಾದರೂ ಆಚೆ ಬಂದಾವೆಂದೇ!!

ಒಬ್ಬ ಕವಿಯ ಕೈ ಮತ್ತೊಬ್ಬನ ಜೇಬಿನಲ್ಲಿದ್ದಂತೆ ಈ ವ್ಯವಹಾರ. ಅವನದನ್ನು ತೆಗಿತೀನಿ ಅಂದ್ರೆ ಇವನದು ಬಿಚ್ಚಿ ಊರ ಬಾಗಿಲಾಗುತ್ತದೆ. ಸಚಿವನೊಬ್ಬ ಸಾಮಾನ್ಯ ಕಂಪ್ಲೇಂಟ್ ಕೊಡಲು ಅದ್ಹೇಕೆ ನಾಲ್ಕು ದಿನ ತಗೋತಿದ್ದಾರೋ? ದೂರು ಕೊಟ್ಟಿಲ್ಲವಂತೆ. ಮನವಿ ಮಾಡಿದ್ದಾರಂತೆ! ಇದು ಗೃಹಸಚಿವರ ನುಡಿಮುತ್ತು! ಅವರು ಕೊಟ್ಟಿರುವ ದೂರಿಗೆ ಈಗಲೂ FIR ಮೋಕ್ಷ ಸಿಕ್ಕಿಲ್ಲ. ಅಂತೂ ಈ ಪ್ರಹಸನವೆಲ್ಲಾ ಡ್ರ್ಯಾಪ್ ಅನ್ನಿಸಿದೆ.

ಹಿಂದೆ ರವಿ ಬೆಳಗೆರೆ ಮೇಲೆ ನಾನಾ ಬಗೆಯ ದುಷ್ಟ ಆಪಾದನೆ ಮಾಡಿ ನಂತರ ಸುಳ್ಳೆಂದಾಯಿತು. ಈವತ್ತಿಗೂ ಆ ಕಳಂಕ ಹಾಗೇ ಉಳಿದಿದೆ.

ಸೌಜನ್ಯ ನೆಪದ ನಕಲಿ ಹೋರಾಟಗಾರರು ಮೊಬೈಲ್ ತೋರಿಸಿಕೊಂಡು ತಮ್ಮಲ್ಲಿ ಸಾಕ್ಷಿ ಇದೆ, ಭಾರೀ ಸಾಕ್ಷಿ ಇದೆ. ಇದು ಹೊರಬಿದ್ದರೆ ಮತ್ತೆ ಅನೇಕ ಕೊಲೆಗಳಾಗುತ್ತೆ! ಎಂದು ಥಕಥಕ ಯಕ್ಷಗಾನ ಕುಣಿತ ಮಾಡಿದ್ದೇನು! ಅತ್ಯಾಚಾರ ಮತ್ತು ಘೋರ ಕೊಲೆ ಹೀಗೀಗೇ ನಡೆದಿದೆ ಎಂದು ವೀಡಿಯೋ ಕ್ಲಾಸು ಮಾಡಿ ಚೋಡಿದ್ದೇನು! 12 ವರ್ಷದಿಂದ ಬೊಗಳುತ್ತಾ ಬಂದ ಆಪಾದನೆಗಳೆಲ್ಲವೂ ಶುದ್ಧ ಪಟಾಸು ಎಂಬುದು ಬಟಾ ಬಯಲಾಗಿ ಹೋಯಿತೇ. ಅವರು ವರ್ಷಗಳಿಂದ ಎತ್ತಿದ ನಾನಾ ಆಪಾದನೆಗಳ ಆಳಕ್ಕೆ ಇಳಿದು ಹೋಗಿ ಒಂದೊಂದನ್ನೂ ಪೊಲೀಸರು ತನಿಖೆ ಮಾಡಿದ್ದಾರೆ. ಈ ಪರಿ ಮಾಡಿದ ಒಂದಾದರೂ ಆಪಾದನೆ ನಿಜವಾಗಬಾರದಿತ್ತೇ?

ಇರಲಿ, ಅಪ್ಪ ಮಕ್ಕಳ ಹನಿಟ್ರ್ಯಾಪ್‌ನಲ್ಲೇನಾದರೂ ನಿಜವಿರಬಹುದೇ ಎಂದು ನೋಡಿದರೆ ಅದೂ ಹರಿಕತೆ, ದಾಸರ ಬೊಂಬಡಾ ಕಥೆಯಂತಿದೆ. ಸಚಿವರು, ಮಹಾ ನಾಯಕನೇ ಹಿಂದಿದ್ದಾನೆ ಎಂಬ ಮಂತ್ರ ಉದುರಿಸುತ್ತಾರೆಯೇ ವಿನಃ ಯಾವ ಬಗೆಯಲ್ಲಿ ಅವನೇ ಷಡ್ಯಂತ್ರ ಮಾಡಿದ್ದ ಎಂಬುದನ್ನು ಹೇಳಿಲ್ಲ. ಲೇಡಿ ಲಾಯರ್ ಹನಿಟ್ರ್ಯಾಪ್ ಮಾಡಲು ಬಂದಿದ್ದಳೋ ಅಥವಾ ಟ್ರ್ಯಾಪಿಗೆ ಇವರೇ ಹಾತೊರೆದು ನುಗ್ಗಲು ಸಿದ್ಧರಾಗಿದ್ದರೋ ಎಂಬ ಚರ್ಚೆ ತುಮಕೂರಿನಲ್ಲಿ ನಡೆಯುತ್ತಿದೆ.

ಇನ್ನು ಪುಷ್ಪಳ ಸುಪಾರಿ ಕೊಲೆಯ ಸುದ್ದಿ. ಮೊದಲಿಗೆ ಅವಳ ಪ್ರಿಯತಮ ಜೈಪುರ ಸೋಮನೇ ಸುಪಾರಿ ಬಗ್ಗೆ ಹೇಳಿದ್ದನೆಂಬ ಮಾತು. ಈಗ ಅದು ಅವನ ಇನ್ನೊಬ್ಬ ಗೆಳತಿ ಪುಷ್ಪಳಿಗೆ ಹೇಳಿದ್ದಂತೆ. ಮೊದಲೇ ಹೇಳಲಿಲ್ವಾ ಬರೀ ಅಂತೆ–ಕಂತೆ. ಹೋಗಲಿ ಇವಳೇಕೆ ಸುಪಾರಿ ಸುದ್ದಿಯನ್ನು ರಾಕೇಶನಿಗೆ ಹೇಳಿದಳಂತೆ?

ಜೈಪುರ ಸೋಮ ಹಿಂದೆ ಇವಳಿಗೆ 35 ಲಕ್ಷಕ್ಕೆ ಉಂಡೆ ನಾಮ ತಿಕ್ಕಿದ್ದನಂತೆ. ಅದರ ಸೇಡಿಗೆ ಈ ಕತೆಯನ್ನು ಡಿಸೆಂಬರ್‌ನಲ್ಲಿ ರಾಕೇಶನಿಗೆ ಹೇಳಿದ್ದಾಳೆ. ಅಂದರೆ ಇದರಲ್ಲಿ ಅವಳು ಯಾವ ಅಂಶದಲ್ಲೂ ನೇರ ಸಾಕ್ಷಿಯಲ್ಲ. ಇದೂ ಬರೀ ಅಂತೆ–ಕಂತೆ ಇಟ್ಟುಕೊಂಡ ಅಡುಗೂಲಜ್ಜಿ. ಅವಳ ಹೇಳಿಕೆ ಆಧರಿಸಿ ಪೊಲೀಸರು ತನಿಖೆ ಮಾಡಬೇಕು.

ಕೇಸು ಕೋರ್ಟ್‌ನಲ್ಲಿ ನಿಲ್ಲ ಬಲ್ಲುದೇ?

ಶಾಸಕನನ್ನು ಬರ್ತ್ ಡೇ ದಿನ ಹತ್ಯೆ ಮಾಡಲು ಜೈಪುರದಿಂದ ಇಬ್ಬರು ನಟೋರಿಯಸ್ ರೌಡಿಗಳು ಬಂದಿದ್ದರಂತೆ. ಇನ್ನಿಬ್ಬರು ಮದ್ರಾಸಿನಿಂದ ಕೂಲಿಗಳಂತೆ ಬಂದಿದ್ದರಂತೆ. ಸಾಧಾರಣ ಬರ್ತ್ ಡೇ ಪಾರ್ಟಿ. ಹೆಚ್ಚೂ ಜನರಿಲ್ಲ. ಹೇರಳ ಅವಕಾಶವಿದ್ದರೂ ಕೂದಲೂ ಕೊಂಕದಂತೆ ಅದ್ಹೇಕೆ ಖಾಲಿ ಕೈಲಿ ಹೋದರೋ! ಆ ನಾಲ್ವರು ನಟೋರಿಯಸ್ ಕಿಲ್ಲರ್‌ಗಳು! ಅನುಮಾನ ನಿಮಗೂ ಬರಬಹುದಲ್ವಾ!

ಹತ್ಯೆ ಮಾಡಲು ಸೋಮ 75 ಲಕ್ಷ ಸುಪಾರಿ ಮಾತಾಡಿ ಐದು ಲಕ್ಷ ಅಡ್ವಾನ್ಸ್ ಪಡೆದಿದ್ದನಂತೆ. ಹತ್ತಿರ ಹತ್ತಿರ ಆರು ತಿಂಗಳಾಗುತ್ತ ಬಂದರೂ ಹತ್ಯೆ ಮಾಡಲು ಅದ್ಹೇಕೆ ಆಗಿಲ್ಲವೋ?! ಅಷ್ಟೊಂದು ರಣ ರಕ್ಷಣಾ ಭದ್ರತೆಯಲ್ಲಿ ಶಾಸಕ ಇದ್ದಾನೆಯೇ? ನುರಿತ ನೈಪುಣ್ಯತೆಯುಳ್ಳ ಪ್ರೊಫೆಷನಲ್ ಕಿಲ್ಲರ್‌ಗಳಿಗೆ ಬಿಗಿ ಭದ್ರತೆ ಇಲ್ಲದೆ ಬೀಡುಬೀಸಾಗಿ ಓಡಾಡಿಕೊಂಡಿರುವ ಓರ್ವ ವ್ಯಕ್ತಿಯನ್ನು ಮುಗಿಸುವುದು ಅಷ್ಟೊಂದು ತ್ರಾಸದಾಯಕವೇ? ಎಂಬುದು ರಾಜಕೀಯ ಪಡಸಾಲೆಯ ಚರ್ಚೆ.

ಅಂತೂ ಪಟಾಸು ಕತೆಗಳ ಪ್ರೊಡಕ್ಷನ್ ಪ್ರೊಸೆಷನ್ ಪ್ರತಿದಿನ ನಡೆಯುತ್ತಿದೆ. ಪ್ರತಿದಿನ ಏಪ್ರಿಲ್ ಫೂಲ್ ಕತೆಗಳು. ತಕ್ಕಂತೆ ಅರಚುವ ಮಾಧ್ಯಮದವರು.

ಇದನ್ನೆಲ್ಲ ಜನ ಮಂಕುದಿಣ್ಣೆಗಳಂತೆ ನಂಬಬೇಕು!

ಗಂಡನನ್ನು ಕೊಲ್ಲಲು ಹತ್ತು ಲಕ್ಷ... ಇಪ್ಪತ್ತು ಲಕ್ಷಕ್ಕೆ ಸುಪಾರಿ ಕೊಟ್ಟಿದ್ದಳು ಎಂಬ ಸುದ್ದಿ ಪ್ರಸಾರವಾದರೆ ಸಾಕು. ಇರಬಹುದೇನೋ ಎಂದು ಜನ ಸುಮ್ಮನಾಗಬಹುದು. ಆದರದು ಮಾರ್ಕೆಟ್ ರೇಟ್ ಗೊತ್ತಿಲ್ಲದವರ ವ್ಯವಹಾರ!

ಸುದ್ದಿ ಹೀಗಿದ್ದಾಗ ಶಾಸಕನ ಕೊಲೆಗೆ ಎಷ್ಟು ಸುಪಾರಿ ಕೊಟ್ಟಿರಬಹುದು, ಲಕ್ಷ ಲಕ್ಷಗಳಲ್ಲೇ ರೇಟು ಹಾಕಬೇಕಷ್ಟೇ. ಎಲ್ಲೆಂದರಲ್ಲಿ ಒಂಟಿಯಾಗಿ ಸಿಗಬಲ್ಲ ಜಂಕಳು ಮನುಷ್ಯನಿಗೆ ಲಕ್ಷ ಲಕ್ಷ ಸುಪಾರಿ ಕೊಡೋ ಅಗತ್ಯವಿದೆಯೇ! ಅದಕ್ಕಾಗಿ ಜೈಪುರ ಮದ್ರಾಸಿನಿಂದ ಹಂತಕರು ಬರಬೇಕೇ! ಇದೊಂದು ಬಂಡಲ್ ಸುದ್ದಿ ಎಂದು ಯಾರಾದರೂ ಹೇಳಬಹುದು ಎಂದು ಕೆಲವರು ಹರಟೆ ಹೊಡೆಯುತ್ತಿದ್ದಾರೆ.

ಪುಡಾರಿಗಳಿಗೆ ಸಂಬಂಧಿಸಿದ ಸುದ್ದಿ ಎಂದರೆ ಎಲ್ಲವೂ ಭೂತಗನ್ನಡಿಯ ಸುದ್ದಿಗಳೇ. ಪಕ್ಷಾಂತರಕ್ಕೆ ಒಬ್ಬ ಶಾಸಕನ ಬೆಲೆ ಎಷ್ಟು. ಐವತ್ತು ಅರವತ್ತು ಕೋಟಿಯೇ?! ಅಷ್ಟು ಆಮಿಷ ಒಡ್ಡಿದರೂ ಸನ್ಮಾನ್ಯ ಸ್ವಾಸಕರು ಬೇರೆ ಹೋಗಲಿಲ್ಲವಂತೆ!. ಯಾಕೆಂದರೆ ಅವರು ಅಷ್ಟು ಪಕ್ಷದ ನಿಸ್ವಾವಂತ ಶಿಸ್ತಿನ ಸಿಪಾಯಿ. ಇದನ್ನು ಯಾರು ನಂಬುತ್ತಾರೋ ನೀವೇ ಹೇಳಿ. ಕಾರು, ಫ್ಲ್ಯಾನು, ಫೋನು ಕೊಡ್ತೀವಿ ಅಂದ್ರೆ ಸಾಕು, ತುದಿಗಾಲಲ್ಲಿ ನೆಗೆದು ಬರುವ ಶಾಸಕರ ದಂಡೇ ಇದೆ. ಆದರೆ, ಬೆಲೆ ಒಬ್ಬೊಬ್ಬನಿಗೆ ಕೋಟಿ ಕೋಟಿಯಂತೆ! ಆದರೂ ಭದ್ರಾಚಲರಂತೆ ಪಕ್ಷದಲ್ಲೇ ಈ ಸಿಸ್ತಿನ ಸ್ವಾಸಕರು ಉಳಿದಿರುತ್ತಾರಂತೆ. ಇದನ್ನ ನಾವು ನೀವು ನಂಬ ಬೇಕು!.

ಕುವೆಂಪುನಗರ ಪ್ರಥಮ ದರ್ಜೆ ಕಾಲೇಜಲ್ಲಿ ಜಾನಪದ ಉತ್ಸವ

ಸಾಂಪ್ರದಾಯಿಕ ಆಚರಣೆಗೆ ಸಾಕ್ಷಿಯಾದ ವಿದ್ಯಾರ್ಥಿಗಳು, ಬೋಧಕ-ಬೋಧಕೇತರ ಸಿಬ್ಬಂದಿ

ಮೈಸೂರು,ಏ.4(ಎಂಟಿವೈ)– ಮೈಸೂರಿನ ಕುವೆಂಪುನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶುಕ್ರವಾರ ಜಾನಪದ ಲೋಕವೇ ಸೃಷ್ಟಿಯಾಗಿತ್ತು. ಕಾಲೇಜಿನ ವಿದ್ಯಾರ್ಥಿಗಳು ಜಾನಪದದ ಸೊಗಡಿನಲ್ಲಿ ಸಂಭ್ರಮಿಸಿದರು.

ಇಂದು ಬೆಳಗ್ಗೆ 'ನಮ್ಮ ಸಂಸ್ಕೃತಿ ನಮ್ಮ ಹೆಮ್ಮೆ' ಘೋಷಣೆಯೊಂದಿಗೆ ಆಯೋಜಿಸಿದ್ದ 'ಜಾನಪದ ಉತ್ಸವ'ಕ್ಕೆ ಕಾಲೇಜು ಆವರಣ ತಳಿರು ತೋರಣ, ಬಣ್ಣ ಬಣ್ಣದ ರಂಗೋಲಿಯಿಂದ ಸಿಂಗಾರಗೊಂಡಿತ್ತು. ಗಾಡಿ ಬಂಡಿ, ಒನಕೆ, ನೇಗಿಲು, ರಾಗಿಕಲ್ಲು ಫಸಲು ರಾಶಿ, ಮೊರ ಹಾಗೂ ಇನ್ನಿತರ ಜಾನಪದ ಪರಿಕರಗಳನ್ನು ಪ್ರದರ್ಶಿಸಿ, ಸಾಂಪ್ರದಾಯಿಕ ಉತ್ಸವದ ಮೆರಗು ಹೆಚ್ಚಿಸಲಾಗಿತ್ತು. ಕಾರ್ಯಕ್ರಮದ ಅಂಗವಾಗಿ ಪ್ರಾಂಶುಪಾಲರು, ಬೋಧಕ–ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಜಾನಪದ ಶೈಲಿಯಲ್ಲಿ ಪಂಚೆ, ಶರ್ಟು, ಟವೆಲ್, ಮಹಿಳಾ ಸಿಬ್ಬಂದಿ ಹಾಗೂ ವಿದ್ಯಾರ್ಥಿನಿಯರು ಸಾಂಪ್ರದಾಯಿಕ ಶೈಲಿಯ ಉಡುಗೆ ತೊಟ್ಟು ಉತ್ಸವಕ್ಕೆ ಸಂಭ್ರಮದ ಕಳೆ ಕಟ್ಟಿದರು.



ಮೈಸೂರಿನ ಕುವೆಂಪುನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶುಕ್ರವಾರ ಜಾನಪದ ಲೋಕವೇ ಸೃಷ್ಟಿಯಾಗಿತ್ತು. ಕಾಲೇಜಿನ ವಿದ್ಯಾರ್ಥಿಗಳು ಜಾನಪದದ ಸೊಗಡಿನಲ್ಲಿ ಸಂಭ್ರಮಿಸಿದರು.

ಕಾಲೇಜು ಆವರಣದಿಂದ ಸಾಂಪ್ರದಾಯಿಕ ಉಡುಗೆ ಧರಿಸಿದ್ದ ವಿದ್ಯಾರ್ಥಿಗಳು, ಪೂರ್ಣಕುಂಭ ಹೊತ್ತ ವಿದ್ಯಾರ್ಥಿನಿಯರು, ಡೊಳ್ಳು ಕುಣಿತ, ಪೂಜಾ ಕುಣಿತ, ಕಂಸಾಳೆ, ಕೋಲಾಟ, ವೀರಗಾಸೆ ಇನ್ನಿತರ ಜಾನಪದ ಕಲಾ ತಂಡಗಳೊಂದಿಗೆ ವಿವೇಕಾನಂದ ವೃತ್ತದವರೆಗೂ ಮೆರವಣಿಗೆಯಲ್ಲಿ ಸಾಗಿದರು. ಎತ್ತಿನ ಬಂಡಿಯಲ್ಲಿ ಶಾಸಕ ಟಿ.ಎಸ್. ಶ್ರೀವತ್ಸ, ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕ ಡಾ.ಬಿ. ಚಂದ್ರಶೇಖರ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಪ್ರಾಂಶುಪಾಲ ಡಾ.ಪುಟ್ಟರಾಜು, ಐಕ್ಯೂಐಸಿ ಸಂಚಾಲಕ ಡಾ.ಎಸ್.ವಿ. ಮುರಳೀಧರ, ಸಾಂಸ್ಕೃತಿಕ ಸಮಿತಿ ಸಂಚಾಲಕ ಡಾ.ಆರ್.ಗುರುಸ್ವಾಮಿ, ಸಿಡಿಸಿ ಸದಸ್ಯ ಜಗದೀಶ್, ಪತ್ರಾಂಕಿತ ವ್ಯವಸ್ಥಾಪಕ ವಿದ್ಯಾರಣ್ಯ, ಡಾ.ಪಿ. ಬೆಟ್ಟೇಗೌಡ ಹಾಗೂ ಮಹಿಳಾ ಅಧ್ಯಾಪಕರು ಪಾಲ್ಗೊಂಡು ಗಮನ ಸೆಳೆದರು. ಬಳಿಕ ಕಾಲೇಜು ಆವರಣದಲ್ಲಿ ವಿದ್ಯಾರ್ಥಿಗಳು ಬುಗುರಿ, ಗೋಲಿ, ಕುಂಟೆ ಬಿಲ್ಲೆ, ಚೌಕಾಬಾರ, ಅಳುಗುಳಿ ಮಣೆ ಸೇರಿದಂತೆ ಇನ್ನಿತರ ದೇಸಿ ಕ್ರೀಡೆಗಳು, ಗಾದೆ ಸವಾಲ್, ಜನಪದ ಗೀತಗಾಯನ ನಡೆದವು. ಜನಪದ ವಸ್ತುಪ್ರದರ್ಶನ ನಡೆಯಿತು. ದೇಸಿ ಆಹಾರ ಮೇಳದಲ್ಲೂ ಕಾಲೇಜು ವಿದ್ಯಾರ್ಥಿಗಳು ಪಾಲ್ಗೊಂಡು ಗಮನ ಸೆಳೆದರು.

ಸರ್ಕಾರದಿಂದಲೇ ಚಾಲುಕ್ಯ ಇಮ್ಮಡಿ ಪುಲಿಕೇಶಿ ವಿಜಯೋತ್ಸವ ಆಚರಿಸಿ

ಮೈಸೂರು, ಏ.4(ಜಿಎ)– ಕನ್ನಡದ ಹೆಮ್ಮೆಯ ಚಾಲುಕ್ಯ ಅರಸ ಇಮ್ಮಡಿ ಪುಲಿಕೇಶಿ ವಿಜಯೋತ್ಸವವನ್ನು ಏ.4 ರಂದು ಸರ್ಕಾರವೇ ಮುಂದಿನ ವರ್ಷದಿಂದ ಆಚರಿಸಬೇಕು ಎಂದು ಕದಂಬ ಕನ್ನಡ ಸೇನಾ ಕರ್ನಾಟಕ ಒತ್ತಾಯಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸೇನಾ ರಾಜ್ಯಾಧ್ಯಕ್ಷ ಶಿವಕುಮಾರ್ ಈ ವಿಷಯ ತಿಳಿಸಿ, ಚಾಲುಕ್ಯ ರಾಜ ಇಮ್ಮಡಿ ಪುಲಕೇಶಿ ಮತ್ತು ಕದಂಬ ಮಯೂರ ವರ್ಮರ ಪುತ್ಥಳಿಯನ್ನು ವಿಧಾನಸೌಧದ ಮುಂಭಾಗದಲ್ಲಿ ಪ್ರತಿಷ್ಠಾಪಿಸಬೇಕು. ಕರ್ನಾಟಕ ಸರ್ಕಾರದ ಲಾಂಛನದಲ್ಲಿ ಹಿಂದಿ ಭಾಷೆಯಲ್ಲಿರುವ 'ಸತ್ಯಮೇವ ಜಯತೆ' ಯನ್ನು ಕನ್ನಡ ಭಾಷೆಯ ಅಕ್ಷರಗಳಲ್ಲಿ ಬರೆಯಬೇಕು. ರಾಜ್ಯದ ಶಾಲಾ ಕಾಲೇಜುಗಳ ಪಠ್ಯಪುಸ್ತಕಗಳಲ್ಲಿ ಅನ್ಯ ರಾಜ್ಯದ ರಾಜರುಗಳ ಪಾಠಗಳನ್ನು ಕೈಬಿಡಬೇಕು. ತಲಕಾಡು ಗಂಗೋತ್ಸವವನ್ನು ಆಚರಿಸಬೇಕು ಎಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಕದಂಬ ಕನ್ನಡ ಸೇನೆ ಕರ್ನಾಟಕದ ಸಂಸ್ಥಾಪಕ ಕದಂಬ ನಾ.ಅಂಬರೀಷ, ಜಿಲ್ಲಾಧ್ಯಕ್ಷ ಬಸವಣ್ಣ ಕದಂಬ, ಮೈಸೂರು ನಗರ ಅಧ್ಯಕ್ಷ ವೆಂಕಟೇಶ್ ಮತ್ತಿತರರು ಉಪಸ್ಥಿತರಿದ್ದರು.

ಮೂಡಲಪಾಯ ಬಯಲಾಟ ಉಳಿಸಲು ಸರ್ಕಾರಕ್ಕೆ ಪ್ರಸ್ತಾವನೆ

● ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ● ಮೂಡಲಪಾಯ ಬಯಲಾಟ ಪ್ರದರ್ಶನಕ್ಕೆ ಚಾಲನೆ

ಮೈಸೂರು, ಏ.4(ಪಿಎಂ)– ಚಾಮರಾಜನಗರದಿಂದ ಬೀದರ್‌ವರೆಗೆ ಪ್ರದರ್ಶನದ ನೀಡುವ ಮೂಲಕ ಅಳಿವಿನಂಚಿನಲ್ಲಿರುವ ಮೂಡಲಪಾಯ ಬಯಲಾಟ ಉಳಿಸಲು ಸಾಧ್ಯವಿದೆ. ಈ ರೀತಿಯ ಕಾರ್ಯಕ್ರಮಕ್ಕಾಗಿ ಸರ್ಕಾರಕ್ಕೆ ವಿಶೇಷ ಪ್ರಸ್ತಾವನೆ ಸಲ್ಲಿಸುವ ಅಗತ್ಯವಿದೆ ಎಂದು ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ಅಭಿಪ್ರಾಯಪಟ್ಟರು.



ಮೈಸೂರು ರಂಗಾಯಣದ ಭೂಮಿಗೀತದಲ್ಲಿ ಗುರುವಾರ ಬಿದ್ರೆಯಮ್ಮ ಮೂಡಲಪಾಯ ಬಯಲಾಟ ಮಂಡಳಿ ಕೊನೆಹಳ್ಳಿ ವತಿಯಿಂದ 'ಹಿಡಿಂಬಾಸುರನ ವಧೆ' ಪ್ರದರ್ಶನ ನಡೆಯಿತು.

ಮೈಸೂರಿನ ರಂಗಾಯಣದ ಭೂಮಿಗೀತದಲ್ಲಿ ಕರ್ನಾಟಕ ಬಯಲಾಟ ಅಕಾಡೆಮಿ ಬಾಗಲಕೋಟೆಯು ರಂಗಾಯಣ, ಮಹಾರಾಜ ಕಾಲೇಜು ಜಾನಪದ ವಿಭಾಗದ ಸಹಯೋಗದಲ್ಲಿ ಹಮ್ಮಿಕೊಂಡಿರುವ ಮೂಡಲಪಾಯ ಬಯಲಾಟ ಪ್ರದರ್ಶನಕ್ಕೆ ಗುರುವಾರ ಚಾಲನೆ ನೀಡಿ ಅವರು ಮಾತನಾಡಿದರು.

ನಾವು ಮತ್ತೆ ನಮ್ಮನ್ನು ಜಾನಪದ ಕಲಾ ಪ್ರಕಾರದ ಮರು ಹುಟ್ಟಿನ ಮೂಲಕ ಇವತ್ತನ್ನು ನೋಡಿಕೊಳ್ಳುವ ಗುಣವನ್ನು ಕಲಿಯಬೇಕಿದೆ. ಅಳಿವಿನಂಚಿನಲ್ಲಿರುವ ನಮ್ಮ ಕಲೆಗಳ ಬಗ್ಗೆ ಮಾತನಾಡಲು ಆರಂಭಿಸಿ 2 ದಶಕಗಳೇ ಕಳೆದು ಹೋಗಿದೆ. ಆದರೂ ಮೂಡಲಪಾಯ ಬಯಲಾಟ ಸೇರಿದಂತೆ ಅಳಿವಿನಂಚಿನಲ್ಲಿರುವ ಈ ಕಲೆಗಳು ಇಂದಿಗೂ ಉಸಿರಾಡುತ್ತಿವೆ ಎಂದರೆ ಅವುಗಳಿಗೆ ಸತ್ವ ಇದೆ ಎಂದಾಯಿತು. ಇಂತಹ ಕಲೆಗಳನ್ನು ಉಳಿಸಿ ಬೆಳೆಸಲು ಬೇಕಾಗಿರುವ ಕಾರ್ಯಕ್ರಮಗಳನ್ನು ಯೋಜಿಸುವುದಲ್ಲಿ ನಾವು ಸೋಲುತ್ತಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದರು.

ಭಾಗವತರು, ಮದ್ದಳೆಯವರು ಸೇರಿದಂತೆ 12 ಜನರ ಒಂದು ಪ್ರಾಯೋಗಿಕ ತಂಡ ರಚಿಸಿ ಪ್ರತಿ ತಿಂಗಳಿಗೆ ತಲಾ 25 ಸಾವಿರ ರೂ. ಅನ್ನು ಅವರಿಗೆ ನೀಡಿದರೆ ಸಾಕು ಮೂಡಲಪಾಯ ಬಯಲಾಟ ಕಲೆ ಉಳಿದು ಬೆಳೆಯಲಿದೆ. ಕೋಟಿಗಟ್ಟಲೆ ನಾಟಕಗಳಿಗೆ ವೆಚ್ಚ ಮಾಡುತ್ತಿರುವ ಮೆಗಾ ಪ್ರಾಜೆಕ್ಟ್‌ನ ಈ ಕಾಲದಲ್ಲಿ ಇಂತಹ ಅಳಿವಿನಂಚಿನಲ್ಲಿರುವ ಕಲೆಗಳನ್ನು ಉಳಿಸಲು ನಾವು ಮುಂದಾಗ ಬೇಕಿದೆ. ಇಂತಹ ತಂಡಕ್ಕೆ ತಿಂಗಳಿಗೆ 3 ಲಕ್ಷ ರೂ. ಹಾಗೂ 10 ತಿಂಗಳಿಗೆ 30 ಲಕ್ಷ ಖರ್ಚು ಬರಬಹುದು. ಇಷ್ಟು ಮಾಡಿದರೆ ಮೂಡಲಪಾಯ ಬಯಲಾಟ ಹೊಸ ಹುಟ್ಟು ಪಡೆಯಲಿದೆ ಎಂದರು.

ಬಯಲಾಟ ಅಕಾಡೆಮಿ ಅಥವಾ ರಂಗಾಯಣವೇ ಆಗಲಿ, ಸೀಮಿತ ಆರ್ಥಿಕ ಸಂಪನ್ಮೂಲದಲ್ಲಿ ಎಷ್ಟು ಮಾಡಲು ಸಾಧ್ಯವೋ ಅಷ್ಟೇ ಸಾಧ್ಯ. ಆದರೆ ವಿಶೇಷ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವ ಮೂಲಕ ನಾವು ಈ ರೀತಿಯ ಪ್ರಯೋಗಕ್ಕೆ ಮುಂದಾಗಬಹುದು. ಈ ಮೂಡಲಪಾಯ ಬಯಲಾಟ ಪ್ರದರ್ಶನಕ್ಕೆ ತುಂಬ ಸರಳವಾದ ವ್ಯವಸ್ಥೆ ಇದ್ದರೆ ಸಾಕು. ಚಾಮರಾಜನಗರದಿಂದ ಬೀದರ್‌ವರೆಗೆ ಒಂದು ಸಂಚಾರದ ಪ್ರಯೋಗ ಮಾಡಿದರೆ ಇದಕ್ಕೆ ಇನ್ನಷ್ಟು ಸತ್ವ–ಜೀವಂತಿಕೆ ಬರಲಿದೆ ಎಂದು ಹೇಳಿದರು.

ಕರ್ನಾಟಕ ಬಯಲಾಟ ಅಕಾಡೆಮಿ ಅಧ್ಯಕ್ಷ ಪ್ರೊ.ಕೆ.ಆರ್. ದುರ್ಗಾದಾಸ್ ಮಾತನಾಡಿ, ಆಧುನಿಕ ರಂಗಭೂಮಿಯ ರೀತಿಯಲ್ಲಿ ಬಯಲಾಟ ಪ್ರದರ್ಶನ ಇಂತಹ ಸುಸಜ್ಜಿತ ರಂಗಮಂದಿರದಲ್ಲಿ ಆಗುವ ಅಗತ್ಯವಿದೆ. ಈ ರೀತಿಯ ಪ್ರಯತ್ನಗಳು ನಡೆದರೆ ಬಯಲಾಟ ಕಲೆ ನಗರ ಪ್ರೇಕ್ಷಕರಿಗೆ ಇಷ್ಟವಾಗಲಿದೆ. ಈ ನಿಟ್ಟಿನಲ್ಲಿ ರಂಗಾಯಣದ ಸಹಕಾರ ನಮ್ಮ ಅಕಾಡೆಮಿಗೆ ಅಗತ್ಯವಿದೆ ಎಂದರು.

ಬಯಲಾಟ ಅಕ್ಷರಸ್ಥರು, ಅನಕ್ಷರಸ್ಥರು ಹಾಗೂ ಎಲ್ಲಾ ವಯೋಮಾನದ ಜನರನ್ನು ಆಕರ್ಷಿಸಬಲ್ಲದು. ಮನರಂಜನೆಯೊಂದಿಗೆ ವಿವೇಕದ ಸಂದೇಶಗಳನ್ನು ರವಾನಿಸಬಲ್ಲ ಉತ್ತಮ ಮಾಧ್ಯಮ. ಮೈಸೂರು ಜಾನಪದ ಅಧ್ಯಯನ ಹಾಗೂ ಮೂಡಲಪಾಯ ಬಯಲಾಟ ಪುನರುಜ್ಜೀವನಕ್ಕೆ ನಾಂದಿ ಹಾಡಿದ ಸ್ಥಳ. ಈ ಕಾರಣಕ್ಕೆ ಇಲ್ಲಿ ಹೆಚ್ಚು ಚಟುವಟಿಕೆ ನಡೆಯಬೇಕೆಂಬುದು ನಮ್ಮ ಬಯಕೆ. ವರ್ಷದಲ್ಲಿ 2 ಬಾರಿಯಾದರೂ ಮೈಸೂರಲ್ಲಿ ರಂಗಾಯಣದ ಸಹಯೋಗದಲ್ಲಿ ನಾಲ್ಕಾರು ಕಾರ್ಯಕ್ರಮ ನೀಡಬೇಕೆಂಬ ಆಲೋಚನೆ ಇದೆ ಎಂದು ಹೇಳಿದರು.

ಬಳಿಕ ಬಿದ್ರೆಯಮ್ಮ ಮೂಡಲಪಾಯ ಬಯಲಾಟ ಮಂಡಳಿ ಕೊನೆಹಳ್ಳಿ ವತಿಯಿಂದ 'ಹಿಡಿಂಬಾಸುರನ ವಧೆ' ಪ್ರದರ್ಶನ ನಡೆಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೈಸೂರು ವಿಭಾಗದ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ ಮತ್ತಿತರರು ಹಾಜರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಐತಿಹಾಸಿಕ ಮಹಾರಾಜ ಕಾಲೇಜು ಕುರಿತ ಗ್ರಂಥ ರಚನೆ

ಮೈಸೂರು ವಿವಿ ಹಾಗೂ ಮಿಥಿಕ್ ಸೊಸೈಟಿ ನಡುವೆ ಒಡಂಬಡಿಕೆ

ಮೈಸೂರು, ಏ.4(ಎಂಟಿವೈ)– ಶತಮಾನಗಳಿಂದ ಲಕ್ಷಾಂತರ ಮಂದಿಯ ಜ್ಞಾನಾರ್ಜನೆಗೆ ಕಾರಣವಾಗಿ ಸಮಾಜಕ್ಕೆ ಸತ್ಪ್ರಜೆಗಳ ಕೊಡುಗೆ ನೀಡಿರುವ ಮೈಸೂರಿನ ಐತಿಹಾಸಿಕ ಮಹಾರಾಜ ಕಾಲೇಜಿನ ಇತಿಹಾಸ ಹಾಗೂ ನಡೆದು ಬಂದ ಹಾದಿ ಕುರಿತಂತೆ 'ಗ್ರಂಥ' ರಚನಾ ಕಾರ್ಯ ಆರಂಭವಾಗಿದೆ.

ಮೈಸೂರು ವಿಶ್ವವಿದ್ಯಾನಿಲಯವು ಮಿಥಿಕ್ ಸೊಸೈಟಿಯೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದು, ನಾಲ್ವರು ಪ್ರಾಧ್ಯಾಪಕರು ಸಂಶೋಧನಾ ಗ್ರಂಥ ರಚನಾ ಕಾರ್ಯಕ್ಕೆ ಮಿಥಿಕ್ ಸೊಸೈಟಿಯೊಂದಿಗೆ ಕೈ ಜೋಡಿಸಿ ಕಾರ್ಯಾರಂಭ ಮಾಡಿದ್ದಾರೆ. ಈ ಗ್ರಂಥ ರಚನೆಗಾಗಿ ಮಹಾರಾಜ ಕಾಲೇಜಿನ ಹುಟ್ಟು, ಬೆಳೆವಣಿಗೆ, ನಡೆದು ಬಂದ ಹಾದಿ, ಕಾಲೇಜಿನ ಬೋಧಕ ವರ್ಗ ಹಾಗೂ ವಿದ್ಯಾರ್ಥಿಗಳ ಸಾಧನೆ ಸೇರಿದಂತೆ ಮಹತ್ತರ ವಿಷಯಗಳ ಬಗ್ಗೆ ಮಾಹಿತಿಯೊಂದಿಗೆ ದಾಖಲೆ ಸಂಗ್ರಹ ಕಾರ್ಯ ಆರಂಭಿಸಲಾಗಿದೆ.

ಮಹಾರಾಜ ಕಾಲೇಜಿನ ಇತಿಹಾಸ ಮುಂದಿನ ಪೀಳಿಗೆಯೊಂದಿಗೆ ಈಗಿನ ಯುವ ಜನರಿಗೆ ತಿಳಿಸುವ ನಿಟ್ಟಿನಲ್ಲಿ ಈ ಗ್ರಂಥ ಸಹಕಾರಿಯಾಗಲಿದೆ. ಗ್ರಂಥ ರಚನಾ ಕಾರ್ಯಕ್ಕೆ ಬೇಕಾದ ಮಾಹಿತಿ ಹಾಗೂ ಅಗತ್ಯ ಛಾಯಾಚಿತ್ರ ಸಂಗ್ರಹ ಕಾರ್ಯದಲ್ಲಿ ಮಹಾರಾಜ ಕಾಲೇಜಿನ ಪ್ರಾಧ್ಯಾಪಕರಾದ ಡಾ.ಮಮಾನ (ಇತಿಹಾಸ) ಡಾ. ಗ್ಯಾವಿನ್ ಜೂಡ್ ವಿಲ್ಸನ್(ಇಂಗ್ಲಿಷ್) ಡಾ.ರೋಹಿತ್ ಈಶ್ವರ್ (ಆಂಥ್ರೋಪಾಲಜಿ) ಮತ್ತು ಇತಿಹಾಸಕಾರ ಡಾ. ನರೇಂದ್ರ ಪ್ರಸಾದ್ ತೊಡಗಿಸಿಕೊಂಡಿದ್ದಾರೆ.

ದಿ ಮಿಥಿಕ್ ಸೊಸೈಟಿಯೊಂದಿಗೆ ಒಪ್ಪಂದ ಮಾಡಿಕೊಂಡ ಮೈಸೂರು ವಿವಿ: ಮಹಾರಾಜ ಕಾಲೇಜಿನ ಇತಿಹಾಸ ಕುರಿತ ಗ್ರಂಥ ರಚನಾ ಕಾರ್ಯಕ್ಕಾಗಿ ಮೈಸೂರು ವಿಶ್ವವಿದ್ಯಾನಿಲಯವು ದಿ ಮಿಥಿಕ್ ಸೊಸೈಟಿಯೊಂದಿಗೆ ಒಡಬಡಿಕೆ ಮಾಡಿಕೊಂಡಿದೆ. ಈ ಸಂಶೋಧನಾ ಗ್ರಂಥ ಮಾಲಿಕೆಯನ್ನು ಮುದ್ರಣ ರೂಪದಲ್ಲಿ ಜನರಿಗೆ ತಲುಪಿಸಲು ಈ ಒಡಂಬಡಿಕೆ ನೆರವಾಗಲಿದೆ

ಗ್ರಂಥದಲ್ಲಿರುವ ಮಾಹಿತಿ: ಕಾಲೇಜು ಕುರಿತು ರಚಿಸಲ್ಪಡುವ ಸಂಶೋಧನಾ ಗ್ರಂಥದಲ್ಲಿ ಮಹಾರಾಜ ಕಾಲೇಜು ಕುರಿತ ಮಹತ್ತರ ಮಾಹಿತಿ ಇರುತ್ತದೆ. ಹಿಂದೆ ಮೈಸೂರು ಸಂಸ್ಥಾನದಲ್ಲಿದ್ದ ಬ್ರಿಟೀಷರು ಮೈಸೂರು ನಗರದಲ್ಲಿ ಇಂಗ್ಲೀಷ್ ಶಾಲೆಗಳನ್ನು ಆರಂಭಿಸಿದ್ದರು. ಆನಂತರ 1833ರಲ್ಲಿ ಅಂದಿನ ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ್ 'ರಾಜಾಸ್ ಫ್ರೀ ಸ್ಕೂಲ್' ಆರಂಭ ಮಾಡಿದರು. ನಂತರ 1879ರಲ್ಲಿ ಹತ್ತನೇ ಮಹಾರಾಜ ಚಾಮರಾಜ ಒಡೆಯರ್ ಪ್ರಥಮ ದರ್ಜೆ ಕಾಲೇಜು ಕಟ್ಟಡ ನಿರ್ಮಾಣ ಮಾಡಿದರು. ಮಹಾರಾಜ ಪದವಿ ಕಾಲೇಜು ಆರಂಭವ ದಿನದಿಂದ ನೂರು ವರ್ಷಗಳ ಇತಿಹಾಸ ಪ್ರಮುಖ ಅಂಶಗಳು ಗ್ರಂಥದಲ್ಲಿ ಕಾಣಬಹುದಾಗಿದೆ.

ಈ ಮಾಹಿತಿ ಗ್ರಂಥಗಳನ್ನು ಮೂರು ಸಂಪುಟ(ವಾಲ್ಯೂಮ್)ಗಳಲ್ಲಿ ಹೊರತರಲು ಉದ್ದೇಶಿಸಲಾಗಿದೆ. ಕಾಲೇಜಿನ ಮೊದಲ ಪ್ರಾಂಶುಪಾಲರಾದ ಜೆ.ಸಿ.ರೋಲ್ಸ್, ಮ್ಯಾರಿನ್ ಟೋಶ್ ಅವರಿಂದ ಹಿಡಿದ ಶೈಕ್ಷಣಿಕ ಕ್ಷೇತ್ರದಲ್ಲಿ ಸಾಧನೆ ಮಾಡಿದ ಕಾಲೇಜಿನ ಎಲ್ಲಾ ಭಾರತೀಯ ಪ್ರಾಧ್ಯಾಪಕರು ಹಾಗೂ ಸಾಧನೆ ಮಾಡಿದ ವಿದ್ಯಾರ್ಥಿಗಳು, ಕಾಲೇಜಿನ ಐತಿಹಾಸಿಕ ಘಟನೆಗಳು ಮುಂತಾದ ವಿಷಯಗಳ ಬಗ್ಗೆ ಸಂಶೋಧನೆ ನಡೆಸಿ ದಾಖಲೆ ಕ್ರೋಢೀಕರಿಸಿ ಗ್ರಂಥ ಮಾಲೆಯನ್ನು ಪ್ರಕಟಿಸಲಾಗುತ್ತದೆ.



ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ನಡೆದ ಸರಳ ಕಾರ್ಯಕ್ರಮದಲ್ಲಿ ಮಹಾರಾಜ ಕಾಲೇಜು ಕುರಿತಾದ 'ಗ್ರಂಥ' ರಚನೆಗೆ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಹಾಗೂ ಮಿಥಿಕ್ ಸೊಸೈಟಿಯ ಪರವಾಗಿ ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಎಸ್.ರವಿ ಒಡಂಬಡಿಕೆಗೆ ಪರಸ್ಪರ ಸಹಿ ಹಾಕಿದರು.

ಎಲ್ಲೆಲ್ಲಿಂದ ದಾಖಲೆ ಸಂಗ್ರಹ: 2–3 ವರ್ಷದ ಅವಧಿಯೊಳಗೆ ಕಾಲೇಜಿನ ಗ್ರಂಥ ಮಾಲಿಕೆ ಹೊರಬರಲಿದೆ. ಅದಕ್ಕಾಗಿ ಮೈಸೂರು ಸಂಸ್ಥಾನ, ಅಂದಿನ ಶಾಲಾ–ಕಾಲೇಜು, ಮದ್ರಾಸ್ ವಿಶ್ವವಿದ್ಯಾನಿಲಯ, ಮಂಗಳೂರಿನ ಕರ್ನಾಟಕ ಥಿಯಾಲಾಜಿಕಲ್ ಸೊಸೈಟಿ, ಬೆಂಗಳೂರಿನ ಯುನೈಟೆಡ್ ಥಿಯೋಲಾಜಿಕಲ್ ಸೊಸೈಟಿ, ಬೆಂಗಳೂರು ಆರ್ಚೀವ್ಸ್, ದಿ ಮಿಥಿಕ್ ಸೊಸೈಟಿ, ಮೈಸೂರಿನ ಪತ್ರಾಗಾರ ಇಲಾಖೆ ಹಾಗೂ ಅರಮನೆಯ ಪತ್ರ ಸಂಗ್ರಹಾಲಯಗಳಲ್ಲಿ ದಾಖಲೆಗಳು ಹಾಗೂ ಛಾಯಾಚಿತ್ರಗಳನ್ನು ಸಂಗ್ರಹಿಸಲಾಗುತ್ತಿದೆ. ಈ ಎಲ್ಲಾ ದಾಖಲೆಗಳನ್ನು ಮುಂದಿಟ್ಟುಕೊಂಡು ಮೂರು ಸಂಪುಟಗಳ 'ಐತಿಹಾಸಿಕ ಮಹಾರಾಜ ಕಾಲೇಜು ಮಾಹಿತಿ ಗ್ರಂಥ' ರಚನೆಗೊಳ್ಳುತ್ತಿದೆ.

ಒಡಂಬಡಿಕೆ: ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ನಡೆದ ಸರಳ ಕಾರ್ಯಕ್ರಮದಲ್ಲಿ ಮಹಾರಾಜ ಕಾಲೇಜು ಕುರಿತು ರಚಿಸಲುದ್ದೇಶಿಸಿರುವ 'ಗ್ರಂಥ' ರಚನೆ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಹಾಗೂ ಮಿಥಿಕ್ ಸೊಸೈಟಿಯ ಪರವಾಗಿ ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಎಸ್.ರವಿ ಒಡಂಬಡಿಕೆಗೆ ಪರಸ್ಪರ ಸಹಿ ಹಾಕಿದರು. ಈ ಸಂದರ್ಭದಲ್ಲಿ ಕುಲಸಚಿವರಾದ ಎಂ.ಕೆ.ಸವಿತಾ, ಪರೀಕ್ಷಾ ಕುಲ ಸಚಿವ ಡಾ. ಓ.ನಾಗರಾಜು, ಹಣಕಾಸು ಅಧಿಕಾರಿ ರೇಖಾ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಭವಾನಿ ರೇವಣ್ಣಗೆ ಮೈಸೂರು, ಹಾಸನ ಪ್ರವೇಶಿಸಲು ಹೈಕೋರ್ಟ್ ಅಸ್ತು



ಬೆಂಗಳೂರು, ಏ.4– ಕೆ.ಆರ್.ನಗರ ಸಂತ್ರಸ್ತೆ ಅಪಹರಣ ಪ್ರಕರಣದಲ್ಲಿ ಮಾಜಿ ಸಚಿವ ರೇವಣ್ಣ ಪತ್ನಿ ಭವಾನಿ ರೇವಣ್ಣ ಅವರಿಗೆ ಹೈಕೋರ್ಟ್ ನಿಂದ ರಿಲೀಫ್ ಸಿಕ್ಕಿದ್ದು, ಮೈಸೂರು ಮತ್ತು ಹಾಸನ ಜಿಲ್ಲೆ ಪ್ರವೇಶಿಸಲು ಅನುಮತಿ ನೀಡಿದೆ.

ಭವಾನಿ ರೇವಣ್ಣ ಅವರು ಮೈಸೂರು ಮತ್ತು ಹಾಸನ ಜಿಲ್ಲೆ ಪ್ರವೇಶಿಸದಂತೆ ಷರತ್ತು ವಿಧಿಸಿ ಹೈಕೋರ್ಟ್ ಈ ಹಿಂದೆ ನಿರೀಕ್ಷಣಾ ಜಾಮೀನು ನೀಡಿತ್ತು. ಇದೀಗ ಷರತ್ತನ್ನು ಸಡಿಲಿಸಿದ್ದು, ಹಾಸನ ಮತ್ತು ಮೈಸೂರು ಜಿಲ್ಲೆಗೆ ಪ್ರವೇಶಿಸಲು ಅನುಮತಿ ನೀಡಿದೆ. ಆದರೆ, ಸಂತ್ರಸ್ತೆ ಮತ್ತು ಪ್ರಕರಣದ ಸಾಕ್ಷಿಗಳ ಮನೆಯ 500 ಮೀ. ಸುತ್ತಳತೆಯಲ್ಲಿ ಪ್ರವೇಶಿಸುವಂತಿಲ್ಲ ಎಂದು ನ್ಯಾ.ಪ್ರದೀಪ್ ಸಿಂಗ್ ಯೆರೂರ್ ಅವರಿದ್ದ ಏಕಸದಸ್ಯ ಪೀಠ ಹೊಸ ಷರತ್ತು ವಿಧಿಸಿದೆ.

ಬೆಲೆ ಏರಿಕೆ ಖಂಡಿಸಿ ಏ.7ರಂದು ಮೈಸೂರಲ್ಲಿ ಜನಾಕ್ರೋಶ



ಮೈಸೂರು ಬಿಜೆಪಿ ಕಚೇರಿಯಲ್ಲಿ ಕೊಡಗಿನ ಕಾರ್ಯಕರ್ತ ವಿನಯ್ ಸೋಮಯ್ಯ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು

ಮೈಸೂರು, ಏ.4(ಎಸ್‌ಬಿಡಿ)– ರಾಜ್ಯ ಸರಕಾರದ ಬೆಲೆ ಏರಿಕೆ ನೀತಿ ಖಂಡಿಸಿ ರಾಜ್ಯಾದ್ಯಂತ ಬಿಜೆಪಿ ಪ್ರತಿಭಟನೆಗೆ ನಿರ್ಧರಿಸಿದ್ದು, ಏ.7ರಂದು ಮೈಸೂರಿನಲ್ಲಿ ಜನಾಕ್ರೋಶ ಪ್ರತಿಭಟನೆ ನಡೆಯಲಿದೆ.

ಈ ಹಿನ್ನೆಲೆಯಲ್ಲಿ ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಶುಕ್ರವಾರ ವಿಧಾನ ಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್, ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರೀತಮ್ ಗೌಡ, ಜಿಲ್ಲಾಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ, ನಗರಾಧ್ಯಕ್ಷ ಎಲ್. ನಾಗೇಂದ್ರ, ಶಾಸಕ ಶ್ರೀವತ್ಸ, ರಾಜ್ಯ ಕಾರ್ಯದರ್ಶಿಗಳಾದ ತಮ್ಮೇಶ್ ಗೌಡ, ಶರಣು ತಳ್ಳಿಕೇರಿ, ಓಬಿಸಿ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ಸೇರಿದಂತೆ ಹಲವು ಮುಖಂಡರು ಹಾಗೂ ಕಾರ್ಯಕರ್ತರೊಂದಿಗೆ ಪೂರ್ವಭಾವಿ ಸಭೆ ನಡೆಸಿ, ಚರ್ಚಿಸಿದರು.

ಸಭೆಯಲ್ಲಿ ಬಿಜೆಪಿ ರಾಜ್ಯ ವಕ್ತಾರ ಎಂ.ಜಿ ಮಹೇಶ್ ಮಾತನಾಡಿ, ರಾಜ್ಯ ಕಾಂಗ್ರೆಸ್ ಸರ್ಕಾರದ ಬೆಲೆ ಏರಿಕೆ ನೀತಿ ಖಂಡಿಸಿ ಮೈಸೂರಿನಿಂದಲೇ ಹೋರಾಟ ಆರಂಭವಾಗಲಿದ್ದು, ಏ.7ರಂದು ಪುರಭವನ ಬಳಿ ಜನಾಕ್ರೋಶ ಪ್ರತಿಭಟನಾ ಯಾತ್ರೆಗೆ ಚಾಲನೆ ದೊರಕಲಿದೆ. ಪ್ರಮುಖ ರಸ್ತೆ ಗಳಲ್ಲಿ ಸಾಗುವ ಪ್ರತಿಭಟನಾ ಮೆರವಣಿಗೆಯಲ್ಲಿ ಪಕ್ಷದ ಹಿರಿಯ ನಾಯಕರು, ಮುಖಂಡರು ಭಾಗವಹಿಸಿ ಕಾಂಗ್ರೆಸ್ ಸರ್ಕಾರದ ಜನ ವಿರೋಧಿ ನೀತಿಯನ್ನು ಖಂಡಿಸಲಿದ್ದಾರೆ. ಮೈಸೂರು, ಚಾಮರಾಜನಗರ, ಮಂಡ್ಯ, ಚಿಕ್ಕಮಗಳೂರು, ಉಡುಪಿ ಸೇರಿದಂತೆ ದಕ್ಷಿಣ ಕರ್ನಾಟಕ ಭಾಗದಲ್ಲಿ ಮೊದಲ ಹಂತದಲ್ಲಿ ನಡೆಯಲಿರುವ ಜನಾಕ್ರೋಶ ಯಾತ್ರೆ ಯಶಸ್ಸಿಗೆ ಎಲ್ಲರೂ ಕೈಜೋಡಿಸಬೇಕೆಂದು ಮನವಿ ಮಾಡಿದರು.

ಇದೇ ವೇಳೆ ಕೊಡಗಿನ ಬಿಜೆಪಿ ಕಾರ್ಯಕರ್ತ ವಿನಯ್ ಸೋಮಯ್ಯ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೊಡಗಿನ ಶಾಸಕರಾದ ಪೊನ್ನಣ್ಣ ಹಾಗೂ ಮಂತರ್‌ಗೌಡ ರಾಜೀನಾಮೆ ನೀಡಬೇಕು. ರಾಜ್ಯ ಸರ್ಕಾರ ಪೊಲೀಸರನ್ನು ಬಳಸಿಕೊಂಡು ತನ್ನ ಎದುರಾಳಿಗಳನ್ನು ಮಣಿಸಲು ಮುಂದಾಗಿದೆ. ವಿನಯ್ ಆತ್ಮಹತ್ಯೆ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕು ಎಂದು ಆಗ್ರಹಿಸಿದರು.

ಮೈಸೂರು ವಿಭಾಗದ ರೈಲ್ವೆ ಯೋಜನೆಗಳ ತ್ವರಿತಗತಿಯಲ್ಲಿ ಪೂರ್ಣಗೊಳಿಸುವ ಭರವಸೆ

ರೈಲ್ವೆ ಸಚಿವ ಅಶ್ವಿನ್ ವೈಷ್ಣವ್ ಭೇಟಿಯಾದ ಸಂಸದ ಯದುವೀರ್



ಮೈಸೂರು, ಏ.4(ಎಸ್‌ಬಿಡಿ)– ಮೈಸೂರು ವ್ಯಾಪ್ತಿಯ ರೈಲ್ವೆ ಯೋಜನೆಗಳನ್ನು ತ್ವರಿತ ಗತಿಯಲ್ಲಿ ಪೂರ್ಣಗೊಳಿಸುವ ಭರವಸೆ ಜೊತೆಗೆ ಐತಿಹಾಸಿಕ ಮೈಸೂರು ರೈಲ್ವೆ ನಿಲ್ದಾಣದ ಆಧುನೀಕರಣಕ್ಕೆ ರೈಲ್ವೆ ಸಚಿವರು ಹಸಿರು ನಿಶಾನೆ ತೋರಿದ್ದಾರೆ ಎಂದು ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದ್ದಾರೆ.

ನವದೆಹಲಿಯಲ್ಲಿ ರೈಲ್ವೆ ಸಚಿವ ಅಶ್ವಿನ್ ವೈಷ್ಣವ್ ಅವರನ್ನು ಭೇಟಿ ಮಾಡಿ ಹಲವು ವಿಚಾರಗಳ ಬಗ್ಗೆ ಚರ್ಚಿಸಲಾಯಿತು. ನಮ್ಮ ಮೈಸೂರು ರೈಲ್ವೆ ನಿಲ್ದಾಣವೂ ಐತಿಹಾಸಿಕ ಸ್ಥಳವಾಗಿದ್ದು, ಇದರ ಆಧುನೀಕರಣಕ್ಕೆ ಆದ್ಯತೆ ನೀಡಬೇಕೆಂಬ ಮನವಿಗೆ ತಕ್ಷಣ ಸ್ಪಂದಿಸಿದ ಸಚಿವರು, ಈ ನಿಟ್ಟಿನಲ್ಲಿ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳುವ ಭರವಸೆ ನೀಡಿದ್ದಾಗಿ ಯದುವೀರ್ ಹೇಳಿದ್ದಾರೆ.

ಮೈಸೂರು ವಿಮಾನ ನಿಲ್ದಾಣ ವಿಸ್ತರಣೆಗೆ ಅನುಕೂಲವಾಗುವಂತೆ ರೈಲ್ವೆ ಹಳಿಗಳ ಸ್ಥಳಾಂತರ ಸಂಬಂಧ ಸೂಕ್ತ ಕ್ರಮ ಕೈಗೊಳ್ಳಲು ಸೂಚನೆ ನೀಡುವುದಾಗಿ ಸಚಿವರು ಭರವಸೆ ನೀಡಿದ್ದಾರೆ. ವಿಮಾನ ನಿಲ್ದಾಣ ವಿಸ್ತರಣೆಗೆ ಬೇಕಿರುವ 46 ಎಕರೆ ಭೂ ಸ್ವಾಧೀನ ಪ್ರಕ್ರಿಯೆಯನ್ನು ರಾಜ್ಯ ಸರ್ಕಾರ ಪೂರ್ಣಗೊಳಿಸಿ ಹಸ್ತಾಂತರಿಸಿದರೆ ರನ್‌ವೇ ವಿಸ್ತರಣೆ ಕಾಮಗಾರಿ ತ್ವರಿತವಾಗಿ ನಡೆಯಲಿದೆ

ಅತಿ ಶೀಘ್ರದಲ್ಲೇ ಬಹುತೇಕ ರೈಲ್ವೆ ಯೋಜನೆಗಳ ಕಾಮಗಾರಿಗಳು ಪೂರ್ಣಗೊಳ್ಳುವುದರ ಜೊತೆಗೆ ನೂತನ ಯೋಜನೆಗಳೂ ಕಾರ್ಯರೂಪಕ್ಕೆ ಬರಲಿವೆ. ಮೈಸೂರು ರೈಲು ನಿಲ್ದಾಣದ ಆಧುನೀಕರಣಕ್ಕೆ ಸಂಬಂಧಿಸಿದ ವಿನ್ಯಾಸವನ್ನು ನಾನು ಅಂತಿಮಗೊಳಿಸುತ್ತಿದ್ದು, ಇದಕ್ಕೆ ಅನುಮೋದನೆ ದೊರೆತ ಕೂಡಲೇ ಕಾಮಗಾರಿಗೆ ಚಾಲನೆ ದೊರಕಲಿದೆ. ಸಂಪೂರ್ಣ ನೆರವು ನೀಡುವುದಾಗಿ ಭರವಸೆ ನೀಡಿರುವ ಕೇಂದ್ರ ಸಚಿವ ಅಶ್ವಿನ್ ವೈಷ್ಣವ್ ಅವರಿಗೆ ಮೈಸೂರು ಹಾಗೂ ಕೊಡಗು ಲೋಕಸಭಾ ಕ್ಷೇತ್ರದ ಜನರ ಪರವಾಗಿ ಧನ್ಯವಾದಗಳನ್ನು ಸಲ್ಲಿಸಿದ್ದೇನೆ ಎಂದು ಸಂಸದರು ತಿಳಿಸಿದ್ದಾರೆ.


ನಾಡಿನ ಮೂವರು ಸಾಧಕರಿಗೆ ಪ್ರತಿಷ್ಠಿತ ನಾಡೋಜ ಪ್ರಶಸ್ತಿ ಪ್ರದಾನ



ಶಿವರಾಜ ಪಾಟೀಲ್



ಕುಂ. ವೀರಭದ್ರಪ್ಪ



ವೆಂಕಟೇಶ್‌ಕುಮಾರ್

ವಿಜಯನಗರ, ಏ.4– ವಿವಿಧ ಕ್ಷೇತ್ರದ ಸಾಧಕರಿಗೆ ಕೊಡಮಾಡುವ ಪ್ರತಿಷ್ಠಿತ ನಾಡೋಜ ಪ್ರಶಸ್ತಿಯನ್ನು ರಾಜ್ಯದ ಮೂವರು ಗಣ್ಯರಿಗೆ ರಾಜ್ಯಪಾಲರಾದ ಥಾವರ್‌ಚಂದ್ ಗೆಲ್ಹೋಟ್ ಅವರು ಹಂಪಿ ಕನ್ನಡ ವಿಶ್ವವಿದ್ಯಾಲಯದ ಆವರಣದ ಘಟಿಕೋತ್ಸವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಿದ್ದಾರೆ.

ವಿಜಯನಗರದ ಹಂಪಿ ಕನ್ನಡ ವಿಶ್ವವಿದ್ಯಾಲಯದ ಆವರಣದ ಘಟಿಕೋತ್ಸವ ಸಮಾರಂಭದಲ್ಲಿ ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಶಿವರಾಜ ಪಾಟೀಲ್, ಸಾಹಿತಿ ಕುಂ. ವೀರಭದ್ರಪ್ಪ ಹಾಗೂ ಹಿಂದೂಸ್ತಾನಿ ಸಂಗೀತ ಗಾಯಕ ಎಂ. ವೆಂಕಟೇಶ್‌ಕುಮಾರ್ ಅವರಿಗೆ ನಾಡೋಜ ಪ್ರಶಸ್ತಿ ಪ್ರದಾನ ಮಾಡಲಾಯಿತು.

ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲೂಕಿನ ಕಮಲಾಪುರ ಗ್ರಾಮದ ಹೊರಭಾಗದಲ್ಲಿರೋ ಹಂಪಿ ಕನ್ನಡ ವಿಶ್ವವಿದ್ಯಾಲಯದ 33ನೇ ನುಡಿ ಹಬ್ಬ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅವರು ಪ್ರಶಸ್ತಿ ಪ್ರದಾನ ಮಾಡಿದರು.

ಸಮಾರಂಭದಲ್ಲಿ ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ ಸುಧಾಕರ್, ವಿಶ್ರಾಂತ ಕುಲಪತಿ ಪ್ರೊ. ರಾಜಾಸಾಬ್ ಎ.ಹೆಚ್, ಹಂಪಿ ಕನ್ನಡ ವಿವಿ ಕುಲಪತಿ ಡಾ. ಡಿ.ವಿ. ಪರಮ ಶಿವ ಮೂರ್ತಿ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

ಎಸ್. ರಶ್ಮಿಗೆ ಪಿಎಚ್.ಡಿ



ಮೈಸೂರು, ಏ.4– ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವ ವಿದ್ಯಾನಿಲಯದ ಕಂಪ್ಯೂಟರ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರಾದ ಎಸ್. ಶ್ರೀನಾಥ್ ಅವರ ಮಾರ್ಗದರ್ಶನದಲ್ಲಿ ಎಸ್. ರಶ್ಮಿ ಅವರು ಕಂಪ್ಯೂಟರ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ನಾಳೆ ಕೆ.ಆರ್.ಪೇಟೆಯಲ್ಲಿ ಸರ್ಕಾರದ ನಡೆ ಕಾರ್ಯಕರ್ತರ ಕಡೆ ಕಾರ್ಯಕ್ರಮ

ಉಸ್ತುವಾರಿ ಸಚಿವರು, ಕಾಂಗ್ರೆಸ್ ಮುಖಂಡರು ಭಾಗಿ



ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ನಾಗೇಂದ್ರಕುಮಾರ್ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಕೆ.ಆರ್.ಪೇಟೆ,ಏ.4– ಭಾನುವಾರ (ಏ.6) ಮಧ್ಯಾಹ್ನ 2 ಗಂಟೆಗೆ ಪಟ್ಟಣದ ಮೈಸೂರು ರಸ್ತೆಯಲ್ಲಿರುವ ಜಯಮ್ಮ-ಶಿವಲಿಂಗೇಗೌಡ ಸಮುದಾಯ ಭವನದ ಆವರಣದಲ್ಲಿ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಸರ್ಕಾರದ ನಡೆ ಕಾರ್ಯಕರ್ತರ ಕಡೆ ಕಾರ್ಯಕ್ರಮ ನಡೆಯಲಿದೆ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ನಾಗೇಂದ್ರಕುಮಾರ್ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಕಾರ್ಯಕ್ರಮದ ವಿವರಗಳನ್ನು ನೀಡಿದರು.

ರಾಜ್ಯದ ಕೃಷಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ನೇತೃತ್ವದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಜಿಲ್ಲೆಯ ಎಲ್ಲಾ ಕಾಂಗ್ರೆಸ್ ಶಾಸಕರು, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ. ಗಂಗಾಧರ್ ಸೇರಿದಂತೆ ಜಿಲ್ಲಾ ಮತ್ತು ತಾಲೂಕು ಕಾಂಗ್ರೆಸ್ ಮುಖಂಡರು, ವಿವಿಧ ನಿಗಮ ಮಂಡಲಿಗಳ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಕಾರ್ಯಕ್ರಮದ ವೇದಿಕೆಯನ್ನು ಹಂಚಿಕೊಳ್ಳಲಿದ್ದಾರೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಾಯಕತ್ವದ ಕಾಂಗ್ರೆಸ್ ಸರ್ಕಾರದ ಜನಪರ ಕೆಲಸಗಳನ್ನು ಕಾರ್ಯಕರ್ತರು ತಳಮಟ್ಟದಲ್ಲಿ ಜನರಿಗೆ ಮುಟ್ಟಿಸುವ ಕೆಲಸ ಮಾಡುತ್ತಿದ್ದಾರೆ. ಕಾರ್ಯಕರ್ತರ ಪರಿಶ್ರಮದಿಂದಲೇ ರಾಜ್ಯದಲ್ಲಿಂದು ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಿದೆ. ಪಕ್ಷವನ್ನು ಅಧಿಕಾರಕ್ಕೆ ತರಲು ಶ್ರಮಿಸಿದ ಕಾರ್ಯಕರ್ತರ ಕುಂದು ಕೊರತೆಗಳನ್ನು ಸಭೆಯಲ್ಲಿ ಆಲಿಸಲಾಗುವುದಲ್ಲದೆ ತಾಲೂಕಿನ ಜ್ವಲಂತ ಸಮಸ್ಯೆಗಳು ಮತ್ತು ಆಗಬೇಕಾಗಿರುವ ಅಭಿವೃದ್ಧಿ ಕೆಲಸಗಳ ಬಗ್ಗೆ ಚರ್ಚಿಸಲಾಗುವುದು. ಸಮಸ್ಯೆಗಳ ಪರಿಹಾರಕ್ಕೆ ಕಾರ್ಯಕರ್ತರು ಸರ್ಕಾರದ

ಕಾರ್ಯಕರ್ತರಿಂದ ಅಹವಾಲು ಸ್ವೀಕಾರ

ಬಳಿಗೆ ಹೋಗುವ ಬದಲು ಸರ್ಕಾರವೇ 'ಸರ್ಕಾರದ ನಡೆ ಕಾರ್ಯಕರ್ತರ ಕಡೆ' ಕಾರ್ಯಕ್ರಮದ ಮೂಲಕ ಕಾರ್ಯಕರ್ತರ ಬಳಿಗೆ ಬರುತ್ತಿದೆ ಎಂದ ಬಿ.ನಾಗೇಂದ್ರಕುಮಾರ್ ತಾಲೂಕು ಕಾಂಗ್ರೆಸ್ ಪಕ್ಷದ ಮುಖಂಡರು, ಕಾರ್ಯಕರ್ತರು ಮತ್ತು ಕಾಂಗ್ರೆಸ್ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಮನವಿ ಮಾಡಿದರು.

ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಅಗ್ರಹಾರಬಾಚಹಳ್ಳಿ ಎ.ಬಿ.ಕುಮಾರ್, ತಾಲೂಕು ಕಾಂಗ್ರೆಸ್ ಪ.ಜಾ. ವಿಭಾಗದ ಅಧ್ಯಕ್ಷ ರಾಜಯ್ಯ, ಅಲ್ಪಸಂಖ್ಯಾತರ ಜಿಲ್ಲಾ ಘಟಕದ ಅಧ್ಯಕ್ಷ ಸಲ್ಲು, ಮುಖಂಡರಾದ ಮಡುವಿನಕೋಡಿ ಕಾಂತರಾಜು, ಅಕ್ಕಿಹೆಬ್ಬಾಳು ಅಣ್ಣಯ್ಯ, ಇಲಿಯಾಸ್ ಅಹಮದ್, ಜಮೀರ್, ಹಾಫಿಜುಲ್ಲಾ ಷರೀಪ್, ಪುರಸಭೆ ನಾಮಿಸಿ ಸದಸ್ಯ ಅಜ್ಮತ್ ಉಲ್ಲಾ ಷರೀಫ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

40 ಕೋಟಿ ವೆಚ್ಚದಲ್ಲಿ ಮದ್ದೂರು ಆಸ್ಪತ್ರೆ ಅಭಿವೃದ್ಧಿ

ಮದ್ದೂರು, ಏ.4– ಪಟ್ಟಣದ ಕೆ.ಗುರುಶಾಂತಪ್ಪ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯನ್ನು 40 ಕೋಟಿ ರೂ.ವೆಚ್ಚದಲ್ಲಿ ಅಭಿವೃದ್ಧಿಪಡಿಸಿ ಮೇಲ್ದರ್ಜೆಗೆ ಏರಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಶಾಸಕ ಕೆ.ಎಂ.ಉದಯ್ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಶುಕ್ರವಾರ ಆರೋಗ್ಯ ಹಾಗೂ ಪಿಡಬ್ಲ್ಯೂಡಿ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪಟ್ಟಣದಲ್ಲಿರುವ ಕೆ.ಗುರುಶಾಂತಪ್ಪ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯು ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದು, ಕೆಲವೊಂದು ಅನಾನುಕೂಲಗಳು ಈ ಹಿಂದಿನಿಂದಲೂ ಇರುವುದರಿಂದ ಎಲ್ಲಾ ಸಮಸ್ಯೆಗಳನ್ನು ಬಗೆ ಹರಿಸಿ ಸಾರ್ವಜನಿಕರಿಗೆ ಉತ್ತಮ ಸೇವೆಯನ್ನು ನೀಡುವ ಸಂಬಂಧ ಈ ತೀರ್ಮಾನ ಕೈಗೊಳ್ಳಲಾಗಿದೆ ಎಂದರು.

ಕೆ.ಗುರುಶಾಂತಪ್ಪ ಸರ್ಕಾರಿ ಆಸ್ಪತ್ರೆಯನ್ನು ಪಟ್ಟಣ ಸೇರಿದಂತೆ ಸುತ್ತಮುತ್ತ ನೂರಾರು ಗ್ರಾಮಗಳ ಗ್ರಾಮಸ್ಥರು ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಆದರೆ, ಆಸ್ಪತ್ರೆಯಲ್ಲಿ ಕೆಲವೊಂದು ಸಮಸ್ಯೆಗಳು ಇರುವುದರಿಂದ ಸಂಪೂರ್ಣವಾಗಿ ಚಿಕಿತ್ಸೆ ನೀಡಲು ತೊಂದರೆಯಾಗುತ್ತಿರುವುದರಿಂದ ಆಸ್ಪತ್ರೆಯನ್ನು ಅಭಿವೃದ್ಧಿಪಡಿಸಲು ಚಿಂತನೆ ನಡೆಸಲಾಗಿದೆ ಎಂದರು.

ಪಟ್ಟಣದ ವ್ಯಾಪ್ತಿಯಲ್ಲಿ ಬೆಂಗಳೂರು



ಶಾಸಕ ಕೆ.ಎಂ.ಉದಯ್ ಮದ್ದೂರಿನ ಪ್ರವಾಸಿ ಮಂದಿರದಲ್ಲಿ ಆರೋಗ್ಯ ಮತ್ತು ಪಿಡಬ್ಲ್ಯೂಡಿ ಅಧಿಕಾರಿಗಳ ಸಭೆ ನಡೆಸಿದರು.

ಮೈಸೂರು ಹೆದ್ದಾರಿ ಇರುವುದರಿಂದ ಕೆಲವು ಸಂದರ್ಭಗಳಲ್ಲಿ ಹೆದ್ದಾರಿ ಅಪಘಾತಗಳು ಸಂಭವಿಸಿದಾಗ ಈ ವೇಳೆ ಗಾಯಾಳುಗಳಿಗೆ ಸೂಕ್ತ ಹಾಗೂ ಉತ್ತಮ ಚಿಕಿತ್ಸೆ ಕೊಡಿಸುವ ಸಲುವಾಗಿ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ನೂತನ ಕಟ್ಟಡ ನಿರ್ಮಾಣ ಸೇರಿದಂತೆ ವೈದ್ಯರು ಉಳಿದುಕೊಳ್ಳಲು ವಸತಿ ಗೃಹಗಳು, ಸುಸಜ್ಜಿತ ಐಸಿಯು ಘಟಕ, ಹೈಟೆಕ್ ಪ್ರತ್ಯೇಕ ಪ್ರಯೋಗ ಶಾಲೆ, ಪ್ರತ್ಯೇಕ ಓಟಿ, ತುರ್ತು ಸೇವಾ ಘಟಕ, ನೂತನ ಡಯಾಲಿಸಿಸ್ ಕೇಂದ್ರ ನೂತನ ಶಸ್ತ್ರಚಿಕಿತ್ಸಾ ಕೊಠಡಿ ಸೇರಿದಂತೆ ಅಗತ್ಯ ಸೌಕರ್ಯಗಳನ್ನು ಹಾಗೂ ಶುಚಿತ್ವವನ್ನು ಗಮನದಲ್ಲಿಟ್ಟುಕೊಂಡು ಉತ್ತಮ ವಾತಾವರಣದೊಂದಿಗೆ ಅಭಿವೃದ್ಧಿಪಡಿಸಲಾಗುವುದು ಎಂದರು.

ಈ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಅಧಿಕಾರಿಗಳೊಂದಿಗೆ ಸಮಾಲೋಚನೆ ಮಾಡಿ ವರದಿ ಸಹಿತ ಸಲ್ಲಿಸಲಾಗುವುದು. ನಂತರ ಅನುದಾನ ಬಿಡುಗಡೆಯಾದ ಬಳಿಕ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಮಾಡಲಾಗುವುದು ಎಂದರು.


ಪ್ರಸ್ತುತ ಆಸ್ಪತ್ರೆಯಲ್ಲಿರುವ ವೈದ್ಯರು ಮತ್ತು ಸಿಬ್ಬಂದಿ ಕರ್ತವ್ಯಕ್ಕೆ ನಿಗದಿತ ಸಮಯಕ್ಕೆ ಬರಬೇಕು ಮತ್ತು ರೋಗಿಗಳಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗದಂತೆ ಚಿಕಿತ್ಸೆ ನೀಡಬೇಕು. ಇಲ್ಲದಿದ್ದ ಅಂತಹ ವೈದ್ಯರು ಹಾಗೂ ಸಿಬ್ಬಂದಿ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಆರೋಗ್ಯಾಧಿಕಾರಿ ಡಾ. ಮೋಹನ್, ತಾಲೂಕು ಆರೋಗ್ಯಾಧಿಕಾರಿ ಡಾ.ರವೀಂದ್ರಬಿ.ಗೌಡ, ಆಸ್ಪತ್ರೆಯ ಆಡಳಿತಾಧಿಕಾರಿ ಡಾ.ಬಾಲಕೃಷ್ಣ, ಪಿಡಬ್ಲ್ಯೂಡಿ ಎಇ ದೇವಾನಂದ್ ಸೇರಿದಂತೆ ಹಲವು ಅಧಿಕಾರಿಗಳು ಹಾಜರಿದ್ದರು.

ವೈರಮುಡಿ ಬ್ರಹ್ಮೋತ್ಸವ ಗರುಡ ಧ್ವಜಾರೋಹಣ

ಮೇಲುಕೋಟೆ, ಏ.4– ವೈರಮುಡಿ ಬ್ರಹ್ಮೋತ್ಸವಕ್ಕೆ ದೇವಾನುದೇವತೆಗಳನ್ನು ಬ್ರಹ್ಮೋತ್ಸವಕ್ಕೆ ಆಹ್ವಾನಿಸಿ ಭಕ್ತರ ಇಷ್ಟಾರ್ಥ ಕರುಣಿಸುವಂತೆ ಪ್ರಾರ್ಥಿಸಿ ಶುಕ್ರವಾರ ಗರುಡ ಧ್ವಜಾರೋಹಣ ನೆರವೇರಿಸಲಾಯಿತು.

ವೈರಮುಡಿ ಬ್ರಹ್ಮೋತ್ಸವದ ಒಂದನೇ ತಿರುನಾಳ್ ಅಂಗವಾಗಿ ಧ್ವಜಾರೋಹಣದ ನಿಮಿತ್ತ ಬೆಳಿಗ್ಗೆ 9.30 ಗಂಟೆ ವೇಳೆಗೆ ಗರುಡದೇವನನ್ನು ಪಟದಲ್ಲಿ ಪ್ರತಿಷ್ಠಾಪಿಸಿ, ವಿಶೇಷ ಹೋಮ ಹವನಾದಿ ಕಾರ್ಯಕ್ರಮಗಳನ್ನು ನೆರವೇರಿಸಲಾಯಿತು. 3ನೇ ಸ್ಥಾನೀಕರಿಂದ ಗರುಡಸಾಮ ಮಂತ್ರ ಪಠಣ ನೆರವೇರಿದ ನಂತರ ಚಿನ್ನದ ಧ್ವಜಸ್ಥಂಭದ ಮೇಲೆ ಗರುಡ ಧ್ವಜಾರೋಹಣ ಮಾಡಲಾಯಿತು. ಜಿಲ್ಲಾ ಉಸ್ತುವಾರಿ ಸಚಿವರ ಪುತ್ರ ಸಚಿನ್ ದಂಪತಿ ಸಮೇತ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಭಾಗಿಯಾಗಿ ಸ್ಥಾನಾಚಾರ್ಯ ಶ್ರೀನಿವಾಸನರಸಿಂಹನ್ ಗುರೂಜಿ ಮಾರ್ಗದರ್ಶನದಲ್ಲಿ ಚೆಲುವನಾರಾಯಣಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿದರು. ಆರಿದ್ರಾ ಮಾಸ ತಿರುನಕ್ಷತ್ರದ ಅಂಗವಾಗಿ ಭಗವದ್ರಾಮಾನುಜಾಚಾರ್ಯ ಅವರಿಗೆ ಬೆಳಿಗ್ಗೆ ಅಭಿಷೇಕ ನೆರವೇರಿತು. ನಂತರ ಶಾತ್ತುಮೊರೈಸಹಿತವಾದ ಮಹಾ ಮಂಗಳಾರತಿ ನೆರವೇರಿಸಲಾಯಿತು. ಭೇರಿತಾಡನ ತಿರುಪ್ಪೊರೈ ನಡೆದ ನಂತರ ಚಲುವನಾರಾಯಣ ಸ್ವಾಮಿಗೆ ರಾತ್ರಿ ಹಂಸವಾಹನ ಕಾರ್ಯಕ್ರಮಗಳು ನಡೆದವು. ಎರಡನೇ ತಿರುನಾಳ್ ನಿಮಿತ್ತ ಶನಿವಾರ ರಾತ್ರಿ 7ಗಂಟೆಗೆ ಶೇಷ ವಾಹನೋತ್ಸವ ವೈಭವದಿಂದ ನೆರವೇರಲಿದೆ.



ರಾಮಾನುಜಾ ಚಾರ್ಯರಿಗೆ ಅಭಿಷೇಕ ನೆರವೇರಿಸಲಾಯಿತು.

ಇಂದು ಕಿಕ್ಕೇರಮ್ಮನ ಜಾತ್ರೆ

ಕಿಕ್ಕೇರಿ: ಲಕ್ಷ್ಮೀಪುರ ಅವಳಿ ಗ್ರಾಮದ ಕಿಕ್ಕೇರಮ್ಮನವರ ಜಾತ್ರಾ ಮಹೋತ್ಸವದ ರಥೋತ್ಸವ ಏ.5ರಂದು ಸಂಜೆ 4.30 ರಿಂದ 5.30ರ ಶುಭ ಮುಹೂರ್ತದಲ್ಲಿ ಸಹಸ್ರಾರು ಭಕ್ತರ ಸಂಗಮದಲ್ಲಿ ನೆರವೇರಲಿದೆ ಎಂದು ದೇವಸ್ಥಾನದ ಪ್ರಕಟಣೆ ತಿಳಿಸಿದೆ

ಕಟ್ಟೇರಿ ಗ್ರಾಮದಲ್ಲಿ ಶ್ರೀರಾಮಮಂದಿರ ಚರ ಪ್ರತಿಷ್ಠಾಪನೆ

ದೇವಸ್ಥಾನಗಳಿಂದ ಜನರ ಮನಸ್ಸಿನಲ್ಲಿ ಶಾಂತಿ, ನೆಮ್ಮದಿ: ಸಿ.ಎಸ್.ಪುಟ್ಟರಾಜು

ಪಾಂಡವಪುರ, ಏ.4– ಗ್ರಾಮಗಳಲ್ಲಿ ದೇವಸ್ಥಾನಗಳು ನಿರ್ಮಾಣವಾಗುವುದರಿಂದ ಜನರ ಮನಸ್ಸಿನಲ್ಲಿ ಶಾಂತಿ, ನೆಮ್ಮದಿ ನೆಲೆಸುವ ಜೊತೆಗೆ ಜನರಲ್ಲಿ ಧಾರ್ಮಿಕ ಪ್ರಜ್ಞೆ ಮೂಡುತ್ತದೆ ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ತಿಳಿಸಿದ್ದಾರೆ.

ತಾಲೂಕಿನ ಕಟ್ಟೇರಿ ಗ್ರಾಮದಲ್ಲಿ ನೂತನವಾಗಿ ಜೀರ್ಣೋದ್ಧಾರಗೊಂಡ ಶ್ರೀರಾಮ ಮಂದಿರ ಚರ ಪ್ರತಿಷ್ಠಾಪನೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ದೇವಸ್ಥಾನಗಳು ನಿರ್ಮಾಣಗೊಳ್ಳುವುದರಿಂದ ಜನರು ಪರಸ್ಪರ ಬೆರೆತು ಅವರಲ್ಲಿರುವ ವೈಮನಸ್ಸುಗಳು ಕಡಿಮೆಯಾಗುತ್ತವೆ. ಆ ಉದ್ದೇಶದಿಂದಲೇ ನಮ್ಮ ಪೂರ್ವಿಕರು ಗ್ರಾಮಗಳಲ್ಲಿ ದೇವಾಲಯಗಳನ್ನು ನಿರ್ಮಾಣ ಮಾಡುವ ಕೆಲಸ ಮಾಡಿದ್ದಾರೆ. ಪ್ರಸ್ತುತ ದಿನಗಳಲ್ಲಿ ಮಕ್ಕಳಿಗೆ ಧಾರ್ಮಿಕ ಪ್ರಜ್ಞೆಯನ್ನು ಸಹ ಮೂಡಿಸುವ ಅಗತ್ಯವಿದೆ ಎಂದರು.

ಕಟ್ಟೇರಿ ಗ್ರಾಮದಲ್ಲಿ ಇದ್ದಂತಹ ಹಳೇ ಶ್ರೀರಾಮಮಂದಿರ ದೇವಸ್ಥಾನವನ್ನು ಗ್ರಾಮಸ್ಥರು ಸೇರಿ ದಾನಿಗಳ ನೆರವಿನಿಂದ ನೂತನವಾಗಿ ಜೀರ್ಣೋದ್ಧಾರ ಮಾಡಿದ್ದಾರೆ.



ಶ್ರೀರಾಮಮಂದಿರ ದೇವಸ್ಥಾನವನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಉದ್ಘಾಟಿಸಿದರು.

ದೇವಸ್ಥಾನದ ನಿರ್ಮಾಣಕ್ಕೆ ಏಟ್ರಿಯ ಬೃಂದಾವನ ಪವರ್ ಕಂಪನಿಯವರು 20 ಲಕ್ಷ ಹಣವನ್ನು ನೆರವು ನೀಡಿದ್ದಾರೆ. ಗ್ರಾಮಗಳಲ್ಲಿ ನಿರ್ಮಿಸಲಾಗುವ ದೇವಸ್ಥಾನಗಳಿಗೆ ಗ್ರಾಮಸ್ಥರು ಆರ್ಥಿಕವಾಗಿ ಸಹಕಾರ ನೀಡಬೇಕು. ಗ್ರಾಮಗಳಲ್ಲಿ ದೇವಸ್ಥಾನ ನಿರ್ಮಾಣ ಮಾಡುವುದರ ಜತೆಗೆ ದೇವಸ್ಥಾನದಲ್ಲಿ ನಿತ್ಯ ಪೂಜೆ ನಡೆಸಿಕೊಂಡು ಮುನ್ನಡೆಯಬೇಕು ಎಂದರು. ಇದೇ ವೇಳೆ ಮಾಜಿ ಸಚಿವ ಪುಟ್ಟರಾಜು ಅವರನ್ನು ಅಭಿನಂದಿಸಲಾಯಿತು. ಕಾರ್ಯಕ್ರಮಕ್ಕೂ ಮುನ್ನ ಬೆಳಿಗ್ಗೆ 6 ಗಂಟೆಯಿಂದಲೇ ಮಹಾಗಣಪತಿ ಹೋಮ, ನವಗ್ರಹ ಹೋಮ, ಪೀಠಸ್ಥಾಪನೆ, ಶ್ರೀರಾಮ ದೇವರ ಚರ ಪ್ರತಿಷ್ಠಾಪನೆ ಮಹೋತ್ಸವ, ಪ್ರತಿಷ್ಠಂಗ ಹೋಮ, ಕಲಾವೃದ್ಧಿ ಹೋಮ, ರಾಮತಾರಕ ಹೋಮ, ಶ್ರೀಸೂಕ್ತಹೋಮ, ಪುರುಷ ಸೂಕ್ತ ಹೋಮ, ಪವಮಾನ ಹೋಮ, ಪಂಚಬ್ರಹ್ಮ ಮಂತ್ರದಿಂದ ಹೋಮ ಮಹಾ ಪೂರ್ಣಾಹುತಿ, ಮಹಾಮಂಗಳರಾತಿ ನಡೆಯಿತು. ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು

ಏ.9, ಸಾರ್ವಜನಿಕರ ಕುಂದುಕೊರತೆ ಸಭೆ

ಮಂಡ್ಯ,ಏ4– ಲೋಕಾಯುಕ್ತ ವಿಭಾಗದ ಅಧಿಕಾರಿಗಳು ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನಲ್ಲಿ ಏ.9 ರಂದು ಬೆಳಿಗ್ಗೆ 11 ಗಂಟೆಯಿಂದ 1.30 ಗಂಟೆಯವರೆಗೆ ಮದ್ದೂರು ತಾಲೂಕು ಕಛೇರಿ ಆವರಣದಲ್ಲಿ ಸಾರ್ವಜನಿಕರ ಕುಂದುಕೊರತೆ ಸಭೆ ನಡೆಸಿ ಸಾರ್ವಜನಿಕರಿಂದ ದೂರು, ಅಹವಾಲು ಮತ್ತು ಭ್ರಷ್ಟಾಚಾರಕ್ಕೆ ಸಂಬಂಧಿಸಿದ ದೂರುಗಳನ್ನು ಸಹ ಸ್ವೀಕರಿಸಲಿದ್ದಾರೆ.

ರಾಷ್ಟ್ರೀಯ ಭೂಮಾಪನ ದಿನಾಚರಣೆ

ಮಂಡ್ಯ,ಏ.4– 36ನೇ ರಾಷ್ಟ್ರೀಯ ಭೂಮಾಪನ ದಿನಾಚರಣೆಯನ್ನು ಮುಖ್ಯ ಮಂತ್ರಿಗಳು, ಉಪಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರ ಉಪಸ್ಥಿತಿಯಲ್ಲಿ ಏ.10 ರಂದು ಬೆಳಿಗ್ಗೆ 11 ಗಂಟೆಗೆ ಬೆಂಗಳೂರಿನ ವಿಧಾನಸೌಧ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಭೂದಾಖಲೆಗಳ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

ಮಸೂದೆಗೆ ಸಂಸತ್ ಅಂಗೀಕಾರ

ವಕ್ಫ್ ಎಂದು ಘೋಷಿಸುವ ಮುನ್ನ ಮಾಲೀಕತ್ವದ ಪುರಾವೆ ಅಗತ್ಯ ವಾಗಲಿದೆ. ಇದು ವಕ್ಫ್ ಮಂಡಳಿಯು ತನ್ನದೆಂದು ಹಕ್ಕು ಸಾಧಿಸುವ ಆಸ್ತಿಯನ್ನು ಸ್ವಯಂ ಚಾಲಿತವಾಗಿ ವಕ್ಫ್ ಆಸ್ತಿ ಎಂದು ಹೆಸರಿಸಲು ಕಾರಣವಾಗಿದ್ದ ಹಿಂದಿನ ನಿಬಂಧನೆಯನ್ನು ತೆಗೆದುಹಾಕಲಿದೆ ಎಂದರು. ರಿಜಿಜು ಮತ್ತು ಕೇಂದ್ರ ಗೃಹಸಚಿವ ಅಮಿತ್ ಶಾ ಅವರು ಗುರುವಾರ ವಕ್ಫ್ ಹಣೆಪಟ್ಟಿ ಅಂಟಿಸಿಕೊಂಡ ಆಸ್ತಿಗಳನ್ನು ಪಟ್ಟಿ ಮಾಡಿದ್ದರು. ಇವುಗಳಲ್ಲಿ ದಿಲ್ಲಿಯ ಲುಟ್ಯೆನ್ಸ್ ಪ್ರದೇಶದಲ್ಲಿಯ ಆಸ್ತಿಗಳು, ತಮಿಳುನಾಡಿನಲ್ಲಿರುವ ಸುಮಾರು 400 ವರ್ಷಗಳಷ್ಟು ಹಳೆಯದಾದ ದೇವಸ್ಥಾನ, ಪಂಚತಾರಾ ಹೋಟೆಲ್‌ಗಾಗಿ ಭೂಮಿ ಮತ್ತು ಹಳೆಯ ಸಂಸತ್ ಕಟ್ಟಡ ಕೂಡ ಸೇರಿದ್ದವು.

ರಿಜಿಜು ಹೇಳಿಕೆಗೆ ಪ್ರತಿಕ್ರಿಯಿಸಿದ ಕಾಂಗ್ರೆಸ್ ಸಂಸದ ಸೈಯದ್ ನಾಸೀರ್ ಹುಸೇನ್, 123 ಆಸ್ತಿಗಳ ಬಗ್ಗೆ ಗೊಂದಲವನ್ನು ಸೃಷ್ಟಿಸುತ್ತಿದ್ದಾರೆ. ಅವು ಮಸೀದಿಗಳು, ದಫನ ಭೂಮಿಗಳು ಅಥವಾ ದರ್ಗಾಗಳಾಗಿವೆ ಎಂದು ಹೇಳಿದರು. ನಾನು ಅವುಗಳ ಪಟ್ಟಿಯನ್ನು ಸಲ್ಲಿಸಲು ಬಯಸುತ್ತೇನೆ. ಬ್ರಿಟಿಷರು ಲುಟ್ಯೆನ್ಸ್ ದಿಲ್ಲಿಯನ್ನು ಆಕ್ರಮಿಸಿಕೊಂಡಾಗ ಪ್ರದೇಶ ನಿರ್ಮಾಣದ ಬಳಿಕ ಅವರು ಈ ಆಸ್ತಿಗಳನ್ನು ವಕ್ಫ್‌ಗೆ ಹಸ್ತಾಂತರಿಸಿದ್ದರು. ಈ ಆಸ್ತಿಗಳು ವಕ್ಫ್ ಬಳಿಯಿವೆ. 2013ಕ್ಕೆ ಸಂಬಂಧಿಸಿದಂತೆ ರಿಜಿಜು ಇವುಗಳನ್ನು ಉಲ್ಲೇಖಿಸುತ್ತಿದ್ದಾರೆ ಎಂದು ಹೇಳಿದರು.

ಮಸೂದೆಯ ಪರವಾಗಿ ಮಾತನಾಡಿದ ಕೇಂದ್ರ ಸಚಿವ ಜೆ.ಪಿ.ನಡ್ಡಾ, ಪ್ರತಿಪಕ್ಷಗಳು ವಿಷಯವನ್ನು ಬೇರೆಡೆಗೆ ತಿರುಗಿಸಲು ಮತ್ತು ಹಳಿ ತಪ್ಪಿಸಲು ಪ್ರಯತ್ನಿಸುತ್ತಿವೆ ಎಂದು ಆರೋಪಿಸಿದರು. ಅವು ಮುಸ್ಲಿಮ್ ಸಮುದಾಯದ ವಂಚಿತ ವರ್ಗಗಳ ಬಗ್ಗೆ ಗಮನಹರಿಸಿದರೆ ಒಳ್ಳೆಯದು ಎಂದು ಪ್ರತಿಪಾದಿಸಿದ ನಡ್ಡಾ,ಮುಸ್ಲಿಮ್ ದೇಶಗಳು ವಕ್ಫ್ ಆಸ್ತಿಗಳನ್ನು ಪಾರದರ್ಶಕಗೊಳಿಸುತ್ತಿರುವಾಗ ಮತ್ತು ವ್ಯವಸ್ಥೆಗೆ ಡಿಜಿಟಲ್ ರೂಪವನ್ನು ನೀಡುತ್ತಿರುವಾಗ ಭಾರತವೇಕೆ ಬದಲಾವಣೆಗಳನ್ನು ಮಾಡಲು ಸಾಧ್ಯವಿಲ್ಲ ಎಂದು ಪ್ರಶ್ನಿಸಿದರು.

ಈ ಮಸೂದೆಯನ್ನು ಪ್ರತಿಷ್ಠೆಯ ವಿಷಯವನ್ನಾಗಿ ಮಾಡಬಾರದು ಎಂದು ಹೇಳಿದ ವಿಪಕ್ಷ ನಾಯಕ ಹಾಗೂ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು, ನೀವು (ಸರ್ಕಾರ) ಮಾಡುತ್ತಿರುವುದು ಒಳ್ಳೆಯದಲ್ಲ. ಇದು ದೇಶದಲ್ಲಿ ವಿವಾದಗಳಿಗೆ ಕಾರಣವಾಗುತ್ತದೆ. ನೀವು ವಿವಾದಗಳಿಗೆ ಬೀಜಗಳನ್ನು ಬಿತ್ತುತ್ತಿದ್ದೀರಿ. ಮಸೂದೆಯನ್ನು ಹಿಂತೆಗೆದುಕೊಳ್ಳುವಂತೆ ನಾನು ಗೃಹ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ದೋಷಗಳನ್ನು ಸರಿಪಡಿಸುವುದರಲ್ಲಿ ಹಾನಿಯೇನಿದೆ ಎಂದು ಪ್ರಶ್ನಿಸಿದರು.

ಮಸೂದೆಯು ಲೋಕಸಭೆಯಲ್ಲಿ 288 ಪರ ಮತ್ತು 232 ವಿರುದ್ಧ ಮತಗಳೊಂದಿಗೆ ಅಂಗೀಕಾರಗೊಂಡಿದೆ ಎಂದು ಹೇಳಿದ ಖರ್ಗೆ, ಪ್ರತಿಯೊಬ್ಬರೂ ಅದನ್ನು ಒಪ್ಪಿಕೊಂಡಿದ್ದಾರೆಯೇ, ಇಲ್ಲ. ಅಂದರೆ ಮಸೂದೆಯಲ್ಲಿ ನ್ಯೂನತೆಗಳಿವೆ ಎಂದು ಅರ್ಥ. ನೀವು 'ಜಿಸ್ ಕಿ ಲಾಠಿ ಉಸೀ ಕಿ ಭೈಂಸ್' ಎಂದು ಹೋದರೆ ಅದು ಯಾರಿಗೂ ಒಳ್ಳೆಯದಲ್ಲ ಎಂದರು.

ಕರ್ನಾಟಕದಲ್ಲಿ ವಕ್ಫ್ ಆಸ್ತಿ ಕಬಳಿಸಿದ 13 ನಾಯಕರ ಹೆಸರು ಬಹಿರಂಗ

ನವದೆಹಲಿ, ಏ.4– ದೇಶಾದ್ಯಂತ ಭಾರೀ ಕುತೂಹಲ ಮತ್ತು ಚರ್ಚೆಗೆ ಕಾರಣವಾಗಿದ್ದ ವಕ್ಫ್ (ತಿದ್ದುಪಡಿ) ಮಸೂದೆ ರಾಜ್ಯಸಭೆಯಲ್ಲೂ ಅಂಗೀಕಾರಗೊಂಡಿದೆ. ಆ ಮೂಲಕ ಸಂಸತ್ತಿನ ಉಭಯ ಸದನದಲ್ಲಿ ಬಿಲ್ ಪಾಸ್ ಆಗಿದೆ. ಇನ್ನು ರಾಷ್ಟ್ರಪತಿಯವರ ಅಂಕಿತ ಬೀಳುತ್ತಿದ್ದಂತೆಯೇ ಮಸೂದೆ ಅಧಿಕೃತವಾಗಲಿದೆ.

ಕರ್ನಾಟಕದಲ್ಲಿ ವಕ್ಫ್ ಆಸ್ತಿಯನ್ನು ಸಾಕಷ್ಟು ನಾಯಕರು, ಅದರಲ್ಲಿ ಬಹುತೇಕ ಕಾಂಗ್ರೆಸ್ ನಾಯಕರು ಕಬಳಿಸಿದ್ದಾರೆ ಎಂದು ಬಿಜೆಪಿ ಸತತವಾಗಿ ಆರೋಪ ಮಾಡುತ್ತಾ ಬರುತ್ತಿತ್ತು. ಬಿಜೆಪಿಯ ನಾಯಕ ಮತ್ತು ಹಮೀರ್‌ಪುರ್ ಲೋಕಸಭಾ ಕ್ಷೇತ್ರದ ಸಂಸದ ಅನುರಾಗ್ ಠಾಕೂರ್, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರ ಮೇಲೂ ಆರೋಪ ಮಾಡಿದ್ದರು. ಈಗ ಬಿಜೆಪಿಯ ರಾಜ್ಯಸಭಾ ಸದಸ್ಯ ರಾಧಾ ಮೋಹನದಾಸ್ ಅಗರ್ವಾಲ್, ಕರ್ನಾಟಕದಲ್ಲಿ ಯಾವ ಯಾವ ನಾಯಕರು ವಕ್ಫ್ ಆಸ್ತಿಯನ್ನು ಕಬಳಿಸಿದ್ದಾರೆ ಎಂಬ ವಿವರವನ್ನು ಸದನದ ಕಲಾಪದ ವೇಳೆಯೇ ಬಹಿರಂಗಪಡಿಸುವ ಮೂಲಕ ಕಾಂಗ್ರೆಸ್ಸಿಗೆ ಇನ್ನಿಲ್ಲದ ಮುಜುಗರವನ್ನು ತಂದೊಡ್ಡಿದ್ದಾರೆ.

ಕರ್ನಾಟಕದಲ್ಲಿ ಖಮರುಲ್ ಇಸ್ಲಾಂ – ಮಾಜಿ ಸಚಿವ, ನರಸಿಂಗರಾವ್ ಸೂರ್ಯವಂಶಿ – ಮಾಜಿ ಸಂಸದ, ಸಿ.ಎಂ.ಇಬ್ರಾಹಿಂ – ಮಾಜಿ ಕೇಂದ್ರ ಸಚಿವ, ಕೆ.ರೆಹಮಾನ್ ಖಾನ್ – ಮಾಜಿ ಕೇಂದ್ರ ಸಚಿವ, ಅಬ್ದುಲ್ಲಾ ಸಲೀಂ – ವಕ್ಫ್ ಬೋರ್ಡ್ ಅಧಿಕಾರಿ, ಎನ್.ಎ.ಹ್ಯಾರೀಸ್ – ಹಾಲೀ ಶಾಸಕ, ಎಂ.ಎ.ಖಲೀದ್ – ಮಾಜಿ ಅಧಿಕಾರಿ, ಮಮ್ತಾಜ್ ಅಹ್ಮದ್ ಖಾನ್ – ಅಧ್ಯಕ್ಷರು, ಮೊಹಮ್ಮದ್ ಸನುಲ್ಲಾ – ಐಎಎಸ್ ಅಧಿಕಾರಿ, ಸಿಂಧೂಸ್ ಗಿರಿ – ಮಾಜಿ ಸಚಿವ, ಎಂ.ಎಸ್. ಬಾಷಾ – ಐಎಂಐಸಿಎಸ್, ಖನೀಜಾ ಫಾತಿಮಾ – ಹಾಲೀ ಶಾಸಕಿ, ಸಿ.ಕೆ.ಜಾಫರ್ ಷರೀಫ್ – ಮಾಜಿ ಕೇಂದ್ರ ಸಚಿವ.

ಇನ್ನೂ ಒಂದು ಪ್ರಮುಖ ಹೆಸರು ಪಟ್ಟಿಯಲ್ಲಿದೆ. ಆ ಹೆಸರನ್ನು ನಾನು ಹೇಳುವುದಿಲ್ಲ. ಅದು ಸದನದ ಮರ್ಯಾದೆಯ ಪ್ರಶ್ನೆ, ಹಾಗಾಗಿ ಗೌರವ ಸೂಚಕವಾಗಿ ಆ ಹೆಸರನ್ನು ಬಹಿರಂಗ ಪಡಿಸುವುದಿಲ್ಲ ಎಂದರು.

ಬಿಜೆಪಿ ಕಾರ್ಯಕರ್ತ ವಿನಯ್ ಸೋಮಯ್ಯ ಆತ್ಮಹತ್ಯೆ

ಕ್ಷೇತ್ರದ ಅಭಿವೃದ್ಧಿ ಬಗ್ಗೆ ಪ್ರಶ್ನೆ ಮಾಡಿದ್ದಕ್ಕೆ ನನ್ನ ಮೇಲೆ ಕೇಸ್ ದಾಖಲಿಸಿದರು. ನ್ಯಾಯಾಲಯದಿಂದ ಜಾಮೀನು ಸಿಕ್ಕಿದ್ದರೂ ನನ್ನ ಸ್ನೇಹಿತನ ಮನೆಗೆ ಪೊಲೀಸರನ್ನು ಕಳುಹಿಸಿ ನನ್ನ ಬಗ್ಗೆ ವಿಚಾರಿಸುವ ಮೂಲಕ ಅವಮಾನ ಮಾಡಿದ್ದಾರೆ. ಇದೆಲ್ಲಾ ವಿರಾಜಪೇಟೆ ಶಾಸಕ ಪೊನ್ನಣ್ಣ ಆದೇಶದಂತೆ ನಡೆದಿದೆ. ಪೋಸ್ಟ್‌ನಲ್ಲಿ ಯಾರೋ ಹಾಕಿದ ಫೋಟೋಗೆ ನಮ್ಮ ಮೇಲೆ ರೌಡಿಶೀಟ್ ಓಪನ್ ಮಾಡುವ ಹುನ್ನಾರ ನಡೆದಿದೆ. ಇಂತಹವರಿಗೆ ಸರಿಯಾದ ಶಿಕ್ಷೆಯಾದರೆ ನನ್ನ ಸಾವಿಗೆ ನ್ಯಾಯ ಸಿಗುತ್ತದೆ ಎಂದು ವಿನಯ್ ಡೆತ್ ನೋಟ್‌ನಲ್ಲಿ ಬರೆದಿದ್ದಾರೆ.

ವಿನಯ್ ಸೋಮಯ್ಯ ಆತ್ಮಹತ್ಯೆಗೂ ಮುನ್ನ ವಾಟ್ಸಾಪ್ ಗ್ರೂಪ್‌ನಲ್ಲಿ ಹಾಕಿದ್ದ ಕೊನೆಯ ಸಂದೇಶವನ್ನು ಮಾಜಿ ಸಂಸದ ಪ್ರತಾಪ್ ಸಿಂಹ ತಮ್ಮ ಸೋಶಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದಾರೆ.

ಹಿನ್ನೆಲೆ: ಶಾಸಕ ಪೊನ್ನಣ್ಣ ಅವರ ವಿರುದ್ಧ ಅವಹೇಳನಾಕಾರಿ ಪೋಸ್ಟ್ ಮಾಡಲಾಗಿದೆ ಎಂದು ಕೊಡಗಿನ ಕಾಂಗ್ರೆಸ್ ಮುಖಂಡ ತೆನ್ನೀರಾ ಮೈನಾ ಅವರು ವಿನಯ್ ಸೋಮಣ್ಣ ಸೇರಿದಂತೆ ಮೂವರು ವಾಟ್ಸಾಪ್ ಅಡ್ಮಿನ್‌ಗಳ ವಿರುದ್ಧ ಕಳೆದ ಫೆಬ್ರವರಿಯಲ್ಲಿ ಮಡಿಕೇರಿ ಪೋಲಿಸರಿಗೆ ದೂರು ಸಲ್ಲಿಸಿದ್ದರು. ಈ ಪ್ರಕರಣದಲ್ಲಿ ವಿನಯ್ ಸೋಮಯ್ಯ ಸೇರಿದಂತೆ ಮೂವರೂ ಅಡ್ಮಿನ್‌ಗಳೂ ಜಾಮೀನು ಪಡೆದಿದ್ದಲ್ಲದೇ, ಹೈಕೋರ್ಟ್‌ನಿಂದ ಎಫ್‌ಐಆರ್‌ಗೆ ತಡೆಯಾಜ್ಞೆ ತಂದಿದ್ದರು.

> ಘಟನೆ ಕುರಿತು ಡಿಸಿಪಿ ತನಿಖೆ ನಡೆಸಲಿದ್ದು, ವರದಿ ನಂತರ ಕ್ರಮ ಕೈಗೊಳ್ಳಲಾಗುವುದು. ಸಾಮಾಜಿಕ ಜಾಲತಾಣದಲ್ಲಿ ಬಂದಿದ್ದೆಲ್ಲಾ ಸತ್ಯ ಇರುವುದಿಲ್ಲ. ಪರಿಶೀಲಿಸಿ ಸತ್ಯಾಂಶ ಇದ್ದರೆ ಕ್ರಮ ಕೈಕೊಳ್ಳುತ್ತೇವೆ. ಆತ್ಮಹತ್ಯೆ ಹಿಂದೆ ಯಾರದ್ದಾದರು ಪ್ರಭಾವ ಇದೆಯೇ ಎಂಬ ಕುರಿತು ಪರಿಶೀಲಿಸಲಾಗುವುದು. ಪೊಲೀಸರು ತನಿಖೆ ನಡೆಸಿ ಮುಂದಿನ ಕ್ರಮ ತೆಗೆದುಕೊಳ್ಳುತ್ತಾರೆ.
>
> -ಡಾ. ಜಿ.ಪರಮೇಶ್ವರ್, ಗೃಹ ಸಚಿವರು

> ವಿನಯ್ ಆತ್ಮಹತ್ಯೆಗೂ ನನಗೂ ಯಾವುದೇ ಸಂಬಂಧ ಇಲ್ಲ. ವಿನಯ್ ಯಾರೆಂಬುದೇ ನನಗೆ ಗೊತ್ತಿಲ್ಲ. ಇದುವರೆಗೂ ನಾನು ಆತನನ್ನು ಭೇಟಿ ಆಗಿಲ್ಲ. ಶಾಸಕ ಪೊನ್ನಣ್ಣ ವಿರುದ್ಧ ಅವಹೇಳನಕಾರಿ ಪೋಸ್ಟ್ ಮಾಡಿದ್ದರು. ಇದರ ವಿರುದ್ಧ ನಾನು ಮಡಿಕೇರಿ ಠಾಣೆಯಲ್ಲಿ ದೂರು ದಾಖಲಿಸಿದ್ದೆ. ಹೈಕೋರ್ಟ್‌ನಿಂದ ತಡೆಯಾಜ್ಞೆ ತಂದಿದ್ದರು. ಅಲ್ಲಿಗೆ ಪ್ರಕರಣವನ್ನು ಬಿಟ್ಟಿದ್ದೆವು. ಆತ್ಮಹತ್ಯೆಗೆ ಬಿಜೆಪಿಯವರೇ ಕುಮ್ಮಕ್ಕು ನೀಡಿರಬೇಕು. ವಿನಯ್ ಸೋಮಯ್ಯ ಆತ್ಮಹತ್ಯೆ ಬಗ್ಗೆ ತನಿಖೆಯಾಗಲಿ.
>
> -ತೆನ್ನೀರಾ ಮೈನಾ, ಶಾಸಕ ಪೊನ್ನಣ್ಣ ಆಪ್ತ

> ವಿನಯ್ ಯಾರೆಂದು ನನಗೆ ಗೊತ್ತಿಲ್ಲ. ಆತ್ಮಹತ್ಯೆ ಹಿಂದೆ ನನ್ನ ಆಪ್ತ ತೆನ್ನೀರಾ ಕೈವಾಡ ಇಲ್ಲ. ತೆನ್ನೀರಾ ಕಾಂಗ್ರೆಸ್ ಕಾರ್ಯಕರ್ತ ಹಾಗೂ ಸಾಮಾಜಿಕ ಜಾಲತಾಣದಲ್ಲಿ ಸಕ್ರಿಯವಾಗಿದ್ದಾರೆ. ನನ್ನ ವಿರುದ್ಧ ಯಾರೋ ಆರೋಪ ಮಾಡಿರಬಹುದು. ವಿನಯ್ ಆತ್ಮಹತ್ಯೆಗೂ ನನಗೂ ಯಾವುದೇ ಸಂಬಂಧವಿಲ್ಲ. ಅವರ ಆತ್ಮಹತ್ಯೆ ನನಗೆ ಬೇಸರ ತಂದಿದೆ.
>
> -ಎ.ಎಸ್.ಪೊನ್ನಣ್ಣ, ಶಾಸಕ, ವಿರಾಜಪೇಟೆ ಕ್ಷೇತ್ರ

ಬಿಜೆಪಿ ಕಾರ್ಯಕರ್ತ ವಿನಯ್ ಆತ್ಮಹತ್ಯೆಗೆ ಎಸ್‌ಪಿ ಸೇರಿದಂತೆ ಮೂವರು ನೇರ ಕಾರಣ

ಬೆಂಗಳೂರು, ಏ.4– ಆತ್ಮಹತ್ಯೆ ಮಾಡಿಕೊಂಡ ಮಡಿ ಕೇರಿಯ ಬಿಜೆಪಿ ಕಾರ್ಯಕರ್ತ ವಿನಯ್ ಸೋಮಯ್ಯ ಅವರಿಗೆ ನಿರಂತರವಾಗಿ ಕಾಂಗ್ರೆಸ್ಸಿನ ಎಂಎಲ್‌ಎ ಗಳ ಆಪ್ತ ತನ್ನೀರ್ ಮೈನಾ ಅವರು ಅಲ್ಲಿನ ಎಸ್‌ಪಿ ಬೆಂಬಲ ದಿಂದ ಕಿರುಕುಳ ಕೊಡಲಾಗುತ್ತಿತ್ತು. ಈ ಸಾವಿಗೆ ಈ ಮೂವರು ಮತ್ತು ಎಸ್‌ಪಿ ನೇರ ಕಾರಣ ಎಂದು ವಿಪಕ್ಷ ನಾಯಕ ಆರ್.ಅಶೋಕ್ ಆರೋಪಿಸಿದ್ದಾರೆ. ವಿನಯ್ ಸೋಮಯ್ಯ ಅವರಿಗೆ ಅಂತಿಮ ನಮನ ಸಲ್ಲಿಸಲು ಬೆಂಗಳೂರಿನ ಡಾ. ಬಿ.ಆರ್.ಅಂಬೇಡ್ಕರ್ ಆಸ್ಪತ್ರೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಸೋಷಿಯಲ್ ಮೀಡಿಯಾದ ಒಂದು ಪೋಸ್ಟ್ ಅನ್ನು ಫಾರ್ವರ್ಡ್ ಮಾಡಿದ್ದಕ್ಕೆ ಕಿರುಕುಳ ಕೊಡಲಾಗಿದೆ. ಇದಕ್ಕೆ ದಾಖಲೆಗಳಿವೆ. ಡೆತ್ ನೋಟಿನಲ್ಲೂ ತಿಳಿಸಿದ್ದಾರೆ ಎಂದರು.



ಎಂಎಲ್‌ಎ ಕೂಡ ಧಮ್ಕಿ ಹಾಕಿದ್ದಾರೆ. ವಿನಯ್ ಅವರು ಹೈಕೋರ್ಟ್‌ನಲ್ಲಿ ಜಾಮೀನು ಪಡೆದಿದ್ದಾರೆ. ಅವರ ಬೆಂಗಳೂರು ಮನೆಗೂ ಪೊಲೀಸರು ಬಂದಿದ್ದರು. ಪೊಲೀಸ್ ಸ್ಟೇಷನ್‌ಗಳನ್ನು ಕಾಂಗ್ರೆಸ್ ಕಚೇರಿ ಮಾಡಿಕೊಂಡಿದ್ದಾರೆ. ಪೊಲೀಸರ ಮೇಲೆ ಒತ್ತಡ ಹೇರುತ್ತಾರೆ. ಈ ಮೂಲಕ ರಾಜಕೀಯ ದ್ವೇಷ ತೀರಿಸಿಕೊಳ್ಳಲು ಬಳಸಲಾಗುತ್ತಿದೆ ಎಂದು ಆರೋಪಿಸಿದರು. ವಿನಯ್ ಸೋಮಯ್ಯ ಅವರ ಸಾವಿನ ಪ್ರಕರಣದಲ್ಲಿ ಎಸ್.ಪಿ. ನೇರ ಹೊಣೆ ಎಂಬುದು ಗೊತ್ತಾಗಿದೆ. ಎಸ್‌ಪಿಯವರನ್ನು ಅಮಾನತು ಮಾಡಬೇಕು. ಪ್ರಕರಣದಲ್ಲಿ ಒಳಗೊಂಡ ಆರೋಪಿತರಾದ ಶಾಸಕರಾದ ಪೊನ್ನಣ್ಣ, ಮಂತರ್‌ಗೌಡ, ತನ್ನೀರ್ ಮೈನಾ ಅವರನ್ನು ಎಫ್‌ಐಆರ್‌ನಲ್ಲಿ ಸೇರಿಸಿ ತನಿಖೆ ನಡೆಸಬೇಕು. ಅವರನ್ನು ಬಂಧಿಸಬೇಕು ಎಂದು ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಆಗ್ರಹಿಸಿದ್ದಾರೆ.

ಶೀಘ್ರವೇ ಆರಂಭಿಸಿ

ಎಲ್ಲಾ ವೆಚ್ಚಗಳಲ್ಲದೆ, ವಿಸ್ತರಣೆಗೆ ಅಗತ್ಯವಿರುವ ಬಂಡವಾಳ ಮತ್ತಿತರ ವೆಚ್ಚಗಳನ್ನೂ ಪ್ರಾಧಿಕಾರ ಭರಿಸಬೇಕೆಂದು ಮುಖ್ಯಮಂತ್ರಿ ಕೋರಿದ್ದಾರೆ. ರನ್‌ವೇ ವಿಸ್ತರಣೆಗೆ ಅಗತ್ಯವಿರುವ 240 ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲು ರಾಜ್ಯ ಸರ್ಕಾರ 319.14 ಕೋಟಿ ರೂ ಅನುದಾನ ಬಿಡುಗಡೆ ಮಾಡಿದೆ. ಅಲ್ಲದೆ, ಭೂಸ್ವಾಧೀನ ಪ್ರಕ್ರಿಯೆಯೂ ಅಂತಿಮ ಹಂತದಲ್ಲಿದೆ. ವಿಮಾನ ನಿಲ್ದಾಣ ವಿಸ್ತರಣೆ ಪ್ರದೇಶದಲ್ಲಿ ಎರಡು ಕಂದಕ ಮತ್ತು 7 ಕಾಲುವೆಗಳ ಸ್ಥಳಾಂತರಕ್ಕೆ ಕಾವೇರಿ ನೀರಾವರಿ ನಿಗಮ ವರದಿ ನೀಡಿ, 70 ಕೋಟಿ ರೂ. ಅಗತ್ಯವಿದೆ ಎಂದು ತಿಳಿಸಿದೆ.

ಅಲ್ಲದೆ, ಕೆಪಿಟಿಸಿಎಲ್ ಸಹ ಹೈಟೆನ್ಷನ್ ಲೈನ್‌ಗಳು ಮತ್ತು ಚೆಸ್ಕಾಂನ ಲೋಟೆನ್ಷನ್ ವೈರ್‌ಗಳ ಮಾರ್ಗ ಬದಲಾವಣೆಗೆ 31.82 ಕೋಟಿ ರೂ. ಅಂದಾಜು ವೆಚ್ಚವಾಗಲಿದೆ ಎಂದು ತಿಳಿಸಿದ್ದು, ಒಟ್ಟಾರೆ ಈ ಕಾಮಗಾರಿಗಳಿಗೆ 101.82 ಕೋಟಿ ರೂ. ಅನುದಾನ ಅಗತ್ಯವಿದೆ ಎಂದು ಹೇಳಿದೆ. ಈ ಹಣವನ್ನು ಭರಿಸಿ ಶೀಘ್ರವೇ ಕಾಮಗಾರಿ ಕೈಗೆತ್ತಿಕೊಂಡು ವಿಮಾನ ನಿಲ್ದಾಣ ಅಭಿವೃದ್ಧಿ ಪಡಿಸಿ ಎಂದು ಕೇಂದ್ರ ಸರ್ಕಾರವನ್ನು ಮುಖ್ಯಮಂತ್ರಿ ಒತ್ತಾಯಿಸಿದ್ದಾರೆ.

ಮೈಸೂರಲ್ಲಿ ಮಳೆ ಆರ್ಭಟ

ಗಂಟೆಗೂ ಹೆಚ್ಚು ಕಾಲ ಅಬ್ಬರಿಸಿತು. ಏಕಾಏಕಿ ಮಳೆ ಆರಂಭವಾಗಿದ್ದರಿಂದ ವಾಹನ ಸವಾರರು, ಪಾದಚಾರಿಗಳು ಪರದಾಡುವಂತಾಯಿತು. ರಸ್ತೆ ಬದಿ ವ್ಯಾಪಾರಿಗಳು ತಮ್ಮ ತಮ್ಮ ವ್ಯಾಪಾರವನ್ನು ಮೊಟಕುಗೊಳಿಸುವಂತಾಯಿತು. ಅಂಗಡಿ–ಮಳಿಗೆದಾರರು ಮಳೆ ಆರ್ಭಟ ಹಿನ್ನಲೆಯಲ್ಲಿ ಬಾಗಿಲು ಮುಚ್ಚುತ್ತಿದ್ದ ದೃಶ್ಯಗಳು ಸಾಮಾನ್ಯವಾಗಿತ್ತು. ದೇವರಾಜ ಮಾರುಕಟ್ಟೆ, ಮಂಡಿ ಮಾರುಕಟ್ಟೆ, ಅಗ್ರಹಾರ ಚಿಕ್ಕ ಮಾರುಕಟ್ಟೆಗಳಲ್ಲಿ ಜನರ ಸಂಖ್ಯೆ ವಿರಳವಾಗಿತ್ತು.

ಜೋರಾದ ಮಳೆ: ರಾತ್ರಿ 10.30ರ ನಂತರ ಮತ್ತೆ ಆರಂಭವಾದ ಮಳೆ ನಗರದಾದ್ಯಂತ ಜೋರಾಗಿ ಸುರಿಯಿತು. ಗಂಟೆಗೂ ತಡರಾತ್ರಿಯವರೆಗೂ ಆರ್ಭಟಿಸಿದ ಮಳೆಯಿಂದಾಗಿ ತಗ್ಗು ಪ್ರದೇಶಗಳಲ್ಲಿರುವ ಬಡಾವಣೆಗಳಲ್ಲಿನ ಜನಜೀವನ ಅಸ್ತವ್ಯಸ್ತವಾಯಿತು. ರಸ್ತೆ-ಚರಂಡಿಗಳು ಮಳೆ ನೀರಿನಿಂದ ಆವೃತ್ತವಾಗಿದ್ದವು. ಅಲ್ಲದೆ ಕೆಲ ಬಡಾವಣೆಗಳಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಂಡಿತು. ಮನೆಗಳಿಗೆ ನೀರು ನುಗ್ಗಿರುವುದು, ವಿದ್ಯುತ್ ಕಂಬ ಹಾಗೂ ಮರಗಳು ಮುರಿದು ಬಿದ್ದಿರುವ ಕುರಿತು ಮಾಹಿತಿ ತಿಳಿದು ಬಂದಿಲ್ಲ ಎಂದು ಮೈಸೂರು ನಗರ ಪಾಲಿಕೆ ಕಂಟ್ರೋಲ್ ರೂಂ ಸಿಬ್ಬಂದಿ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಪೆನ್ಷನ್ ಇಲ್ಲದೆ ಹೋದರೆ ಟೆನ್ಷನ್!

ಸರ್ಕಾರಕ್ಕೆ ಪತ್ರ ಬರೆಯುತ್ತೇನೆ. ಈಗ ನಾವು ಆದಾಯದ ಮೂಲ ಹೆಚ್ಚಿಸಿಕೊಳ್ಳದೇ ಬೇರೆ ದಾರಿ ಇಲ್ಲ. ಪಿಂಚಣಿ ಕೊಡಲು ಕಷ್ಟವಾದ ಪರಿಸ್ಥಿತಿ ಎದುರಿಸಬೇಕಾಗುತ್ತದೆ ಎಂದು ಕಳವಳ ವ್ಯಕ್ತಪಡಿಸಿದರು.

2019 ರವರೆಗೆ ಸರ್ಕಾರವೇ ಪಿಂಚಣಿ ನೀಡುತ್ತಿತ್ತು. ಕೋವಿಡ್ ಬಳಿಕ ಎಲ್‌ಐಸಿ ಪೆನ್ಷನ್ ಫಂಡ್ ಮೂಲಕ ಕೊಡಲಾಗುತ್ತಿತ್ತು. ಈಗ ನಾವೇ ಅದನ್ನು ಭರಿಸಬೇಕಿದೆ. ಸದ್ಯದ ಪರಿಸ್ಥಿತಿಯಲ್ಲಿ ನಮಗೆ ಸಂಕಷ್ಟವಿದೆ. ಮುಂದಿನ ದಿನಗಳಲ್ಲಿ ಉಳಿದ ವಿವಿಗಳೂ ಇದೇ ಪರಿಸ್ಥಿತಿ ಎದುರಿಸಬೇಕಾಗುತ್ತದೆ ಎಂದು ಹೇಳಿದರು.

20 ಲಕ್ಷ ಅನುದಾನ ಕಡಿಮೆ...! ದೈಹಿಕ ಶಿಕ್ಷಣ ವಿಭಾಗಕ್ಕೆ 20 ಲಕ್ಷ ರೂ. ಅನುದಾನ ಕಡಿಮೆಯಾಗಿದೆ. ವಿದ್ಯಾರ್ಥಿ ವೇತನದಲ್ಲಿ ಸ್ವಲ್ಪ ಇಳಿಕೆಯಾಗಿದೆ.

ಅನುದಾನದ ಕೊರತೆಯಿಂದ ಎಲ್ಲಾ ಕ್ರೀಡೆಗಳಿಗೂ ತಂಡಗಳನ್ನು ಕಳುಹಿಸುವುದು, ಕ್ರೀಡಾ ಚಟುವಟಿಕೆಗಳನ್ನು ಆಯೋಜಿಸುವುದು ಕಷ್ಟವಾಗಲಿದ್ದು, ಈ ಕೊರತೆ ಸರಿಪಡಿಸುವಂತೆ ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ.ವೆಂಕಟೇಶ್ ಅವರ ಮನವಿಗೆ ಪ್ರತಿಕ್ರಿಯಿಸಿದ ಕುಲಪತಿ ಲೋಕನಾಥ್, ಎಲ್ಲಾ ಕ್ರೀಡೆಗಳಿಗೆ ವಿದ್ಯಾರ್ಥಿಗಳನ್ನು ಕಳುಹಿಸಲು ಆಗದು. ಕೆಲವು ಕ್ರೀಡೆಗೆ ಮಾತ್ರ ಸೀಮಿತಗೊಳಿಸಿ. ಪ್ರತಿ ಜಿಲ್ಲೆಯಲ್ಲಿ ವಿವಿಗಳು ಸ್ಥಾಪನೆಯಾದ ಮೇಲೆ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿದೆ. ಆದ್ದರಿಂದ ಅದಾಯವೂ ಕಡಿಮೆಯಾಗಿದೆ ಎಂದು ಅಸಹಾಯಕತೆ ವ್ಯಕ್ತಪಡಿಸಿದರು.

ಸಮಾಜ ಕಲ್ಯಾಣ ಇಲಾಖೆಗೆ ವಹಿಸಿ: ಪ್ರೊ.ಗುರುಸಿದ್ದಯ್ಯ ಮಾತನಾಡಿ, ಹಂಪಿ ಮತ್ತು ಬೆಂಗಳೂರು ನಗರ ವಿವಿಯಲ್ಲಿ ಹಾಸ್ಟೆಲ್‌ಗಳನ್ನು ಸಮಾಜ ಕಲ್ಯಾಣ ಇಲಾಖೆ ಮೂಲಕ ನಿರ್ವಹಿಸಲಾಗುತ್ತಿದೆ. ನಮ್ಮಲ್ಲಿಯೂ ಹೀಗೆಯೇ ಆದರೆ ಒಂದಷ್ಟು ಖರ್ಚು ಕಡಿಮೆ ಮಾಡಿ, ಅನುದಾನ ಉಳಿಸಬಹುದು. ಅಂತೆಯೇ ಅಧ್ಯಾಪಕರು ಮತ್ತು ಸಿಬ್ಬಂದಿಗೆ ನೀಡಿರುವ ವಸತಿ ಗೃಹಗಳಿಗೆ ಒಂದು ನಿರ್ದಿಷ್ಟ ಮಾನದಂಡದ ಆಧಾರದ ಮೇಲೆ ಬಾಡಿಗೆ ನಿಗದಿಪಡಿಸಬಹುದು. ಹಾಗೆಯೇ ಕೇಂದ್ರದಿಂದ ಸಬ್ಸಿಡಿ ಪಡೆದು ವಿವಿ ಕಟ್ಟಡದ ಮೇಲೆ ಸೋಲಾರ್ ಅಳವಡಿಸಿ, ವಿದ್ಯುತ್‌ಉತ್ಪಾದಿಸಿ ಮಾರಾಟ ಮಾಡಬಹುದು ಎಂಬ ಸಲಹೆ ನೀಡಿದರು.

ಹಾಗೆಯೇ ಸಭಾಂಗಣಗಳ ಬಾಡಿಗೆ ಹೆಚ್ಚಿಸುವುದು. ಹೊಸ ಕೋರ್ಸ್‌ಗಳನ್ನು ಪರಿಚಯಿಸುವುದು ಸೇರಿದಂತೆ ಕೆಲ ಸಲಹೆಗಳು ಕೇಳಿಬಂದವು. ಸಲಹೆಗಳಿಗೆ ಪ್ರತಿಕ್ರಿಯಿಸಿದ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್, ಹಾಸ್ಟೆಲ್‌ಗಳನ್ನು ಸಮಾಜ ಕಲ್ಯಾಣ ಇಲಾಖೆ ಮೂಲಕ ನಿರ್ವಹಿಸುವುದಾದರೆ ಆಗಲಿ, ಅದರ ಬಗ್ಗೆ ಪರಿಶೀಲಿಸಿ ಮಾಹಿತಿ ಕೊಡಿ. ಆದರೆ ಸೋಲಾರ್ ಅಳವಡಿಕೆಗೆ ನಾವು ಮೊದಲು ಬಂಡವಾಳ ಹಾಕಬೇಕಲ್ಲವೇ? ಆದ್ದರಿಂದ ಅದು ಅಸಾಧ್ಯ. ಸರ್ಕಾರದೊಂದಿಗೆ ಸಂಪರ್ಕದಲ್ಲಿದ್ದು ಅನುದಾನ ಮಂಜೂರು ಮಾಡಿಸುವ ಪ್ರಯತ್ನ ಮಾಡಲಾಗುವುದು ಎಂದರು.

ಎನ್‌ಇಪಿ ಪಠ್ಯಕ್ರಮ ರೂಪಿಸಿ: ಪದವಿಯಲ್ಲಿ ದ್ವಿತೀಯ ಮತ್ತು ತೃತೀಯ ವರ್ಷಕ್ಕೆ ಮಾಡಿಫೈಯ್ಡ್ ಎನ್‌ಇಪಿ ಅನ್ವಯ ಪಠ್ಯಕ್ರಮ ಸಿದ್ಧಪಡಿಸಬೇಕು. ಹಾಗೆಯೇ ಮುಂದಿನ ಸಾಲಿನಿಂದ ಸಂಪೂರ್ಣವಾಗಿ ಎನ್‌ಇಪಿ ಅನುಸಾರವೇ ಬೋಧನೆಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಸೂಚಿಸಿದರು. ಕುಲಸಚಿವರಾದ ಎಂ.ಕೆ.ಸವಿತಾ, ನಾಗರಾಜು, ಪ್ರೊಡಿ. ಆನಂದ್, ಪ್ರೊ.ಎಂ.ಎಸ್. ಶೇಖರ್, ಸಿಂಡಿಕೇಟ್ ಸದಸ್ಯರು, ವಿದ್ಯಾರ್ಥಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ವಿವಿಯಲ್ಲಿ 107.72 ಕೋಟಿ ಕೊರತೆ ಬಜೆಟ್

ಅಭಿವೃದ್ಧಿ ಅನುದಾನ 3 ಕೋಟಿ ರೂ. ಹಾಗೂ ಪ.ಜಾ ಮತ್ತು ಪ.ವರ್ಗದ ವಿದ್ಯಾರ್ಥಿಗಳಿಗೆ 4 ಕೋಟಿ ರೂ. ಅನುದಾನವನ್ನು ರಾಜ್ಯ ಸರ್ಕಾರದಿಂದ ನಿರೀಕ್ಷಿಸಿದ್ದು, ಒಟ್ಟಾರೆ 184.68 ಕೋಟಿ ರೂ. ಅನುದಾನವನ್ನು ಆದಾಯವಾಗಿ ಪರಿಗಣಿಸಲಾಗಿದೆ ಎಂದರು. ಹಾಗೆಯೇ ಪ್ರವೇಶ, ನೊಂದಣಿ, ಸಂಯೋಜನೆ ಹಾಗೂ ಇನ್ನಿತರೆ ಶುಲ್ಕಗಳಿಂದ 45 ಕೋಟಿ ರೂ., ಸ್ಕೀಂ 'ಬಿ' ಕೋರ್ಸ್‌ಗಳಿಂದ 3 ಕೋಟಿ ರೂ., ಪರೀಕ್ಷಾ ಚಟುವಟಿಕೆಗಳಿಂದ 50 ಕೋಟಿ ರೂ., ವಿವಿಯ ವಿವಿಧ ಆಸ್ತಿಗಳಿಂದ 3.50 ಕೋಟಿ ರೂ., ಇತರೆ ಮೂಲಗಳಿಂದ 7 ಕೋಟಿ ರೂ. ಸೇರಿ 108.50 ರೂ. ನಿರೀಕ್ಷಿತ ಆಂತರಿಕ ಆದಾಯವಾಗಿದೆ. ಸರ್ಕಾರದ ಅನುದಾನ, ನೀರಿಕ್ಷಿತ ಆಂತರಿಕ ಆದಾಯ ಹಾಗೂ ಆರಂಭಿಕ ಶಿಲ್ಕು ಸೇರಿ ಒಟ್ಟಾರೆ 295.59 ಕೋಟಿ ರೂ. ನಿರೀಕ್ಷಿತ ಆದಾಯವಾಗಿದೆ ಎಂದು ವಿವರಿಸಿದರು.

ಮುಖಂಡನ ವಿರುದ್ಧ ಎಫ್‌ಐಆರ್

ತಂದಿರುವುದಾಗಿ ವಿನಯ್ ತನಗೆ ಕರೆ ಮಾಡಿ ಹೇಳಿದ್ದ ಎಂದು ಸಹೋದರ ಜೀವನ್ ತಿಳಿಸಿದ್ದಾರೆ. ನ್ಯಾಯಾಲಯದಿಂದ ತಡೆಯಾಜ್ಞೆ ತಂದರೂ ತೆನ್ನಿರಾ, ಪೊಲೀಸರ ಸಹಾಯದಿಂದ ಕುಟುಂಬಸ್ಥರು ಹಾಗೂ ಸ್ನೇಹಿತರ ಬಳಿ ವಿನಯ್ ಬಗ್ಗೆ ವಿಚಾರಿಸಿ ರೌಡಿಪಟ್ಟಿಯಲ್ಲಿ ಹಾಕುವುದಾಗಿ ಬೆದರಿಸಿದ್ದರು ಎಂದು ದೂರಿನಲ್ಲಿ ಜೀವನ್ ಉಲ್ಲೇಖಿಸಿದ್ದಾರೆ.

ಎಫ್‌ಐಆರ್‌ನಲ್ಲಿ ಹೆಸರು ಕೈಬಿಟ್ಟಿದ್ದಕ್ಕೆ ಆಕ್ರೋಶ: ಸಹೋದರನ ಸಾವಿಗೆ ಕಾಂಗ್ರೆಸ್ ಶಾಸಕರಾದ ಎ.ಎಸ್.ಪೊನ್ನಣ್ಣ ಹಾಗೂ ಮಂತರ್‌ಗೌಡ ಕಾರಣರಾಗಿದ್ದಾರೆ. ಹೀಗಿದ್ದರೂ ಎಫ್‌ಐಆರ್‌ನಲ್ಲಿ ಅವರ ಹೆಸರನ್ನು ಕೈಬಿಡಲಾಗಿದೆ. ಪೊಲೀಸರು ಒತ್ತಡದಿಂದ ಹೆಸರನ್ನು ಎಫ್‌ಐಆರ್‌ನಲ್ಲಿ ನಮೂದಿಸಿಲ್ಲ ಎಂದು ಜೀವನ್ ಆಕ್ರೋಶ ಹೊರಹಾಕಿದ್ದಾರೆ.

ಮೈಸೂರು ಪಾಲಿಕೆಗೀಗ 7ನೇ ವೇತನ ಆಯೋಗದ ಶಿಫಾರಸು ಅನುಷ್ಠಾನದ ಆರ್ಥಿಕ ಹೊರೆ

ಬಳಕೆದಾರರ ಶುಲ್ಕ, ಬೃಹತ್ ತ್ಯಾಜ್ಯ ಉತ್ಪಾದನೆಯಿಂದ ಬರುವ ಆದಾಯದಿಂದ ಕ್ಲೀನರ್ಸ್ ಮತ್ತು ಲೋಡರ್ಸ್‌ಗಳ ವೇತನ ಪಾವತಿ ಮಾಡುವಂತೆ ಪಾಲಿಕೆ, ಸ್ಥಳೀಯ ಸಂಸ್ಥೆಗಳಿಗೆ ಸರ್ಕಾರ ತಾಕೀತು



ಎಸ್.ಟಿ. ರವಿಕುಮಾರ್

ಮೈಸೂರು, ಏ. 4– ಸಿವಿಲ್ ಕಾಮಗಾರಿ ಪೂರ್ಣಗೊಳಿಸಿ ವರ್ಷಗಳೇ ಕಳೆದರೂ ಗುತ್ತಿಗೆದಾರರ ಬಿಲ್ ಪಾವತಿಸಲು ಹಣವಿಲ್ಲ. ಕೊನೆಗೆ ದೈನಂದಿನ ನಿರ್ವಹಣೆಗೂ ಪರದಾಡುತ್ತಿರುವ ಮೈಸೂರು ಮಹಾನಗರ ಪಾಲಿಕೆ ಈಗ 7ನೇ ವೇತನ ಆಯೋಗದಿಂದ ಉಂಟಾಗಿರುವ ಹೆಚ್ಚುವರಿ ಆರ್ಥಿಕ ಹೊರೆ ಹೊರುವ ಅನಿವಾರ್ಯತೆ ಎದುರಾಗಿದೆ.

ಅಷ್ಟೇ ಅಲ್ಲದೇ, ಕ್ಲೀನರ್ಸ್ ಮತ್ತು ಲೋಡರ್ಸ್‌ಗಳ ವೇತನವನ್ನೂ ಸ್ಥಳೀಯ ಸಂಸ್ಥೆಗಳ ಬಳಕೆದಾರರ ಶುಲ್ಕ, ಇತರ ಆದಾಯದಿಂದ ಪಾವತಿಸುವಂತೆ ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕರು ಸೂಚನೆ ನೀಡಿದ್ದಾರೆ.

ಮಾರ್ಚ್ 20ರಂದು ಈ ಸಂಬಂಧ ಸುತ್ತೋಲೆ ಹೊರಡಿಸಿರುವ ನಿರ್ದೇಶಕರು, ರಾಜ್ಯದ ಮಹಾನಗರ ಪಾಲಿಕೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ನೌಕರರಿಗೆ ಸರ್ಕಾರ 7ನೇ ವೇತನ ಆಯೋಗದ ಶಿಫಾರಸಿನನ್ವಯ ಪರಿಷ್ಕೃತ ವೇತನವನ್ನು ಜಾರಿಗೊಳಿಸಿ ಆದೇಶ ಹೊರಡಿಸಿರುವುದರಿಂದ 7ನೇ ವೇತನ ಆಯೋಗ ಅನುಷ್ಠಾನದಿಂದ ಉಂಟಾಗುವ ಆರ್ಥಿಕ ಹೊರೆಯನ್ನು 15ನೇ ರಾಜ್ಯ ಹಣಕಾಸು (ಎಸ್‌ಎಫ್‌ಸಿ) ನಿಧಿಯಿಂದ ತೆರಿಗೆ ಪರಿಷ್ಕರಿಸಿ ಪಾವತಿಸಬೇಕೆಂದು ನಿರ್ದೇಶನ ನೀಡಲಾಗಿದೆ.

ಅದೇ ರೀತಿ ಮಾರ್ಚ್ 18ರಂದು ಹೊರಡಿಸಿರುವ ಮತ್ತೊಂದು ಸುತ್ತೋಲೆಯಲ್ಲಿ ನಗರಸಭೆ, ಪುರಸಭೆ, ಪಟ್ಟಣ ಪಂಚಾಯ್ತಿಗಳಲ್ಲಿನ ಕ್ಲೀನರ್, ಲೋಡರ್‌ಗಳ ವೇತನವನ್ನೂ ಬಳಕೆದಾರರ ಶುಲ್ಕ, ಬೃಹತ್ ತ್ಯಾಜ್ಯ ಉತ್ಪಾದನೆಗಳು ಇತ್ಯಾದಿ ಮೂಲಕ ಆದಾಯ ಕ್ರೋಢೀಕರಿಸಿ ನಗರ ಸ್ಥಳೀಯ ಸಂಸ್ಥೆಗಳ ಸಾಮಾನ್ಯ ನಿಧಿಯಿಂದ ಪಾವತಿ ಸಲು ಕ್ರಮ ಕೈಗೊಳ್ಳಿ ಎಂದು ಪೌರಾಡಳಿತ ನಿರ್ದೇಶನಾಲಯವು ಸೂಚನೆ ನೀಡಿದೆ.

ಈಗಾಗಲೇ ಒಳಚರಂಡಿ, ರಸ್ತೆ, ಪಾರ್ಕ್, ಸ್ಮಶಾನಗಳು, ಬೀದಿ ದೀಪ, ಸ್ವಚ್ಛತೆ ನಿರ್ವಹಣೆ, ನೌಕರರು, ಅಂಗ ವಿಕಲರು, ಹಿರಿಯ ನಾಗರಿಕರು, ಪೌರ ಕಾರ್ಮಿಕರ ವೈದ್ಯಕೀಯ ಬಿಲ್ ಮರು ಪಾವತಿ, ಕುಡಿಯುವ ನೀರು ಪೂರೈಕೆ, ಪ್ರಧಾನ ಕಚೇರಿ ಮತ್ತು ಎಲ್ಲಾ 9 ವಲಯ ಕಚೇರಿಗಳ ನಿರ್ವಹಣೆ, ಬಳಸುತ್ತಿರುವ ಖಾಸಗಿ ವಾಹನಗಳಿಗೆ ಬಾಡಿಗೆ ನಿರ್ವಹಿಸುವುದೇ ಕಷ್ಟವಾಗಿರುವಾಗ ನೌಕರರ ಹೆಚ್ಚುವರಿ ಸಂಬಳ, ಕ್ಲೀನರ್, ಲೋಡರ್‌ಗಳ ವೇತನವನ್ನೂ ತಮ್ಮ ಸಂಪನ್ಮೂಲದಲ್ಲೇ ಪಾವತಿಸಬೇಕೆಂದು ಆದೇಶ ಮಾಡಿರುವುದರಿಂದ ಮೈಸೂರು ನಗರ ಪಾಲಿಕೆಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ.

ಅಲ್ಲದೇ, ಗ್ಲೋಬಲ್ ಟೆಂಡರ್ ಕರೆದು ಕಾರ್ಯಾದೇಶ ನೀಡಿ ಕೆಲಸ ಮಾಡಿರುವ ಗುತ್ತಿಗೆದರರ ನೂರಾರು ಕೋಟಿ ಬಿಲ್ ಪಾವತಿಸದೇ ಅನುದಾನದ ಕೊರತೆಯಿಂದಾಗಿ ಮುಂದೂಡುತ್ತಾ ಬಂದಿರುವ ಮೈಸೂರು ಮಹಾನಗರ ಪಾಲಿಕೆಗೆ ಈಗ ಸರ್ಕಾರದ ಆದೇಶದಿಂದಾಗಿ ತೀವ್ರ ಸಂಕಷ್ಟ ಎದುರಾಗಿದೆ.


ಆಸ್ತಿ ತೆರಿಗೆ, ನೀರಿನ ಶುಲ್ಕ, ಉದ್ದಿಮೆ ಪರವಾನಗಿ ಶುಲ್ಕ, ಜಾಹೀರಾತು ಶುಲ್ಕ, ಕಟ್ಟಡ, ಮಳಿಗೆಗಳ ಬಾಡಿಗೆ, ಖಾತಾ, ನಕ್ಷೆ ಅನುಮೋದನೆ ಶುಲ್ಕಗಳೇ ಮೈಸೂರು ಮಹಾನಗರ ಪಾಲಿಕೆಗೆ ಪ್ರಮುಖ ಆದಾಯದ ಮೂಲಗಳಾಗಿದ್ದು, ಅದರಿಂದ ನಗರ ನಿರ್ವಹಣೆ, ಮೂಲ ಸೌಕರ್ಯ ಒದಗಿಸುವುದೇ ಕಷ್ಟಸಾಧ್ಯವಾಗಿರುವಾಗ ನೌಕರರ ವೇತನ ಪಾವತಿಸಿ ಎಂದು ಹೇಳುತ್ತಿರುವುದರಿಂದ ಪಾಲಿಕೆಯು ಅಡಕತ್ತರಿಯಲ್ಲಿ ಸಿಲುಕಿದಂತಾಗಿದೆ.

ಪೌರಕಾರ್ಮಿಕರಿಗೆ ಸುರಕ್ಷತಾ ಉಪಕರಣಗಳು, ಕಸ ಸಂಗ್ರಹ ವಾಹನಗಳು, ಅಧಿಕಾರಿಗಳಿಗೆ ಒದಗಿಸಿರುವ ಕಾರುಗಳ ಬಾಡಿಗೆಯಂತಹ ವೆಚ್ಚ ಭರಿಸುವುದೇ ದುಸ್ತರವಾಗಿರುವಾಗ ಸರ್ಕಾರದ ಇತ್ತೀಚಿನ ಆದೇಶಗಳು ತಲೆನೋವಾಗಿ ಪರಿಣಮಿಸಿದೆ.

ಆದಾಯದ ಮೂಲ ಕಡಿಮೆ ಇರುವ ನಗರಸಭೆ, ಪುರಸಭೆ, ಪಟ್ಟಣ ಪಂಚಾಯ್ತಿಗಳಲ್ಲಂತೂ ಹಣದ ಕೊರತೆ ತೀವ್ರವಾಗಿದ್ದು, ನಿರ್ವಹಣೆಗೇ ಹೆಣಗಾಡುತ್ತಿರುವಾಗ ನೌಕರರ ವೇತನ ಪಾವತಿಸುವುದು ಕಷ್ಟವಾಗಿದೆ.

ಸರ್ಕಾರ ದಿವಾಳಿಯಾಗಿರುವುದಕ್ಕೆ ಇದೇ ಸಾಕ್ಷಿ

ಮೈಸೂರು, ಏ. 4(ಆರ್‌ಕೆ)– ರಾಜ್ಯದಲ್ಲಿರುವ ಕಾಂಗ್ರೆಸ್ ಸರ್ಕಾರ ದಿವಾಳಿಯಾಗಿದೆ ಎಂಬುದಕ್ಕೆ ಸ್ಥಳೀಯ ಸಂಸ್ಥೆಗಳ ನೌಕರರಿಗೆ ಸಂಪನ್ಮೂಲ ಕ್ರೋಢೀಕರಿಸಿ ವೇತನ ಪಾವತಿಸಿ ಎಂದು ಹೇಳಿರುವುದೇ ಸಾಕ್ಷಿ ಎಂದು ಮಾಜಿ ಮೇಯರ್ ಎಂ. ಶಿವಕುಮಾರ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.




ಪಾಲಿಕೆ ಖಾಯಂ ನೌಕರರಿಗೆ 7ನೇ ವೇತನ ಜಾರಿಯಿಂದಾಗಿ ಉಂಟಾಗಿರುವ ಹೆಚ್ಚುವರಿ ಹೊರೆಯನ್ನು ತೆರಿಗೆ ಪರಿಷ್ಕರಿಸಿ, ಅಭಿವೃದ್ಧಿ ಅನುದಾನ ಹಾಗೂ ಆಂತರಿಕ ಸಂಪನ್ಮೂಲ ಕ್ರೋಢೀಕರಣದಿಂದ ಬಂದ ಹಣದಿಂದ ಕ್ಲೀನರ್, ಲೋಡರ್ಸ್ ಸಂಬಳ ನೀಡುವಂತೆ ಸರ್ಕಾರ ಆದೇಶ ಹೊರಡಿಸಿರುವುದು ವಿಪರ್ಯಾಸ. ಹಾಲಿನಿಂದ ಆಲ್ಕೋಹಾಲ್‌ವರೆಗೂ ಎಲ್ಲಾ ತರಹದ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಜನಸಾಮಾನ್ಯನ ಜೇಬಿಗೆ ಕತ್ತರಿ ಹಾಕಿರುವ ಸರ್ಕಾರ ಗ್ಯಾರಂಟಿ ಯೋಜನೆಗಳಿಂದ ಖಜಾನೆ ಖಾಲಿ ಮಾಡಿರುವುದರಿಂದ ನೌಕರರಿಗೆ ಸಂಬಳ ಕೊಡುವುದಕ್ಕೂ ಹಣ ಇಲ್ಲದಂತಾಗಿದೆ ಎಂದು ಶಿವಕುಮಾರ್ ವ್ಯಂಗ್ಯವಾಡಿದ್ದಾರೆ.

ಕಾದಾಟದಲ್ಲಿ ಭಾರೀ ದಂತವುಳ್ಳ ಸಲಗ ಸಾವು

ಮೈಸೂರು, ಏ.4(ಎಂಟಿವೈ)– ಎರಡು ಕಾಡಾನೆಗಳ ನಡುವೆ ಸಂಭವಿಸಿದ ಕಾಳಗದಲ್ಲಿ ಭಾರೀ ದಂತವುಳ್ಳ 24 ವರ್ಷದ ಸಲಗವೊಂದು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಕಬಿನಿ ಹಿನ್ನೀರಿನ ಬಳಿ ಮೃತಪಟ್ಟಿದೆ.

ಹೆಚ್.ಡಿ.ಕೋಟೆ ತಾಲೂಕು ವ್ಯಾಪ್ತಿಯ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಅಂತರಸಂತೆ ವಲಯದ ಕಾಕನಕೋಟೆ ಸಫಾರಿ ಕೇಂದ್ರದಿಂದ ಸಫಾರಿಗೆ ಹೋಗುತ್ತಿದ್ದ ಪ್ರವಾಸಿಗರಿಗೆ ಕಬಿನಿ ಹಿನ್ನೀರಿನ ಪ್ರದೇಶ, ಡಿ.ಬಿ.ಕುಪ್ಪೆ, ಅಂತರಸಂತೆ ವಲಯ ವ್ಯಾಪ್ತಿಯಲ್ಲಿ ಭಾರೀ ಗಾತ್ರದ ದಂತವುಳ್ಳ ಕೆಲ ಆನೆಗಳು ಎದುರಾಗುತ್ತಿದ್ದವು. ಇವುಗಳ ಪೈಕಿ 24ರಿಂದ 25 ವರ್ಷದ ಗಂಡಾನೆ ಮತ್ತೊಂದು ಸಲಗದೊಂದಿಗೆ ಕಾದಾಡಿ ಗಂಭೀರವಾಗಿ ಗಾಯಗೊಂಡು ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದೆ.

ಡಿ.ಬಿ.ಕುಪ್ಪೆ ವನ್ಯಜೀವಿ ವಲಯದ ಕಬಿನಿ ಹಿನ್ನಿರಿನ ಪ್ರದೇಶ ಟವರ್‌ಕೊಲ್ಲಿ ಎಂಬಲ್ಲಿ ಮಾ.23ರಂದು ಗಂಡಾನೆಯೊಂದು ನಿತ್ರಾಣ ಸ್ಥಿತಿಯಲ್ಲಿ ಬಿದ್ದಿರುವುದನ್ನು ಗಸ್ತಿನಲ್ಲಿದ್ದ ಸಿಬ್ಬಂದಿ ಗಮನಿಸಿದ್ದರು. ಸಮೀಪಕ್ಕೆ ಹೋಗಿ ಪರಿಶೀಲಿಸಿದಾಗ ಕಾಡಾನೆಯೊಂದಿಗಿನ ಕಾಳಗದಿಂದ ಗಾಯಗೊಂಡಿರುವುದು ಪತ್ತೆಯಾಗಿತ್ತು. ಹಿರಿಯ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಗಂಡಾನೆಗೆ ಚಿಕಿತ್ಸೆ ಆರಂಭಿಸಲಾಗಿತ್ತು. ಆದರೆ, ಅದು ಕೊನೆಯುಸಿರೆಳೆದಿದೆ.



ಕಬಿನಿ ಹಿನ್ನೀರಿನ ಬಳಿ ಕಾಡಾನೆ ಕಾಳಗದಲ್ಲಿ ಮೃತಪಟ್ಟ ಸಲಗ.

ಕಬಿನಿ ಹಿನ್ನೀರು, ಡಿ.ಬಿ.ಕುಪ್ಪೆ ಅಂತರಸಂತೆ ವಲಯದಲ್ಲಿ ಏಷ್ಯಾ ಆನೆಗಳಲ್ಲೇ ಭಾರೀ ಗಾತ್ರದ(8 ಅಡಿ) ದಂತ ಹೊಂದಿದ್ದ 68 ವರ್ಷದ ಮಿಸ್ಟರ್ ಕಬಿನಿ, (ಭೋಗೇಶ್ವರ) 2022ರ ಜೂ.10ರಂದು ಮೃತಪಟ್ಟಿತ್ತು ಇದನ್ನೇ ಹೋಲುವಂತೆ ಉದ್ದನೆಯ ದಂತವುಳ್ಳ ಆನೆ ಸಫಾರಿ ವಲಯದಲ್ಲಿ ಕಾಣಿಸಿಕೊಳ್ಳುತ್ತಿತ್ತು. ಅದಕ್ಕೆ ಕೆಲ ವನ್ಯಜೀವಿ ಛಾಯಾಗ್ರಾಹಕರು ಜೂನಿಯರ್ ಭೋಗೇಶ್ವರ ಎಂದು ಕರೆಯುತ್ತಿದ್ದರು. ಇದೀಗ ಜೂನಿಯರ್ ಭೋಗೇಶ್ವರ ಆನೆಯೂ ಮೃತಪಟ್ಟಿದ್ದು, ಸಫಾರಿಗರು ಹಾಗೂ ಅರಣ್ಯ ಸಿಬ್ಬಂದಿಗೆ ನೋವುಂಟಾಗಿದೆ ಅಲ್ಲದೆ, ಸಾಮಾಜಿಕ ಜಾಲತಾಣಗಳಲ್ಲಿ ಜೂನಿಯರ್ ಭೋಗೇಶ್ವರ ಆನೆಯ ಸಾವಿನ ಸುದ್ದಿ ಚಿತ್ರದೊಂದಿಗೆ ವೈರಲ್ ಆಗಿದ್ದು, ವನ್ಯಜೀವಿ ಪ್ರೇಮಿಗಳು ಸಂತಾಪ ವ್ಯಕ್ತಪಡಿಸುತ್ತಿದ್ದಾರೆ.

ಕಾಡಾನೆ ಮೃತಪಟ್ಟ ಹಿನ್ನೆಲೆಯಲ್ಲಿ ಸ್ಥಳಕ್ಕೆ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕರಾದ ಪಿ.ಎ.ಸೀಮಾ, ಮೇಟಿಕುಪ್ಪೆ ಉಪವಿಭಾಗದ ಎಸಿಎಫ್ ಎಸ್.ಡಿ.ಮಧು, ಆರ್‌ಎಫ್‌ಓ ಎಸ್.ಎಸ್.ಸಿದ್ದರಾಜು ಭೇಟಿ ನೀಡಿ ಪರಿಶೀಲಿಸಿದರು. ಹೆಚ್.ಡಿ.ಕೋಟೆಯ ಪಶುವೈದ್ಯಾಧಿಕಾರಿ ಡಾ.ಬಿ.ಬಿ.ಪ್ರಸನ್ನ ಅವರು ಮರಣೋತ್ತರ ಪರೀಕ್ಷೆ ನಡೆಸಿದರು. ನಿಯಮಾನುಸಾರ ಆನೆಯ ಮೃತದೇಹವನ್ನು ವನ್ಯಜೀವಿಗಳಿಗೆ ಆಹಾರವಾಗ ಲೆಂದು ಅರಣ್ಯ ಪ್ರದೇಶದಲ್ಲಿಯೇ ಇರಿಸಲಾಗಿದೆ.

ಕಾಂಗ್ರೆಸ್ ಪಕ್ಷ ಸದಾ ಕಾರ್ಮಿಕರ ಪರ


ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಪ್ರತಿಪಾದನೆ

ಮೈಸೂರು, ಏ.4(ಎಸ್‌ಬಿಡಿ)– ಕಾಂಗ್ರೆಸ್ ಸದಾ ಕಾರ್ಮಿಕರ ಪರವಾಗಿದೆ ಎಂಬುದನ್ನು ಅವರಿಗೆ ಮನದಟ್ಟು ಮಾಡಿ ಕೊಡುವ ಜವಾಬ್ದಾರಿ ಎಲ್ಲಾ ಕಾರ್ಯಕರ್ತರ ಮೇಲಿದೆ ಎಂದು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಹೇಳಿದರು.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ನಡೆದ ಇಂಡಿಯನ್ ನ್ಯಾಷನಲ್ ಟ್ರೇಡ್ ಯೂನಿಯನ್ ಕಾಂಗ್ರೆಸ್ (ಐಎನ್‌ಟಿಸಿ) ಯುವ ಘಟಕದ ಮೈಸೂರು ನಗರಾಧ್ಯಕ್ಷ ಮದನ್ ಕುಮಾರ್ ಪದಗ್ರಹಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷ ಸ್ಥಾಪನೆಯಾದಾಗಿನಿಂದಲೂ ಕಾರ್ಮಿಕರ ಪರವಾಗಿ ಕೆಲಸ ಮಾಡಿಕೊಂಡು ಬಂದಿದೆ. ಅಧಿಕಾರಕ್ಕೆ ಬಂದಾಗಲೆಲ್ಲಾ ಕಾರ್ಮಿಕರ ಕಲ್ಯಾಣಕ್ಕಾಗಿ ಹಲವು ಯೋಜನೆಗಳನ್ನು ನೀಡಿದೆ ಎಂದರು.

ಜನರ ಹಿತ ಕಾಯುವುದೇ ಕಾಂಗ್ರೆಸ್ ಧ್ಯೇಯ. ಯುವ ಕಾರ್ಯಕರ್ತರು ಕಾರ್ಮಿಕರ ಹಿತಕ್ಕಾಗಿ ಕಾಂಗ್ರೆಸ್ ರೂಪಿಸಿರುವ ಕಲ್ಯಾಣ ಕಾರ್ಯಕ್ರಮಗಳು, ಜನಪರ ಯೋಜನೆಗಳನ್ನು ಜನರಿಗೆ ತಿಳಿಸುವ ಕೆಲಸ ಮಾಡಬೇಕು. ಪಕ್ಷ ಸಂಘಟನೆ ಜೊತೆಗೆ ಮಾನವೀಯ ನೆಲೆಗಟ್ಟಿನಲ್ಲಿ ಜನರ ಕಷ್ಟ ಸುಖಗಳಿಗೆ ಸ್ಪಂದಿಸಬೇಕು. ಆಗ ಜನರೇ ನಿಮ್ಮನ್ನು ಅರಸಿ ಬರುತ್ತಾರೆ. ಕೇವಲ ಫ್ಲೆಕ್ಸ್, ವೇದಿಕೆ ಕಾರ್ಯಕ್ರಮಗಳಿಗೆ ಸೀಮಿತವಾಗದೆ ಜನರೊಂದಿಗಿದ್ದು ಅವರ ಧ್ವನಿಯಾಗಿ ಕೆಲಸ ಮಾಡಿದರೆ ನಾಯಕತ್ವವೂ ತಾನಾಗಿಯೇ ಲಭಿಸುತ್ತದೆ ಎಂದು ಕಿವಿಮಾತು ಹೇಳಿದರು.

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಮಾತನಾಡಿ, ಕಾಂಗ್ರೆಸ್ ಪಕ್ಷ ಕಾರ್ಮಿಕರ ಪರವಾಗಿಯೇ ಕೆಲಸ ಮಾಡಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಕಾರ್ಮಿಕರಿಗಾಗುವ ಅನ್ಯಾಯ ಪ್ರಶ್ನಿಸಿದಂತಹ ಪರಿಸ್ಥಿತಿ ಸೃಷ್ಟಿಯಾಗಿದೆ. ಕೇಂದ್ರದಲ್ಲಿ ಬಿಜೆಪಿ ಆಡಳಿತಕ್ಕೆ ಬಂದ ಮೇಲೆ ಹಲವಾರು ಕಾರ್ಖಾನೆಗಳು, ಕೈಗಾರಿಕೆಗಳು ಮುಚ್ಚಿವೆ. ಕಾರ್ಮಿಕರ ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಪರಿಸ್ಥಿತಿ ಹದಗೆಟ್ಟಿದೆ ಎಂದು ಆರೋಪಿಸಿದರು.



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ನಡೆದ ಐಎನ್‌ಟಿಸಿ ಯುವ ಘಟಕದ ನಗರಾಧ್ಯಕ್ಷ ಮದನ್ ಕುಮಾರ್ ಪದಗ್ರಹಣ ಕಾರ್ಯಕ್ರಮದಲ್ಲಿ ಪಕ್ಷದ ಮುಖಂಡರನ್ನು ಅಭಿನಂದಿಸಲಾಯಿತು.

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್ ಮಾತನಾಡಿ, ಕಾಂಗ್ರೆಸ್ ಶಿಸ್ತು ಮತ್ತು ಬದ್ಧತೆಯುಳ್ಳ ರಾಷ್ಟ್ರೀಯ ಪಕ್ಷ. ಸದಾ ಜನಪರ ಕಾಳಜಿ ಇಟ್ಟುಕೊಂಡು ಅಧಿಕಾರ ನೀಡಿರುವ ಪಕ್ಷ. ಇಂತಹ ಪಕ್ಷದ ಶಿಸ್ತಿನ ಸಿಪಾಯಿಗಳಾಗಿರುವ ಕಾರ್ಯಕರ್ತರು ಕಾರ್ಮಿಕರ ಹಕ್ಕುಗಳು, ಕಾರ್ಮಿಕರ ಕಾಯ್ದೆಗಳ ಬಗ್ಗೆ ತಿಳಿದುಕೊಂಡು ಅವರ ಧ್ವನಿಯಾಗಿ ಕೆಲಸ ಮಾಡಬೇಕಿದೆ ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಐಎನ್‌ಟಿಸಿ ಯುವ ಘಟಕದ ರಾಜ್ಯಾಧ್ಯಕ್ಷ ಕುಮಾರ್, ರಾಜ್ಯ ಉಪಾಧ್ಯಕ್ಷ ನಾಗರಾಜು, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಹಿಂದುಳಿದ ವರ್ಗಗಳ ಅಧ್ಯಕ್ಷ ಎನ್.ಆರ್.ನಾಗೇಶ್, ಆಶ್ರಯ ಸಮಿತಿ ಸದಸ್ಯ ಗುಣಶೇಖರ್, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಚಂದನ್ ಕುಮಾರ್, ಕೆ.ಆರ್.ಕ್ಷೇತ್ರ ಯುವ ಕಾಂಗ್ರೆಸ್ ಅಧ್ಯಕ್ಷ ಹೊಯ್ಸಳ, ಶಶಾಂಕ್, ಹೇಮಂತ್, ಮಲ್ಲೇಶ್, ರೋಹಿತ್ ಸಿಂಗ್, ವಕ್ತಾರ ಮಹೇಶ್ ಸೇರಿದಂತೆ ಅನೇಕ ಮುಖಂಡರು ಭಾಗವಹಿಸಿದ್ದರು.

ಬಾಲಿವುಡ್ ಖ್ಯಾತ ನಟ, ನಿರ್ದೇಶಕ ಮನೋಜ್‌ಕುಮಾರ್ ಇನ್ನಿಲ್ಲ

ಮುಂಬೈ, ಏ.4– ದೇಶಭಕ್ತಿ ಚಲನಚಿತ್ರಗಳು ಮತ್ತು 'ಭರತ್ ಕುಮಾರ್' ಎಂಬ ಅಡ್ಡ ಹೆಸರಿನಿಂದ ಹೆಸರುವಾಸಿಯಾದ ಬಾಲಿವುಡ್ ನಟ ಹಾಗೂ ನಿರ್ದೇಶಕ ಮನೋಜ್ ಕುಮಾರ್ ಶುಕ್ರವಾರ ವಿಧಿವಶರಾಗಿದ್ದಾರೆ.



ವಯೋಸಹಜ ಖಾಯಿಲೆಯಿಂದ ಬಳಲುತ್ತಿದ್ದ ಅವರು, ಚಿಕಿತ್ಸೆ ಫಲಕಾರಿಯಾಗದೆ ಮುಂಬೈನ ಕೋಕಿಲಾಬೆನ್ ಧೀರೂಭಾಯಿ ಅಂಬಾನಿ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ. ಮನೋಜ್ ಕುಮಾರ್ ಅವರಿಗೆ 87 ವರ್ಷ ವಯಸ್ಸಾಗಿತ್ತು ಜುಲೈ 24, 1937 ರಂದು ಹರಿಕೃಷ್ಣ ಗಿರಿ ಗೋಸ್ವಾಮಿಯಾಗಿ ಜನಿಸಿದ ಮನೋಜ್ ಕುಮಾರ್ ಹಿಂದಿ ಚಿತ್ರರಂಗದಲ್ಲಿ ಪ್ರಮುಖ ವ್ಯಕ್ತಿಯಾಗಿದ್ದರು, ದೇಶಭಕ್ತಿ ಚಲನಚಿತ್ರಗಳು ಮತ್ತು 'ಭರತ್ ಕುಮಾರ್' ಎಂಬ ಅಡ್ಡಹೆಸರಿನಿಂದ ಹೆಸರುವಾಸಿಯಾಗಿದ್ದರು.

ಮನೋಜ್ ಕುಮಾರ್ "ಶಹೀದ್" (1965), "ಉಪ್ಕಾರ್" (1967), "ಪುರಬ್ ಔರ್ ಪಶ್ಚಿಮ್" (1970), ಮತ್ತು "ರೋಟಿ ಕಪ್ಡಾ ಔರ್ ಮಕಾನ್" (1974) ಸೇರಿದಂತೆ ದೇಶಭಕ್ತಿಯ ಕಥಾವಸ್ತುವಿನ ಚಲನಚಿತ್ರಗಳಲ್ಲಿ ನಟಿಸಿ ನಿರ್ದೇಶಿಸಿದ್ದಕ್ಕಾಗಿ ಹೆಸರುವಾಸಿಯಾಗಿದ್ದರು. ಮನೋಜ್ ಕುಮಾರ್ ಅವರನ್ನು ಭಾರತೀಯ ಚಿತ್ರರಂಗಕ್ಕೆ ನೀಡಿದ ಕೊಡುಗೆಗಳಿಗಾಗಿ 1992 ರಲ್ಲಿ ಪದ್ಮಶ್ರೀ ಮತ್ತು 2015ರಲ್ಲಿ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿಗೆ ಗೌರವಿಸಲಾಯಿತು.

ಕಿಯಾ ಶೋರೂಮ್ ಉದ್ಘಾಟನೆ



ಮಂಡ್ಯ ನಗರದಲ್ಲಿ ನವೀಕರಣಗೊಂಡಿರುವ ಆದರ್ಶ್ ಕಿಯಾ ಕಾರ್ ಶೋರೂಮ್ ಅನ್ನು ಮಂಡ್ಯ ಜಿಲ್ಲೆಯ ಹೆಚ್ಚುವರಿ ಜಿಲ್ಲಾಧಿಕಾರಿ ಶಿವಾನಂದ ಮೂರ್ತಿ ಗುರುವಾರ ಉದ್ಘಾಟಿಸಿದರು. ಈ ವೇಳೆ ಶೋರೂಮ್ ವ್ಯವಸ್ಥಾಪಕ ನಿರ್ದೇಶಕರಾದ ಆರ್.ವಿಜಯಕುಮಾರ್, ಆರ್.ದೀನದಯಾಳ್, ಉಪಾಧ್ಯಕ್ಷರಾದ ಟಿ.ಪ್ರೇಮ್ ಕುಮಾರ್, ಜನರಲ್ ಮ್ಯಾನೇಜರ್ ಅಜಯ್ ವೆಸ್ಲಿ, ಶಾಖಾ ವ್ಯವಸ್ಥಾಪಕ ಜಿ.ಆರ್.ಪ್ರಶಾಂತ್ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಮೈಸೂರು ನಗರದಲ್ಲಿ ರಸ್ತೆಗಿಳಿಯಲಿವೆ ಸಾರಿಗೆ ಸಂಸ್ಥೆಯ 'ಇ–ಬಸ್‌ಗಳು'



- ಪ್ರತಿದಿನ 150 ರಿಂದ 200 ಕಿ.ಮೀ. ದೂರ ಸಂಚಾರ
- ಮೈಸೂರು ನಗರ ವಿಭಾಗಕ್ಕೆ 100 ಎಲೆಕ್ಟ್ರಿಕ್ ಬಸ್ ಮಂಜೂರು
- ಮೇನಿಂದ ಹಂತ ಹಂತವಾಗಿ ಇ–ಬಸ್ ಸೇವೆ ಸಾಧ್ಯತೆ
- ಬನ್ನಿಮಂಟಪ ನಗರ ಸಾರಿಗೆ ಸಂಸ್ಥೆಗೆ ಸೇರಿದ ಡಿಪೋ ಇ–ಬಸ್‌ಗೆ ಮೀಸಲು

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಏ.4–ಮೈಸೂರಲ್ಲಿ ಪರಿಸರ ಸ್ನೇಹಿ ವಾತಾವರಣ ನಿರ್ಮಾಣಕ್ಕಾಗಿ ಇತ್ತೀಚಿನ ದಿನಗಳಲ್ಲಿ 'ಇ–ವಾಹನ'ಗಳ ಬಳಕೆ ಹೆಚ್ಚಾಗುತ್ತಿದ್ದು, ಇದೀಗ ಮೈಸೂರು ನಗರದಲ್ಲಿ ಸಾರಿಗೆ ಸಂಸ್ಥೆ ಪ್ರಯಾಣಿಕರ ಸೇವೆಗೆ ಹೆಚ್ಚಿನ ಸಂಖ್ಯೆಯಲ್ಲಿ ಎಲೆಕ್ಟ್ರಿಕಲ್(ಇ–ಬಸ್) ಬಸ್ ಒದಗಿಸಲು ಸಿದ್ಧತೆ ಮಾಡಿಕೊಳ್ಳುತ್ತಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಕೆಎಸ್ ಆರ್‌ಟಿಸಿ) ಈಗಾಗಲೇ ಬೆಂಗಳೂರು, ಮೈಸೂರು ಸೇರಿದಂತೆ ರಾಜ್ಯದ ಪ್ರಮುಖ ನಗರಗಳ ನಡುವೆ 'ಪವರ್ ಪ್ಲಸ್' ಎಲೆಕ್ಟ್ರಿಕ್ ಬಸ್ ಸೇವೆ ಆರಂಭಿಸಿದ್ದು, ಪ್ರಯಾಣಿಕರಿಗೆ ಯಶಸ್ವಿ ಸೇವೆ ಕಲ್ಪಿಸುವಲ್ಲಿ ಎಲೆಕ್ಟ್ರಿಕ್ ಬಸ್‌ಗಳು ಯಶಸ್ವಿಯಾಗಿವೆ. ಶಬ್ದ ರಹಿತ, ವೇಗವಾಗಿ ಚಲಿಸುವ ಹಾಗೂ ಆರಾಮದಾಯಕ ಅನುಭವ ನೀಡುವ 'ಇ–ಬಸ್'ಗಳು ನಿರೀಕ್ಷೆಗೂ ಮೀರಿ ಪ್ರಯಾಣಿಕರ ವಿಶ್ವಾಸಕ್ಕೆ ಪಾತ್ರವಾಗಿರುವ ಹಿನ್ನೆಲೆಯಲ್ಲಿ ಸಾರಿಗೆ ಸಂಸ್ಥೆ ಹೆಚ್ಚಿನ ಸಂಖ್ಯೆಯಲ್ಲಿ ಪವರ್ ಪ್ಲಸ್ ಬಸ್ಸುಗಳು ರಸ್ತೆಗಿಳಿಸಿವೆ. ಖಾಸಗಿ ವಲಯದಲ್ಲೂ ಎಲೆಕ್ಟ್ರಿಕ್ ವಾಹನಗಳ ಬಳಕೆ ಹೆಚ್ಚಾಗುತ್ತಿರುವುದರಿಂದ ಇದೀಗ ಮೈಸೂರು ನಗರ ವ್ಯಾಪ್ತಿಯಲ್ಲೂ ಶೀಘ್ರದಲ್ಲೇ ಇ–ಬಸ್ಸುಗಳು ರೋಡಿಗಿಳಿಯಲಿವೆ.

> ಮೈಸೂರು ನಗರ ವಿಭಾಗ ವ್ಯಾಪ್ತಿಗೆ 100 ಎಲೆಕ್ಟ್ರಿಕಲ್ ಬಸ್ ನೀಡುವ ಸಂಬಂಧ, ಮಾರ್ಗ ಗುರುತಿಸುವಂತೆ ಕೇಂದ್ರ ಕಚೇರಿಯಿಂದ ಮಾಹಿತಿ ಬಂದಿದೆ. ಬನ್ನಿಮಂಟಪದ ಡಿಪೋದಲ್ಲಿ ಇ–ಬಸ್ ನಿರ್ವಹಣೆಗೆ ವ್ಯವಸ್ಥೆ ಮಾಡಲಾಗುತ್ತಿದೆ. ಈಗಾಗಲೇ ಕೆಲವು ಮಾರ್ಗವನ್ನು ಗುರುತಿಸಿದ್ದು, ಶೀಘ್ರದಲ್ಲಿ ಕೇಂದ್ರ ಕಚೇರಿಗೆ ವರದಿ ಸಲ್ಲಿಸಲಾಗುವುದು.
> – ಹೆಚ್.ಟಿ.ವೀರೇಶ್, ವಿಭಾಗೀಯ ನಿಯಂತ್ರಣಾಧಿಕಾರಿ, ಮೈಸೂರು ನಗರ ವಿಭಾಗ

ಮೈಸೂರಿಗೆ 100 ಇ–ಬಸ್: ಬೆಂಗಳೂರನ್ನು ಹೊರತುಪಡಿಸಿದರೆ ವೇಗವಾಗಿ ಬೆಳೆಯುತ್ತಿರುವ ಮೈಸೂರು ನಗರಕ್ಕೆ ಪ್ರತಿದಿನ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ ಹಾಗೂ ಸಾರಿಗೆ ಬಸ್‌ಗಳಲ್ಲಿ ಸಂಚರಿಸುವ ಪ್ರಯಾಣಿಕರ ಸಂಖ್ಯೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಸಾರಿಗೆ ಸಂಸ್ಥೆಯ ಕೇಂದ್ರ ಕಚೇರಿ ಮೈಸೂರಿಗೆ 100 ಇ–ಬಸ್(ಎಲೆಕ್ಟ್ರಿಕಲ್ ಬಸ್) ಮಂಜೂರು ಮಾಡಲು ಉದ್ದೇಶಿಸಿದೆ. ಅದಕ್ಕಾಗಿ ಇ–ಬಸ್ ಸರಬರಾಜು ಮಾಡಲು ಟೆಂಡರ್ ಕರೆದಿದ್ದು, ಅಂತಿಮ ಹಂತದಲ್ಲಿದೆ. ಮೇ ತಿಂಗಳಲ್ಲಿ ಹಂತ ಹಂತವಾಗಿ ಮೈಸೂರಿಗೆ ಇ–ಬಸ್ ಆಗಮಿಸುವ ನಿರೀಕ್ಷೆಯಿದ್ದು, ಅದಕ್ಕಾಗಿ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

180ರಿಂದ 220 ಕಿ.ಮಿ ಪ್ರಯಾಣದ ಮಾರ್ಗ: ಸಾರಿಗೆ ಸಂಸ್ಥೆಗೆ ಖಾಸಗಿ ಸಂಸ್ಥೆಗಳು ಟೆಂಡರ್ ಪಡೆದು ಎಲೆಕ್ಟ್ರಿಕ್ ಬಸ್‌ಗಳನ್ನು ಪೂರೈಸುತ್ತವೆ. ದಿನಕ್ಕೆ 180 ರಿಂದ 220 ಕಿ.ಮಿ ಸಂಚರಿಸುವ ಮಾರ್ಗದಲ್ಲಿ ಇ–ಬಸ್ ಸಂಚರಿಸುವ ಒಡಂಬಡಿಕೆ ಮಾಡಿಕೊಂಡಿದ್ದು, ಅದಕ್ಕಾಗಿ ಮೈಸೂರು ನಗರ ವಿಭಾಗ ವ್ಯಾಪ್ತಿಯಲ್ಲಿ ಇ–ಬಸ್ ಸಂಚರಿಸಲು ಯೋಗ್ಯವಾದ ಮಾರ್ಗ ಗುರುತಿಸುವಂತೆ ಕೇಂದ್ರ ಕಚೇರಿ ಮೈಸೂರು ನಗರ ವಿಭಾಗೀಯ ನಿಯಂತ್ರಣಾಧಿಕಾರಿಗೆ ಸೂಚನೆ ನೀಡಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ನಗರ ಸಾರಿಗೆ ಸಂಸ್ಥೆಯ ಬಸ್ಸುಗಳು 180ರಿಂದ 220 ಕಿ.ಮಿ ಸಂಚರಿಸುವ ಮಾರ್ಗ ಗುರುತಿಸುವ ಕೆಲಸ ಆರಂಭಿಸಿದೆ. ಅದರಲ್ಲಿ ನಗರ ಬಸ್ ನಿಲ್ದಾಣದಿಂದ ಚಾಮುಂಡಿಬೆಟ್ಟ, ಜೆ.ಪಿ.ನಗರ, ಎಲ್‌ಅಂಡ್‌ಟಿ, ಇಲವಾಲ, ಕೆಆರ್‌ಎಸ್, ಪಾಲಹಳ್ಳಿ, ಶ್ರೀರಂಗಪಟ್ಟಣ, ನಂಜನಗೂಡು ಸೇರಿದಂತೆ ಇನ್ನಿತರ ಮಾರ್ಗಗಳಲ್ಲಿ ಇ–ಬಸ್ ಸಂಚರಿಸಬಹುದೆಂದು ಗುರುತಿಸಿದೆ. ಇನ್ನಷ್ಟು ಮಾರ್ಗಗಳ ಗುರುತಿಸುವ ಕಾರ್ಯ ನಡೆಯುತ್ತಿದ್ದು, ಮಾಸಾಂತ್ಯದ ವೇಳೆಗೆ ಕೇಂದ್ರ ಕಚೇರಿಗೆ ವರದಿ ನೀಡಲಿದೆ.

ಬನ್ನಿಮಂಟಪ ಡಿಪೋ ಇ–ಬಸ್‌ಗೆ ಮೀಸಲು: ಎಲೆಕ್ಟ್ರಿಕ್ ಬಸ್ ಪೂರೈಸುವ ಟೆಂಡರ್ ಅಂತಿಮ ಹಂತ ತಲುಪಿರುವುದರಿಂದ ಇ–ಬಸ್ ನಿರ್ವಹಣೆಗೆ ಬೇಕಾದ ವ್ಯವಸ್ಥೆ ಕಲ್ಪಿಸುವ ಜವಾಬ್ದಾರಿ ನಗರ ವಿಭಾಗದ ಅಧಿಕಾರಿಗಳ ಮೇಲಿದೆ. ಮೈಸೂರಿನ ಬನ್ನಿಮಂಟಪದಲ್ಲಿರುವ ನಗರ ಸಾರಿಗೆ ವಿಭಾಗಕ್ಕೆ ಸೇರಿದ ಬಸ್ ಡಿಪೋದಲ್ಲಿ ಎಲೆಕ್ಟ್ರಿಕ್ ಬಸ್‌ಗಳ ನಿರ್ವಹಣೆಗೆ ಬೇಕಾದ ವ್ಯವಸ್ಥೆ ಮಾಡಲಾಗುತ್ತದೆ. ಗ್ರಾಮಾಂತರ ವಿಭಾಗದಲ್ಲಿ ನಗರ ವಿಭಾಗ ವಿಲೀನಗೊಂಡ ಬಳಿಕ ನಿರ್ವಹಣೆಯ ವೆಚ್ಚ ಕಡಿಮೆ ಮಾಡಲು ಬನ್ನಿಮಂಟಪದ ಡಿಪೋದಲ್ಲಿ ನಡೆಯುತ್ತಿದ್ದ ಚಟುವಟಿಕೆ ಬೇರೆ ಡಿಪೋಗಳಿಗೆ ಸ್ಥಳಾಂತರಿಸಿದ್ದರಿಂದ ಬನ್ನಿಮಂಟಪದ ನಗರ ಡಿಪೋ ಸ್ಥಗಿತಗೊಂಡಿತ್ತು. ಇದೀಗ ಈ ಡಿಪೋದಲ್ಲಿ ಇ–ಬಸ್ ನಿರ್ವಹಣೆ, ಸಿಬ್ಬಂದಿಗಳಿಗೆ ಬೇಕಾದ ಮೂಲ ಸೌಲಭ್ಯ ಕಲ್ಪಿಸುವ ಕೆಲಸ ಆರಂಭಿಸಲಾಗಿದೆ. ಕುಡಿಯುವ ನೀರು, ಶೌಚಾಲಯ, ಸಿಬ್ಬಂದಿಗಳ ವಿಶ್ರಾಂತಿ ಗೃಹ ಹಾಗೂ ಇನ್ನಿತರ ಸೌಲಭ್ಯ ಒದಗಿಸಲಾಗುತ್ತದೆ.

ಚಾರ್ಜಿಂಗ್ ಸ್ಟೇಷನ್: ಎಲೆಕ್ಟ್ರಿಕ್ ಬಸ್‌ಗಳು ಸಾಮಾನ್ಯವಾಗಿ ಸಾಮಾನ್ಯ ಪಾಳಿಯಲ್ಲಿ ಸಂಚರಿಸಲಿದ್ದು, ರಾತ್ರಿ 8 ಗಂಟೆ ನಂತರ ಡಿಪೋ ಸೇರಲಿವೆ. ಡಿಪೋಗೆ ತೆರಳಿದ ಬಳಿ ಬಸ್‌ಗಳ ಬ್ಯಾಟರಿ ಚಾರ್ಜ್ ಮಾಡಲು ಡಿಪೋದಲ್ಲಿ ಚಾರ್ಜಿಂಗ್ ಸ್ಟೇಷನ್ ನಿರ್ಮಿಸಲಾಗುತ್ತದೆ. ಅಲ್ಲದೆ, ನಗರ ಬಸ್ ನಿಲ್ದಾಣದಲ್ಲಿ 3 ಆಪರ್ಚುನಿಟಿ ಚಾರ್ಜಿಂಗ್ ಪಾಯಿಂಟ್ ನಿರ್ಮಿಸಿ, ಅನಿವಾರ್ಯ ಸಂದರ್ಭದಲ್ಲಿ ಈ ಚಾರ್ಜಿಂಗ್ ಪಾಯಿಂಟ್‌ನಲ್ಲಿ ಬಸ್‌ಗಳ ಬ್ಯಾಟರಿ ಚಾರ್ಜ್ ಮಾಡಲಾಗುತ್ತದೆ.

ದೇಶ - ವಿದೇಶ

ಟ್ರಂಪ್ ಅಮೆರಿಕದ ಆರ್ಥಿಕತೆಯನ್ನು ಹಾಳು ಮಾಡಲಿದ್ದಾರೆ: ಅರ್ಥಶಾಸ್ತ್ರಜ್ಞ ಜೆಫ್ರಿ ಸ್ಯಾಚ್ಸ್

ವಾಷಿಂಗ್ಟನ್, ಏ.4– ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಪ್ರತಿಸುಂಕ ಹೇರಿಕೆ ಕ್ರಮದಿಂದ ಅಮೆರಿಕದ ಆರ್ಥಿಕತೆಗೆ ಹಾನಿ ಉಂಟಾಗುತ್ತದೆ ಎಂದು ಅಮೆರಿಕದ ಅರ್ಥಶಾಸ್ತ್ರಜ್ಞ ಮತ್ತು ಸಾರ್ವಜನಿಕ ನೀತಿ ವಿಶ್ಲೇಷಕ ಜೆಫ್ರಿ ಸ್ಯಾಚ್ಸ್ ಹೇಳಿದ್ದಾರೆ.



ಟ್ರಂಪ್ ಅವರ ಪ್ರತಿ ಸುಂಕ ಹೇರಿಕೆ ಕ್ರಮದಿಂದ ಅಮೆರಿಕದ ಆರ್ಥಿಕತೆ ಧ್ವಂಸವಾಗಿ ಮತ್ತಷ್ಟು ತಪ್ಪುಗಳಿಗೆ ಕಾರಣವಾಗುತ್ತದೆ. ಅಮೆರಿಕ ಸಂಯುಕ್ತ ಸಂಸ್ಥಾನವು ಸರಕು ಮತ್ತು ಸೇವೆಗಳಲ್ಲಿನ ತನ್ನ ವ್ಯಾಪಾರದಲ್ಲಿ ದೊಡ್ಡ ಕೊರತೆಯನ್ನು ಹೊಂದಿದೆ. ಇದನ್ನು ಅಮೆರಿಕದ ಕರೆಂಟ್ ಅಕೌಂಟ್ ಎಂದು ಕರೆಯಲಾಗುತ್ತದೆ. ಆ ಕೊರತೆಯು ಸುಮಾರು ಒಂದು ಟ್ರಿಲಿಯನ್ ಡಾಲರ್ ಆಗಿದೆ. ಕರೆಂಟ್ ಅಕೌಂಟ್ ಕೊರತೆಯನ್ನು ನಿರ್ವಹಿಸುವುದು ಎಂದರೆ ಅಮೆರಿಕ ತನ್ನ ಉತ್ಪಾದನೆಗಿಂತ ಹೆಚ್ಚು ಖರ್ಚು ಮಾಡುತ್ತಿದೆ. ಇದು ಕೊರತೆಗೆ ಕಾರಣವಾಗುತ್ತದೆ. ಸರ್ಕಾರವು ರಾಷ್ಟ್ರೀಯ ಕ್ರೆಡಿಟ್ ಕಾರ್ಡ್‌ನಂತೆ ಸಾಲದ ಮೇಲೆ ನಡೆಯುತ್ತದೆ ಎಂದು ಅವರು ತಿಳಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ–ಬಾಂಗ್ಲಾದ ಯೂನುಸ್ ಭೇಟಿ

ಬ್ಯಾಂಕಾಕ್, ಏ.4– ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಬಾಂಗ್ಲಾದೇಶ ಮಧ್ಯಂತರ ಸರ್ಕಾರದ ಮುಖ್ಯ ಸಲಹೆಗಾರ ಮೊಹಮ್ಮದ್ ಯೂನುಸ್ ಅವರನ್ನು ಬ್ಯಾಂಕಾಕ್‌ನಲ್ಲಿ ಭೇಟಿ ಮಾಡಿದ್ದಾರೆ. ಕಳೆದ ವರ್ಷ ಆಗಸ್ಟ್ ತಿಂಗಳಲ್ಲಿ ಶೇಖ್ ಹಸೀನಾ ಅವರು ಪ್ರಧಾನಿ ಹುದ್ದೆಯಿಂದ ಪದಚ್ಯುತಗೊಂಡ ನಂತರ ಉಭಯ ನಾಯಕರ ಮೊದಲ ಭೇಟಿ ಇದಾಗಿದೆ.



ಬಂಗಾಳ ಕೊಲ್ಲಿ ಬಹು–ವಲಯ ಮತ್ತು ತಾಂತ್ರಿಕ ಸಹಕಾರ ಗುಂಪಿನ ನಾಯಕರ ಶೃಂಗಸಭೆಯ ಹೊರಗೆ ಉಭಯ ನಾಯಕರು ಭೇಟಿ ಮಾಡಿದ್ದಾರೆ. ವಿದೇಶಾಂಗ ಸಚಿವ ಎಸ್. ಜೈಶಂಕರ್ ಮತ್ತು ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಧೋವಲ್ ಕೂಡ ಸಭೆಯಲ್ಲಿ ಉಪಸ್ಥಿತರಿದ್ದರು.

ಮುಂಬರುವ ಶೃಂಗಸಭೆಯ ಆತಿಥ್ಯವನ್ನು ಬಾಂಗ್ಲಾದೇಶ ವಹಿಸಲಿದೆ. ಕಳೆದ ವರ್ಷ ಆಗಸ್ಟ್ ತಿಂಗಳಲ್ಲಿ ಶೇಖ್ ಹಸೀನಾ ಅವರನ್ನು ಪ್ರಧಾನಿ ಸ್ಥಾನದಿಂದ ಪದಚ್ಯುತಗೊಳಿಸಿದ ನಂತರ ನಡೆಯುತ್ತಿರುವ ಹಿಂಸಾಚಾರ ಮತ್ತು ಅಲ್ಲಿ ಕಟ್ಟಾ ಇಸ್ಲಾಮಿಕ್ ಶಕ್ತಿಗಳ ಬಲವರ್ಧನೆ ಬಗ್ಗೆ ಭಾರತದ ಆತಂಕ ನಡುವೆ ಉಭಯ ದೇಶಗಳ ಸಂಬಂಧ ಕುಸಿದಿದೆ.

ನಿತ್ಯಾನಂದನ ಕೈಲಾಸದ ನಂಟು ಕಡಿದುಕೊಂಡ ಬೊಲಿವಿಯಾ

ಬೊಲಿವಿಯಾ, ಏ.4– ಭಾರತದಿಂದ ಪಲಾಯನ ಮಾಡಿರುವ ಸ್ವಯಂ ಘೋಷಿತ ದೇವಮಾನವ ನಿತ್ಯಾನಂದ ಸ್ಥಾಪಿಸಿರುವ ಯುನೈಟೆಡ್ ಸ್ಟೇಟ್ಸ್ ಆಫ್ ಕೈಲಾಸದ ಜತೆಗೆ ಎಲ್ಲ ರೀತಿಯ ರಾಜತಾಂತ್ರಿಕ ಸಂಬಂಧಗಳನ್ನು ಕಡಿದುಕೊಂಡಿರುವುದಾಗಿ ಬೊಲಿವಿಯಾ ಸರ್ಕಾರ ಹೇಳಿದೆ.




ಭೂ ಕಬಳಿಕೆಯಲ್ಲಿ ಭಾಗಿಯಾಗಿರುವ ಆಪಾದಿತ ರಾಷ್ಟ್ರ, ಕಾಲ್ಪನಿಕ ಕೈಲಾಸದೊಂದಿಗೆ ಬೊಲಿವಿಯಾ ಸರ್ಕಾರ ರಾಜತಾಂತ್ರಿಕ ಸಂಬಂಧವನ್ನು ಮುಂದುವರಿಸುವುದಿಲ್ಲ ಎಂದು ಬೊಲಿವಿಯಾದ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

ಅಮೆಜಾನ್ ಪ್ರದೇಶದ ಸ್ಥಳೀಯ ಜನರಿಗೆ ಸೇರಿದ ಜಾಗ ಕಬಳಿಸಲು ಹುನ್ನಾರ ನಡೆಸಿದ ಆರೋಪದ ಮೇಲೆ ಈಕ್ವೆಡಾರ್‌ನ ಒಂದು ದ್ವೀಪದಲ್ಲಿ ಇದೆ ಎಂದು ನಂಬಲಾಗಿರುವ ಕೈಲಾಸದ 20 ಸದಸ್ಯರನ್ನು ಬಂಧಿಸಿ, ಅವರನ್ನು ಅವರ ಮೂಲ ದೇಶಗಳಿಗೆ ಗಡೀಪಾರು ಮಾಡಲಾಗಿದೆ. ಸ್ಥಳೀಯರ ಭೂಮಿ ಪಡೆದು ಒಂದು ಸಾವಿರ ವರ್ಷಕ್ಕೆ ಮಾಡಿಕೊಂಡಿದ್ದ ಗುತ್ತಿಗೆ ಒಪ್ಪಂದವನ್ನು ರದ್ದುಪಡಿಸಲಾಗಿದೆ ಎಂದು ಬೊಲಿವಿಯಾ ಸರ್ಕಾರದ ಅಧಿಕಾರಿಗಳು ಕಳೆದ ವಾರ ತಿಳಿಸಿದ್ದರು.

ಎಂಪುರಾನ್ ಸಿನಿಮಾ ನಿರ್ಮಾಪಕ ಗೋಪಾಲಂ ಕಚೇರಿ ಮೇಲೆ ಇಡಿ ದಾಳಿ

ಚೆನ್ನೈ, ಏ.4– ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ ಉಲ್ಲಂಘನೆ ಆರೋಪದ ತನಿಖೆಯ ಭಾಗವಾಗಿ ಜಾರಿ ನಿರ್ದೇಶನಾಲಯ ಶುಕ್ರವಾರ ಚೆನ್ನೈನಲ್ಲಿರುವ ಗೋಕುಲಂ ಗ್ರೂಪ್ ಕಚೇರಿಯಲ್ಲಿ ಶೋಧ ನಡೆಸಿತು.



ಕೋಡಂಬಾಕಂನಲ್ಲಿರುವ ಗೋಕುಲಂ ಗ್ರೂಪ್ ಕಚೇರಿ ಆವರಣದಲ್ಲಿ ಶೋಧ ಕಾರ್ಯಾಚರಣೆ ನಡೆಸಲಾಯಿತು. ಚೆನ್ನೈನ ಸಹವರ್ತಿಗಳೊಂದಿಗೆ ಸಮನ್ವಯದೊಂದಿಗೆ ಜಾರಿ ನಿರ್ದೇಶನಾಲಯದ ಕೊಚ್ಚಿ ಘಟಕವು ಇದರ ನೇತೃತ್ವ ವಹಿಸಿತ್ತು.

ಗೋಕುಲಂ ಗೋಪಾಲನ್ ನೇತೃತ್ವದ ಗೋಕುಲಂ ಗ್ರೂಪ್ 2023ರಿಂದ ಇಡಿಯ ತನಿಖೆಯನ್ನು ಎದುರಿಸುತ್ತಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಹಲವಾರು ಬಾರಿ ವಿಚಾರಣೆಗೆ ಒಳಪಟ್ಟಿದ್ದು, ವ್ಯವಹಾರ ಮತ್ತು ಮನರಂಜನಾ ಕ್ಷೇತ್ರದಲ್ಲಿ ಪ್ರಸಿದ್ಧ ವ್ಯಕ್ತಿ. ಚಿಟ್ ಫಂಡ್‌ಗಳು, ಹಣಕಾಸು, ಚಲನಚಿತ್ರ ನಿರ್ಮಾಣ, ಕ್ರೀಡೆ ಮತ್ತು ಆತಿಥ್ಯವನ್ನು ಒಳಗೊಂಡಿರುವ ಅವರು ಇತ್ತೀಚಿನ ವಿವಾದಾತ್ಮಕ ಚಿತ್ರ ಎಂಪುರಾನ್‌ನ ನಿರ್ಮಾಪಕರೂ ಆಗಿದ್ದಾರೆ. ದಾಳಿಯು ಚಲನಚಿತ್ರ ವಿವಾದಕ್ಕೆ ಸಂಬಂಧಿಸಿಲ್ಲ ಮತ್ತು ಫೆಮಾ ಉಲ್ಲಂಘನೆಗಳ ತನಿಖೆಯ ಮೇಲೆ ಮಾತ್ರ ಕೇಂದ್ರೀಕರಿಸಿದೆ ಎಂದು ಇಡಿ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ದೆಹಲಿ–ಎನ್‌ಸಿಆರ್‌ನಲ್ಲಿ ಪಟಾಕಿ ನಿಷೇಧ ರದ್ದುಗೊಳಿಸಲು ಸುಪ್ರೀಂ ನಕಾರ

ನವದೆಹಲಿ, ಏ.4– ದೆಹಲಿ ಮತ್ತು ರಾಷ್ಟ್ರ ರಾಜಧಾನಿ ಪ್ರದೇಶ(ಎನ್‌ಸಿಆರ್)ನಲ್ಲಿ ಪಟಾಕಿಗಳ ತಯಾರಿಕೆ, ಸಂಗ್ರಹಣೆ ಮತ್ತು ಮಾರಾಟ ನಿಷೇಧವನ್ನು ರದ್ದುಗೊಳಿಸಲು ಸುಪ್ರೀಂಕೋರ್ಟ್ ನಿರಾಕರಿಸಿದೆ



ನ್ಯಾಯಮೂರ್ತಿ ಅಭಯ್ ಎಸ್ ಓಕಾ ಮತ್ತು ನ್ಯಾಯಮೂರ್ತಿ ಉಜ್ಜಲ್ ಭುಯಾನ್ ಅವರನ್ನೊಳಗೊಂಡ ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ಪೀಠ, ಬೀದಿಗಳಲ್ಲಿ ಕೆಲಸ ಮಾಡುವ ದೊಡ್ಡ ಜನಸಂಖ್ಯೆಯ ಜನ ವಾಯು ಮಾಲಿನ್ಯದಿಂದ ತೊಂದರೆ ಅನುಭವಿಸುತ್ತಿದ್ದಾರೆ. ಅವರ ಆರೋಗ್ಯದ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ. ಇನ್ನು ತಮ್ಮ ಮನೆಗಳಲ್ಲಿ ಎಲ್ಲರೂ ಏರ್ ಪ್ಯೂರಿಫೈಯರ್‌ಗಳನ್ನು ಕೊಂಡುಕೊಳ್ಳಲು ಸಾಧ್ಯವಿಲ್ಲ ಎಂದು ಹೇಳಿದೆ.

ದೆಹಲಿ–ಎನ್‌ಸಿಆರ್‌ನಲ್ಲಿ ಪಟಾಕಿಗಳ ನಿಷೇಧ ಆದೇಶ ಮಾರ್ಪಡಿಸುವಂತೆ ಕೋರಿ ಪಟಾಕಿ ಕಂಪನಿಗಳು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್, ದೆಹಲಿಯಲ್ಲಿ ಗಾಳಿಯ ಗುಣಮಟ್ಟ ಹಲವು ತಿಂಗಳಿಂದ ಹದಗೆಟ್ಟ ಸ್ಥಿತಿಯಲ್ಲಿಯೇ ಇದೆ. ಹೀಗಿರುವಾಗ ಪಟಾಕಿ ನಿಷೇಧ ಸಾಧ್ಯವೇ ಇಲ್ಲ ಎಂದು ಹೇಳಿದೆ.

ಕುಶಾಲನಗರದಲ್ಲಿ ಬಿಜೆಪಿ ಪ್ರತಿಭಟನೆ



ಕುಶಾಲನಗರದಲ್ಲಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಕುಶಾಲನಗರ,ಏ.4– ಬಿಜೆಪಿ ಕಾರ್ಯಕರ್ತ ವಿನಯ್ ಸೋಮಯ್ಯ ಆತ್ಮಹತ್ಯೆಗೆ ಕಾರಣರಾಗಿರುವವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಇಲ್ಲಿನ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಲ್ಲಿ ಕೆಲಕಾಲ ಮಾನವ ಸರಪಳಿ ನಿರ್ಮಿಸಿದ ಪ್ರತಿಭಟನಾಕಾರರು ರಾಜ್ಯ ಸರ್ಕಾರ ಹಾಗೂ ಶಾಸಕರ ವಿರುದ್ಧ ಧಿಕ್ಕಾರ ಕೂಗಿದರು.

ಬಿಜೆಪಿಯ ಸಕ್ರಿಯ ಕಾರ್ಯಕರ್ತ ವಿನಯ್ ಸೋಮಯ್ಯ ಕೊಡಗಿನ ಇಬ್ಬರು ಶಾಸಕರ ಕಿರುಕುಳದಿಂದ ಆತ್ಮಹತ್ಯೆಗೆ ಶರಣಾಗಿದ್ದಾನೆ. ಮೃತನ ಡೆತ್‌ನೋಟ್‌ನಿಂದ ಆತನಿಗೆ ಉಂಟಾಗಿರುವ ಕಿರುಕುಳ ಬಹಳ ಸ್ಪಷ್ಟವಾಗಿದೆ. ಆತ ಮಾಡಿರುವ ವಾಟ್ಸಾಪ್ ಕೊನೆಯ ಸಂದೇಶವನ್ನು ಡೈಯಿಂಗ್ ಡಿಕ್ಲರೇಷನ್ ಎಂದು ಪರಿಗಣಿಸಿ ಕೊಡಗಿನ ಇಬ್ಬರು ಶಾಸಕರು, ತೆನ್ನಿರಾ ಮೈನಾ ಹಾಗೂ ಉಳಿದವರ ವಿರುದ್ಧ ಎಫ್‌ಐಆರ್ ದಾಖಲಿಸಿ ಬಂಧಿಸಬೇಕು ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಒತ್ತಾಯಿಸಿದರು.

ಮಾಜಿ ಶಾಸಕ ಕೆ.ಜಿ.ಬೋಪಯ್ಯ ಮಾತನಾಡಿ, ಕೊಡಗಿನ ಸಮಸ್ಯೆಗಳ ಬಗ್ಗೆ ಪ್ರಶ್ನಿಸದೆ ಶಾಸಕರುಗಳನ್ನು ಹೊಗಳಿಕೊಂಡೇ ಇರಬೇಕೇ. ಮೂರನೇ ವ್ಯಕ್ತಿ ಪ್ರಶ್ನಿಸಿ ಹಾಕಿದ ಸಂದೇಶಕ್ಕೆ ಅಡ್ಮಿನ್ ಎಂಬ ಕಾರಣಕ್ಕೆ ವಿನಯ್ ವಿರುದ್ಧ ಪ್ರಕರಣ ದಾಖಲಿಸಿ ಕಿರುಕುಳ ನೀಡಿರುವುದು ಸರಿಯಲ್ಲ. ಅನ್ಯಾಯ ವಿರುದ್ಧ ಪ್ರಶ್ನಿಸುವುದು ನಮ್ಮ ಹಕ್ಕು. ಕೊಡಗಿನ ಪೊಲೀಸ್ ಸ್ಟೇಷನ್‌ಗಳು ಕಾಂಗ್ರೆಸ್ ಕಚೇರಿಗಳಂತೆ ಕಾರ್ಯನಿರ್ವಹಿಸುತ್ತಿವೆ ಎಂದು ಆರೋಪಿಸಿದರು.

ಜಿಲ್ಲಾ ಬಿಜೆಪಿ ಮಹಿಳಾ ಘಟಕದ ಅಧ್ಯಕ್ಷೆ ಅನಿತಾ ಪೂವಯ್ಯ, ಪ್ರಧಾನ ಕಾರ್ಯದರ್ಶಿ ಪುಷ್ಪಾ ನಾಗೇಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಿ.ಕೆ.ಲೋಕೇಶ್, ಕಾರ್ಯದರ್ಶಿ ರಕ್ಷಿತ್, ಮಾಜಿ ಜಿಲ್ಲಾಧ್ಯಕ್ಷ ಬಿ.ಬಿ.ಭಾರತೀಶ್, ಸೋಮವಾರಪೇಟೆ ಮಂಡಲ ಅಧ್ಯಕ್ಷ ಗೌತಮ್, ಕುಶಾಲನಗರ ಬಿಜೆಪಿ ಅಧ್ಯಕ್ಷ ಎಂ.ಎಂ.ಚರಣ್, ಯುವ ಮೋರ್ಚಾ ಅಧ್ಯಕ್ಷ ರಾಮು, ಕಾರ್ಯದರ್ಶಿ ಆದರ್ಶ್, ವಿವಿಧ ಘಟಕಗಳ ಪ್ರಮುಖರಾದ ಸೋಮೇಶ್, ಚಂದ್ರಶೇಖರ್ ಹೇರೂರು, ನವನೀತ್, ವೈಶಾಖ್, ಪ್ರವೀಣ್, ಪ್ರವೀಣ್ ಕುಶಾಲಪ್ಪ, ದಿನೇಶ್ ಚಿಕ್ಕತ್ತೂರು, ಅನುದೀಪ್, ಶಶಿಕುಮಾರ್, ಅಭಿ, ಬಿ.ಜೆ. ಅಣ್ಣಯ್ಯ ಮತ್ತಿತರರು ಪ್ರತಿಭಟನೆಯಲ್ಲಿದ್ದರು.

ಮಡಿಕೇರಿಯಲ್ಲಿನ ಬಿಜೆಪಿ ಕಾರ್ಯಕರ್ತ ವಿನಯ್ ಸೋಮಯ್ಯ ಆತ್ಮಹತ್ಯೆ

ಆರೋಪಿಗಳ ಬಂಧನಕ್ಕೆ ಆಗ್ರಹಿಸಿ ಪ್ರತಿಭಟನೆ

ಮಡಿಕೇರಿ,ಏ.4–ವಿನಯ್ ಸೋಮಯ್ಯ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಘಟನೆಗೆ ಕಾರಣರಾದವರನ್ನು ಕೂಡಲೆ ಬಂಧಿಸುವಂತೆ ಆಗ್ರಹಿಸಿ ಬಿಜೆಪಿ ಕಾರ್ಯಕರ್ತರು ಮಡಿಕೇರಿಯಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಜನರಲ್ ತಿಮ್ಮಯ್ಯ ವೃತ್ತದಲ್ಲಿ ರಸ್ತೆ ತಡೆ ನಡೆಸಿದ ಪ್ರತಿಭಟನಾಕಾರರು ವಿನಯ್ ಸೋಮಯ್ಯ ಡೆತ್‌ನೋಟಿನಲ್ಲಿ ಉಲ್ಲೇಖಿಸಿದವರನ್ನು ಕೂಡಲೆ ಬಂಧಿಸುವಂತೆ ಆಗ್ರಹಿಸಿದರು.

ಶಾಸಕ ಪೊನ್ನಣ್ಣ, ಮಂತರ್ ಗೌಡ ಮತ್ತು ದೂರುದಾರ ತೆನ್ನೀರ ಮೈನಾ ಸಹಿತ ಕಾಂಗ್ರೆಸ್ ಸರಕಾರದ ವಿರುದ್ಧ ಘೋಷಣೆ ಕೂಗಿದ ಬಿಜೆಪಿ ಕಾರ್ಯಕರ್ತರು ಆರೋಪಿಗಳನ್ನು ತಕ್ಷಣವೇ ಬಂಧಿಸುವಂತೆ ಆಗ್ರಹಿಸಿದರು. ಪೊಲೀಸ್ ಇಲಾಖೆ ಬಿಜೆಪಿ ಸಾಮಾಜಿಕ ಜಾಲತಾಣದ ಕಾರ್ಯಕರ್ತರ ಮೇಲೆ ವಿನಾ ಕಾರಣ ದೂರು ದಾಖಲಿಸುತ್ತಿದೆ. ಆಳುವ ಸರ್ಕಾರದ ಕೈಗೊಂಬೆಯಾಗಿ ನಡೆದುಕೊಳ್ಳುತ್ತಿದೆ ಎಂದು ಆರೋಪಿಸಿದರು.

ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಸ್ಥಳಕ್ಕಾಗಮಿಸಿ ರಸ್ತೆ ತಡೆ ಕೈಬಿಡುವಂತೆ ಮನವಿ ಮಾಡಿದರು. ಈ ವೇಳೆ ಪೊಲೀಸರ ವಿರುದ್ಧವೇ ಹರಿಹಾಯ್ದ ಪ್ರತಿಭಟನಾಕಾರರು ಡೆತ್ ನೋಟ್‌ನಲ್ಲಿ ಉಲ್ಲೇಖಿಸಿದವರನ್ನು ಮೊದಲು ಬಂಧಿಸಿ, ಬಿಜೆಪಿ ಕಾರ್ಯಕರ್ತರ ಮೇಲೆ ದುರುದ್ದೇಷದಿಂದ ಎಫ್‌ಐಆರ್ ದಾಖಲಿಸಿ ಕಿರುಕುಳ ನೀಡುತ್ತಿರುವುದನ್ನು ಮೊದಲು ಕೈಬಿಡಿ ಎಂದು ಪೊಲೀಸರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಕಾನೂನು ಗಾಳಿಗೆ ತೂರಲಾಗಿದೆ: ಶಾಸಕ ಕೆ.ಜಿ.ಬೋಪಯ್ಯ ಮಾತನಾಡಿ, ವಿನಯ್ ಸೋಮಯ್ಯ ಮತ್ತಿಬ್ಬರು ಅಡ್ಮಿನ್‌ಗಳಾಗಿರುವ ವಾಟ್ಸ್ ಅಪ್ ಗ್ರೂಪ್‌ನಲ್ಲಿ ವ್ಯಕ್ತಿಯೊಬ್ಬರು ನಾಪೋಕ್ಲು ಗ್ರಾ.ಪಂ ಶೌಚಾಲಯ ಗಬ್ಬೆದ್ದು ನಾರುತ್ತಿರುವ ಬಗ್ಗೆ ಶಾಸಕರ ಫೋಟೋವನ್ನು ಟ್ಯಾಗ್ ಮಾಡಿ ಗ್ರೂಪ್‌ಗೆ ಹಾಕಿದ್ದರು. ಶೌಚಾಲಯ ಶುಚಿಗೊಳಿಸಲು ಆದೇಶ ನೀಡುವ ಬದಲು ಗ್ರೂಪ್‌ಗೆ ಹಾಕಿದವರ ವಿರುದ್ಧ ತಮ್ಮ ಬೆಂಬಲಿಗರನ್ನು ಬಿಟ್ಟು ಪೊಲೀಸ್ ಕೇಸ್ ದಾಖಲಿಸುವ ಕೆಲಸವನ್ನು ಶಾಸಕರು ಮಾಡಿದ್ದಾರೆಂದು ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ ಮಾತನಾಡಿ, ಶಾಸಕರ ಕುಮ್ಮಕ್ಕು ಮಾತ್ರವಲ್ಲದೇ ಪೊಲೀಸ್ ಇಲಾಖೆ ಬೆದರಿಕೆಯನ್ನೂ ಒಡ್ಡಿದ್ದರಿಂದ ಮನನೊಂದು ವಿನಯ್ ಸೋಮಯ್ಯ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದೊಂದು ಉದ್ದೇಶ ಪೂರ್ವಕ ಕೊಲೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.



ವಿನಯ್ ಸೋಮಯ್ಯ ಆತ್ಮಹತ್ಯೆ ಪ್ರಕರಣದ ಆರೋಪಿಗಳನ್ನು ಬಂಧಿಸುವಂತೆ ಆಗ್ರಹಿಸಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ರವಿ ಕಾಳಪ್ಪ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಪಕ್ಷದ ಪ್ರಮುಖರಾದ ಮನು ಮುತ್ತಪ್ಪ, ಸುವಿನ್ ಗಣಪತಿ, ಕನ್ನಂಡ ಸಂಪತ್, ನಗರಸಭಾ ಸದಸ್ಯರಾದ ಮಹೇಶ್ ಜೈನಿ, ಅರುಣ್ ಶೆಟ್ಟಿ, ಅನಿತಾ ಪೂವಯ್ಯ, ಸವಿತಾ ರಾಕೇಶ್, ಸಬಿತ, ಕನ್ನಿಕೆ, ಪಿ.ಎಂ. ರವಿ, ಬಿ.ಕೆ ಜಗದೀಶ್, ಕವನ್ ಕಾರ್ಯಪ್ಪ, ಮನು ಮಂಜುನಾಥ್ ಸೇರಿದಂತೆ ಹಲವಾರು ಮಂದಿ ಪಾಲ್ಗೊಂಡಿದ್ದರು.

ವಿನಯ್ ಸೋಮಯ್ಯ ಆತ್ಮಹತ್ಯೆ ಘಟನೆ ಬೆಂಗಳೂರಿನಲ್ಲಿ ನಡೆದಿದೆ. ಪ್ರತಿಭಟನಾಕಾರರು ತೆನ್ನೀರಾ ಮೈನಾ ಮತ್ತಿತರರ ವಿರುದ್ಧ ಕೇಸ್ ದಾಖಲಿಸುವಂತೆ ಬೇಡಿಕೆ ಮುಂದಿಟ್ಟಿದ್ದಾರೆ. ಈ ಪ್ರಕರಣದ ಬಗ್ಗೆ ಬೆಂಗಳೂರು ಪೊಲೀಸರು ತನಿಖೆ ನಡೆಸಲಿದ್ದು, ಕೊಡಗು ಪೊಲೀಸ್ ಇಲಾಖೆ ಸಂಪೂರ್ಣ ಸಹಕಾರ ನೀಡಲಿದೆ. ಶಾಸಕರ ವಿರುದ್ಧವೂ ಆರೋಪ ಕೇಳಿ ಬಂದಿದ್ದು, ಕಾನೂನು ರೀತಿಯ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಎಸ್‌ಪಿ ರಾಮರಾಜನ್ ತಿಳಿಸಿದರು.

ಸನ್ನದು ಶುಲ್ಕವನ್ನು ಹೆಚ್ಚಿಸದಂತೆ ಆಗ್ರಹಿಸಿ

ಮದ್ಯ ಮಾರಾಟಗಾರರ ಪ್ರತಿಭಟನೆ



ಮಡಿಕೇರಿ: ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಫೆಡರೇಷನ್ ಆಫ್ ವೈನ್ ಮರ್ಚೆಂಟ್ಸ್ ಅಸೋಸಿಯೇಷನ್ ಜಿಲ್ಲಾ ಘಟಕ ಜಿಲ್ಲಾಡಳಿತ ಭವನ ಎದುರು ಪ್ರತಿಭಟನೆ ನಡೆಸಿತು. ವಿವಿಧೆಡೆಗಳಿಂದ ಆಗಮಿಸಿದ್ದ ಮದ್ಯ ಮಾರಾಟಗಾರರು, ಘೋಷಣೆಗಳ ಸಹಿತ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿದರು.

ಮದ್ಯ ಮಾರಾಟಗಾರರ ಒಕ್ಕೂಟದ ಜಿಲ್ಲಾಧ್ಯಕ್ಷ ಗುಮ್ಮಟಿರ ಕಿಲನ್ ಗಣಪತಿ ಮಾತನಾಡಿ, ಮದ್ಯ ಸನ್ನದುದಾರರು ಸಮಸ್ಯೆಯಲ್ಲಿ ಸಿಲುಕಿದ್ದಾರೆ. ರಾಜ್ಯದ ಬೊಕ್ಕಸಕ್ಕೆ ಅತೀ ಹೆಚ್ಚು ಆದಾಯ ನೀಡುವ ಮದ್ಯ ಮಾರಾಟಗಾರರ ಹಿತವನ್ನು ಸರಕಾರ ಕಾಪಾಡಬೇಕಾಗಿದೆ. ಪ್ರಸ್ತುತ ಶೇ.10ರಷ್ಟು ಲಾಭಾಂಶ ಮಾರಾಟಗಾರರಿಗೆ ದೊರೆಯುತ್ತಿದ್ದು, ಚಿಲ್ಲರೆ ಮದ್ಯ ಮಾರಾಟದ ಮೇಲೆ ಕನಿಷ್ಟ ಶೇ.20ರಷ್ಟು ಲಾಭಾಂಶವನ್ನು ಹೆಚ್ಚಿಸ ಬೇಕು. ಹೆಚ್ಚುವರಿ ಅಬಕಾರಿ ಶುಲ್ಕ ಕಡಿಮೆ ಗೊಳಿಸಬೇಕು, ಯಾವುದೇ ಕಾರಣಕ್ಕೂ ಸನ್ನದು ಶುಲ್ಕವನ್ನು ಹೆಚ್ಚಿಸಬಾರದು. ಕೆಲವೊಂದು ಸನ್ನದುಗಳನ್ನು ಹರಾಜು ಮಾಡುವ ಪ್ರಸ್ತಾಪ ಸರಕಾರದ ಮುಂದಿದ್ದು, ಇದನ್ನು ಯಾವುದೇ ಕಾರಣಕ್ಕೂ ಮಾಡಬಾರದು ಎಂದು ಆಗ್ರಹಿಸಿದರು.

ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಬಾಬು ನಾಯ್ಡು, ಕುಇಂಡ ಜಗದೀಶ್, ಸಹಕಾರ್ಯದರ್ಶಿ ಹೆಚ್.ಪಿ. ಪ್ರದೀಪ್, ಮಡಿಕೇರಿ ತಾಲೂಕು ಅಧ್ಯಕ್ಷ ಪೈಕೇರ ಮನೋಹರ್, ವೀರಾಜಪೇಟೆ ತಾಲೂಕು ಅಧ್ಯಕ್ಷ ಕಡೇಮಾಡ ಅಪ್ಪಣ್ಣ, ಪ್ರಮುಖರಾದ ವಾಟೇರಿರ ವೀರಜ್ ಇನ್ನಿತರರಿದ್ದರು.

ಇಂದು ವಿದ್ಯುತ್ ವ್ಯತ್ಯಯ

ಮಡಿಕೇರಿ ಏ.4–ಮಡಿಕೇರಿ 66/11ಕೆ.ವಿ ವಿದ್ಯುತ್ ಉಪಕೇಂದ್ರದಿಂದ ಹೊರಹೊಮ್ಮುವ ಎಫ್1 ಕೋಟೆ ಫೀಡರ್‌ನಲ್ಲಿ ಏ.5ರ ಬೆಳಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ಕಾಲೇಜು ರಸ್ತೆ, ಪ್ರಕೃತಿ ಬಡಾವಣೆ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ವಿರಾಜಪೇಟೆ: ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣೆ ಕಾರ್ಯ ಕೈಗೊಂಡಿರುವುದರಿಂದ ಏ.5 ರಂದು ಬೆಳಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ವಿರಾಜಪೇಟೆ ಪಟ್ಟಣ, ಕಾಕೋಟು ಪರಂಬು, ಕದನೂರು, ಕೆದಮುಳ್ಳೂರು, ಬೇಟೋಳಿ, ಆರ್ಜಿ, ಬಿ.ಶೆಟ್ಟಿಗೇರಿ, ಬಿಟ್ಟಂಗಾಲ, ಸಿದ್ದಾಪುರ, ಮಾಲ್ದಾರೆ, ಕರಡಿಗೋಡು, ಗುಹ್ಯ, ಅಮ್ಮತ್ತಿ, ಚೆಂಬೆಬೆಳ್ಳೂರು, ಮೂರ್ನಾಡು, ಮರಗೋಡು, ಹೊದ್ದೂರು, ಹಾಕತ್ತೂರು, ಹೊಸ್ಕೇರಿ, ನಾಪೋಕ್ಲು, ಕುಂಜಿಲ, ಎಮ್ಮೆಮಾಡು, ಬಲ್ಲಮಾವಟಿ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಚಾವಿಸನಿನಿ ಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ತಿಳಿಸಿದ್ದಾರೆ.

ಇಂದು ಕರ್ನಾಟಕ ಭೂ ಕಬಳಿಕೆ ನಿಷೇಧ ಅಧಿನಿಯಮ ಕಾರ್ಯಾಗಾರ

ಮಡಿಕೇರಿ ಏ.4–ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯಗಳು, ಕಂದಾಯ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ಜಿಲ್ಲಾಡಳಿತದ ಸಹಯೋಗದೊಂದಿಗೆ ಕರ್ನಾಟಕ ಭೂ ಕಬಳಿಕೆ ನಿಷೇಧ ಅಧಿನಿಯಮ ಮತ್ತು ಸಂಬಂಧಿಸಿದ ಕಾಯ್ದೆಗಳ ಬಗ್ಗೆ ಒಂದು ದಿನದ ಕಾರ್ಯಾಗಾರವು ಏ. 05 ರ ಬೆಳಗ್ಗೆ 10 ಗಂಟೆಗೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆಯಲಿದೆ.

ವಿಶೇಷ ನ್ಯಾಯಾಲಯದ ಅಧ್ಯಕ್ಷ ಬಿ.ಎ.ಪಾಟೀಲ್, ಜಿಲ್ಲಾಧಿಕಾರಿ ವೆಂಕಟ್ ರಾಜಾ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಹೊಸಮನಿ ಪುಂಡಲಿಕ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಜಿ.ಪಂ.ಸಿಇಒ ಆನಂದ್ ಪ್ರಕಾಶ್ ಮೀನಾ ಇತರರು ಪಾಲ್ಗೊಳ್ಳಲಿದ್ದಾರೆ.

ಪ್ರಥಮ ಅಧಿವೇಶನ ಬೆಳಗ್ಗೆ 10.30 ರಿಂದ 11.30 ರವರೆಗೆ ಕರ್ನಾಟಕ ಭೂ ಕಬಳಿಕೆ ನಿಷೇಧ ಅಧಿನಿಯಮ 2011 ಮತ್ತು ತಿದ್ದುಪಡಿ ಕಾಯ್ದೆ ಬಗ್ಗೆ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದ ಅಧ್ಯಕ್ಷರಾದ ನ್ಯಾಯಮೂರ್ತಿ ಬಿ.ಎ.ಪಾಟೀಲ್ ಅವರು ಉಪನ್ಯಾಸ ನೀಡಲಿದ್ದಾರೆ.

ದ್ವಿತೀಯ ಅಧಿವೇಶನ ಬೆಳಗ್ಗೆ 11.50 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ನಡೆಯಲಿದೆ. ಕರ್ನಾಟಕ ಭೂ ಕಂದಾಯ ಅಧಿನಿಯಮ ಕಲಂ 192(ಎ) ಬಗ್ಗೆ ಬೆಂಗಳೂರು ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದ ಕಂದಾಯ ಸದಸ್ಯರಾದ ಎಸ್.ಪಾಲಯ್ಯ ಅವರು ಉಪನ್ಯಾಸ ನೀಡಲಿದ್ದಾರೆ.

ತೃತೀಯ ಅಧಿವೇಶನವು ಮಧ್ಯಾಹ್ನ 2 ರಿಂದ 3.15 ರವರೆಗೆ ನಡೆಯಲಿದೆ. ಅರಣ್ಯ ಇಲಾಖೆಯ ಆಸ್ತಿಗಳ ಒತ್ತುವರಿ ಮತ್ತು ತೆರವುಗೊಳಿಸಲು ಇರುವ ಕಾನೂನು ಪ್ರಕ್ರಿಯೆ ಬಗ್ಗೆ ಬೆಂಗಳೂರಿನ ನಿವೃತ್ತ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಎ.ಎಂ.ಅಣ್ಣಯ್ಯ, ಹಿರಿಯ ಸಿವಿಲ್ ನ್ಯಾಯಾಧೀಶರಾದ ಎಚ್.ಕೆ.ನವೀನ್ ಉಪನ್ಯಾಸ ನೀಡಲಿದ್ದಾರೆ.

ಮಧ್ಯಾಹ್ನ 3.15 ರಿಂದ ಸಂಜೆ 4.15 ರವರೆಗೆ ಚರ್ಚೆ ಮತ್ತು ವಿಮರ್ಶೆ, ನಂತರ ಸಂಜೆ 4.30 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದೆ.

ಮುದ್ದಂಡ ಕಪ್ ಹಾಕಿ ಉತ್ಸವ: ಇಂದಿನ ಪಂದ್ಯಾವಳಿ ವಿವರ

ಮೈದಾನ ಸಂಖ್ಯೆ–1: ಬೆಳಿಗ್ಗೆ 9 ಗಂಟೆಗೆ ಅಪ್ಪಂಡೆರಂಡ–ಮೊಳ್ಳೆರ, 10 ಗಂಟೆಗೆ ಬಲ್ಲಂಡ–ತಾಪಂಡ, 11 ಗಂಟೆಗೆ ಚೀಯಂಡಿರ–ಚೇನಂಡ, ಮಧ್ಯಾಹ್ನ 1 ಗಂಟೆಗೆ ಚೋಯಮಡಂಡ–ಮೂಡೇರ, 2 ಗಂಟೆಗೆ ಮೂಕಚಂಡ–ಅಪ್ಪಾರಂಡ

ಮೈದಾನ ಸಂಖ್ಯೆ–2: ಬೆಳಿಗ್ಗೆ 9 ಗಂಟೆಗೆ ಕಂಡ್ರತಂಡ–ಅಜ್ಜೆಟಿರ, 10 ಗಂಟೆಗೆ ಅಂಯ್ಯರಣಿಯಂಡ–ಕೋಲುವಾಡಂಡ, 11 ಗಂಟೆಗೆ ಗಾಂಡಂಗಡ–ಮುಕ್ಕಾಟಿರ(ಕಡಗದಾಳ್), ಮಧ್ಯಾಹ್ನ 1 ಗಂಟೆಗೆ ಪೊರ್ಕಂಡ–ಚಂದೂರ, 2 ಗಂಟೆಗೆ ಮೂಕಂಡ–ಪುಟ್ಟಿಚಂಡ, 3 ಗಂಟೆಗೆ ಪುಲಿಯಂಡ–ಕುಂಡ್ಯೋಳಂಡ.

ಮೈದಾನ ಸಂಖ್ಯೆ–3: ಬೆಳಿಗ್ಗೆ 9 ಗಂಟೆಗೆ ಚೆಂಗೇಟಿರ–ಮುಕ್ಕಾಟಿರ (ದೊಡ್ಡಪುಲಿಕೋಟು), 10 ಗಂಟೆಗೆ ಅಳಮೇಂಗಡ–ಚೆರುವಾಳಂಡ, 11 ಗಂಟೆಗೆ ಕಾಂಗೀರ–ಸಣ್ಣುವಂಡ, ಮಧ್ಯಾಹ್ನ 1 ಗಂಟೆಗೆ ಕೊಲ್ಲಿರ–ಸೋಮೆಯಂಡ, 2 ಗಂಟೆಗೆ ಮಚ್ಚಂಗಡ–ಅಲ್ಲಾರಂಡ, 3 ಗಂಟೆಗೆ ಬಿದ್ದೇರಿಯಂಡ–ಒಡಿಯಂಡ ತಂಡಗಳ ನಡುವೆ ಪೈಪೋಟಿ ನಡೆಯಲಿದೆ.



ಕುಂಜಿಲಗೇರಿ ಮುಕ್ಕಾಟಿರ ಮತ್ತು ಮಾಚಂಡ ತಂಡದ ನಡುವೆ ಪೈಪೋಟಿ

ಬಂಡೀಪುರದಲ್ಲಿ ರಾತ್ರಿ ಸಂಚಾರ ನಿರ್ಬಂಧ ತೆರವು ಬೇಡ

ಸಂಸದ ಯದುವೀರ್ ಒಡೆಯರ್ ಆಗ್ರಹ



ಯದುವೀರ್

ನವದೆಹಲಿ, ಏ.4– ಕರ್ನಾಟಕದ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ರಾತ್ರಿ ಸಂಚಾರ ನಿಷೇಧ ತೆರವುಗೊಳಿಸುವಂತೆ ಕಾಂಗ್ರೆಸ್ ಹೈಕಮಾಂಡ್ ಕರ್ನಾಟಕದ ಕಾಂಗ್ರೆಸ್ ಸರ್ಕಾರದ ಮೇಲೆ ಒತ್ತಡ ಹೇರುತ್ತಿದೆ. ಪರಿಣಾಮ ಕರ್ನಾಟಕ ಸರ್ಕಾರ, ರಾತ್ರಿ ಸಂಚಾರ ತೆರವುಗೊಳಿಸಲು ಮುಂದಾಗಿದೆ ಎಂದು ಮೈಸೂರು– ಕೊಡಗು ಸಂಸದ ಯದುವೀರ್ ಒಡೆಯರ್ ಆರೋಪಿಸಿದ್ದಾರೆ.

ಈ ಸಂಬಂಧ ಗುರುವಾರ ಲೋಕಸಭೆಯಲ್ಲಿ ಮಾತನಾಡಿದ ಯದುವೀರ್, 2009 ರಲ್ಲಿ ಕರ್ನಾಟಕವು ಚಾಮರಾಜನಗರದ ಬಂಡೀಪುರ ಮೂಲಕ ಹಾದುಹೋಗುವ ವಯನಾಡನ್ನು ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ 766ರಲ್ಲಿ ರಾತ್ರಿ ಸಂಚಾರ ನಿಷೇಧಿಸಿತ್ತು.

ಹುಲಿ ಸಂರಕ್ಷಣೆ ಮತ್ತು ರಾತ್ರಿ ವೇಳೆಯಲ್ಲಿ ಕಾನೂನು ಬಾಹಿರ ಚಟುವಟಿಕೆಯನ್ನು ತಡೆಯಲು ಈ ನಿರ್ಧಾರ ಕೈಗೊಳ್ಳಲಾಗಿತ್ತು. ಕೇರಳ ಹಲವು ಸಲ ನಿಷೇಧ ತೆರವುಗೊಳಿಸುವಂತೆ ಆಗ್ರಹಿಸಿತ್ತು. ಹಾಲಿ ಸಿಎಂ ಸಿದ್ದರಾಮಯ್ಯ ತಮ್ಮ ಹಿಂದಿನ ಅವಧಿಯಲ್ಲೂ ಇಂಥ ಬೇಡಿಕೆ ತಿರಸ್ಕರಿಸಿದ್ದರು ಎಂದರು.

ಈ ನಡುವೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಎಲಿವೇಟೆಡ್ ರಸ್ತೆ ನಿರ್ಮಾಣ ವಿರೋಧಿಸಿ ಸಲ್ಲಿಸಿದ್ದ ಅಫಿಡವಿಟ್ ಅನ್ನು ಕೂಡಾ ಪಕ್ಷದ ಹೈಕಮಾಂಡ್ ಒತ್ತಡದ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರ ಹಿಂದಕ್ಕೆ ಪಡೆದಿದೆ. ರಾಜಕೀಯ ಕಾರಣಕ್ಕಾಗಿ ನೈಸರ್ಗಿಕ ಪಾರಂಪರಿಕತೆಯನ್ನು ಹಾಳುಗೆಡುವುದು ಖಂಡನೀಯ. ಹೀಗಾಗಿ ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವಾಲಯ ಕೂಡಲೇ ಮಧ್ಯಪ್ರವೇಶ ಮಾಡಿ ಬಂಡೀಪುರ ಜೀವ ವೈವಿಧ್ಯ ರಕ್ಷಿಸಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.



ಅರ್ಥಪೂರ್ಣ ಅಂಬೇಡ್ಕರ್ ಜಯಂತಿ ಆಚರಣೆಗೆ ನಿರ್ಧಾರ



ಶಾಸಕ ಎ.ಆರ್. ಕೃಷ್ಣಮೂರ್ತಿ ಮಾತನಾಡುತ್ತಿರುವುದು.

ಕೊಳ್ಳೇಗಾಲ,ಏ.4– ಡಾ.ಬಿ.ಆರ್. ಅಂಬೇಡ್ಕರ್ ಜಯಂತಿಯನ್ನು ಎಲ್ಲಾ ಸಮಾಜದ ಮುಖಂಡರ ಸಹಭಾಗಿತ್ವದಲ್ಲಿ ಅರ್ಥಪೂರ್ಣವಾಗಿ ಆಚರಿಸುವ ಜೊತೆಗೆ ಬಾಬಾ ಸಾಹೇಬರ ಭಾವಚಿತ್ರ ಮೆರವಣಿಗೆಗೆ ಆನೆಯನ್ನು ತರಿಸಲು ನೂರಕ್ಕೆ ನೂರೊಂದರಷ್ಟು ಶತಾಯ ಗತಾಯ ಪ್ರಯತ್ನಿಸಲಾಗುವುದು ಎಂದು ಶಾಸಕ ಎ ಆರ್ ಕೃಷ್ಣಮೂರ್ತಿ ಹೇಳಿದ್ದಾರೆ.

ಗುರುಭವನದಲ್ಲಿ ಕರೆಯಲಾಗಿದ್ದ ಜಯಂತಿ ಆಚರಣಾ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಪಟ್ಟಣಾದ್ಯಂತ ದೀಪಾಲಂಕಾರಗೊಳಿಸುವ, ಕಲಾತಂಡಗಳನ್ನು ಕರೆಸುವ ಜೊತೆ ಜೊತೆಗೆ ಉತ್ತಮ ರೀತಿಯಲ್ಲಿ ಸಡಗರದಿಂದ ಬಾಬಾ ಸಾಹೇಬರ ಜಯಂತಿ ಆಚರಿಸೋಣ, ಏ.14ರ ಕಾರ್ಯಕ್ರಮದಲ್ಲಿ ಎಲ್ಲರೂ ಬುದ್ಧನ ಚಿನ್ಹೆ ಮುದ್ರಿತ ನೀಲಿ ಶಲ್ಯ ಧರಿಸಿ ಬರುವಂತೆ ಸಲಹೆ ನೀಡಿದರು

ಕಚೇರಿ, ಗ್ರಾಪಂಗಳಲ್ಲಿ ಅಂಬೇಡ್ಕರ್ ಜಯಂತಿ ಆಚರಿಸಿದ ಬಳಿಕ ಪಟ್ಟಣದಲ್ಲಿ ವಿಜೃಂಭಣೆಯಿಂದ ನಡೆಯುವ ಅಂಬೇಡ್ಕರ್ ಜಯಂತಿಗೂ ತಪ್ಪದೆ ಸರ್ಕಾರಿ ನೌಕರರು ಭಾಗವಹಿಸಬೇಕು, ಒಂದು ವೇಳೆ ಗೈರಾದರೆ ಅದನ್ನ ಪ್ರಶ್ನಿಸುವ ಹಕ್ಕು ನಮ್ಮ ಸಮಾಜದ ಬಂಧುಗಳಿಗೆ ಇದೆ ಎಂಬುದನ್ನ ಎಲ್ಲರೂ ಅರ್ಥಮಾಡಿಕೊಳ್ಳಬೇಕು, ಈ ನಿಟ್ಟಿನಲ್ಲಿ ದಂಡಾಧಿಕಾರಿಗಳು ಕಟ್ಟು ನಿಟ್ಟಿನ ಕ್ರಮಕೈಗೊಳ್ಳಬೇಕು, ಗೈರಾದವರಿಗೆ ನೋಟೀಸ್ ನೀಡುವ ಜೊತೆಗೆ ಕ್ರಮಕ್ಕೂ ಶಿಫಾರಸ್ಸು ಮಾಡಿ ಎಂದು ಸೂಚಿಸಿದರು

ಸಭೆಯಲ್ಲಿ ಶಂಕನಪುರದ ಶೇಖರಬುದ್ಧ, ದಿಲೀಪ್, ಸಿದ್ದಪ್ಪಾಜಿ, ಕೆ.ಕೆ.ಮೂರ್ತಿ, ಅಣಗಳ್ಳಿ ಬಸವರಾಜು, ನಿಂಪು ರಾಜೇಶ್, ಅನ್ಸರ್ ಬೇಗ್, ಸಿದ್ದಾರ್ಥ, ಬಸ್ತಿಪುರ ಪ್ರಕಾಶ್, ವಕೀಲ ಬಸವರಾಜು, ಚೇತನ್ ದೊರೆರಾಜು ಮೊದಲಾದವರು ಮಾತನಾಡಿದರು, ಹನೂರು ಶಾಸಕರನ್ನು ಸಭೆಗೆ ಆಹ್ವಾನಿಸದ ಹಾಗೂ ಕೆಲವರು ಸಭೆಗೆ ಗೈರಾಗಿರುವ ಸಂಬಂಧ ಚರ್ಚಿಸಿ ಮುಂದೆ ಈರೀತಿ ಆಗದಂತೆ ಕ್ರಮವಹಿಸುವಂತೆ ತಾಕೀತು ಮಾಡಿದರಲ್ಲದೆ ಅಂಬೇಡ್ಕರ್ ಜಯಂತಿ ಪೂರ್ವಭಾವಿ ಸಭೆ ಎಂದಿಗೂ ಮುಂದೂಡ ಕೂಡದು, ಇಂತಹ ಘಟನೆ ಮರುಕಳಿಸದಂತೆ ಜಾಗ್ರತೆ ವಹಿಸುವಂತೆ ಸಲಹೆ ನೀಡಿದರು

ಸಭೆಯಲ್ಲಿ ತಹಸಿಲ್ದಾರ್ ಬಸವರಾಜು, ಬಿಇಓ ಮಂಜುಳ, ಸಮಾಜ ಕಲ್ಯಾಣಾಧಿಕಾರಿ ಕೇಶವಮೂರ್ತಿ, ನಗರಸಭೆ ಪ್ರಭಾರ ಪೌರಾಯುಕ್ತ ಪರಶಿವ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ತಾಲೂಕು ಅಧ್ಯಕ್ಷ ಮೋಳೆ ರಾಜೇಂದ್ರ, ನಗರಸಭಾಧ್ಯಕ್ಷೆ ರೇಖಾ ರಮೇಶ್, ಉಪಾಧ್ಯಕ್ಷ ಶಂಕರ್, ಭೀಮನಗರದ ದೊಡ್ಡ ಯಜಮಾನ ಚಿಕ್ಕಮಾಳಿಗೆ, ವರದರಾಜು, ಗುರುಮೂರ್ತಿ, ಕೊಪ್ಪಾಳಿ ಮಹದೇವ ನಾಯಕ, ಜಿ.ಎಂ.ಸುರೇಶ್, ಲಿಂಗರಾಜು, ಎಂ.ನಟರಾಜಮಾಳಿಗೆ, ಕೃಷ್ಣರಾಜು, ಎಂ ಶಿವಮಲ್ಲು, ರಾಜೇಂದ್ರ, ಮಂಜುನಾಥ್, ಶಂಕರ್, ರಾಜಶೇಖರಮೂರ್ತಿ, ಮಹದೇವಸ್ವಾಮಿ ಇನ್ನಿತರಿದ್ದರು.

ತಹಸಿಲ್ದಾರ್ ವಿರುದ್ಧ ದಲಿತ ಮುಖಂಡರ ಆಕ್ರೋಶ

ಕೊಳ್ಳೇಗಾಲ: ಅಂಬೇಡ್ಕರ್ ಜಯಂತಿ ಸಂಬಂಧ ಪೂರ್ವಭಾವಿ ಸಭೆಗೆ ವಿಳಂಬ ನೀತಿ ಅನುಸರಿಸಿದ್ದ ತಹಶಿಲ್ದಾರ್ ವಿರುದ್ಧ ಕಸಬಾ ಯಜಮಾನರು, ದಲಿತ ಮುಖಂಡರು ಘೋಷಣೆ ಕೂಗಿದರು.

ಸಬೆ ಕರೆಯುವಲ್ಲಿ ನೀವು ವಿಳಂಭ ಧೋರಣೆ ತಾಳಿದ್ದ ಹಿನ್ನಲೆಯಲ್ಲಿ ಕ್ಷಮೆ ಕೋರುವಂತೆ ತಹಶೀಲ್ದಾರ್‌ರವರನ್ನು ದಲಿತ ಮುಖಂಡರು ಆಗ್ರಹಿಸಿದರು. ಆದರೆ ತಹಶೀಲ್ದಾರ್ ಬಸವರಾಜು ಕ್ಷಮೆ ಯಾಚಿಸದರಿಂದ ದೊಡ್ಡ ಯಜಮಾನ ಚಿಕ್ಕಮಾಳಿಗೆ, ಯಜಮಾನರಾದ ಸನತ್ ಕುಮಾರ್, ವರದರಾಜು, ವಕೀಲ ಬಸವರಾಜು, ಶಂಕರ್, ಚೇತನ್, ದಿಲೀಪ್ ಸಿದ್ದಪ್ಪಾಜಿ, ಶೇಖರ್ ಬುದ್ದ, ಸಿದ್ದಪ್ಪಾಜಿ, ಸಿದ್ದಯ್ಯನಪುರ ಮುರುಳಿಧರನ್, ಧನಗೆರೆ ಮಹದೇವ, ಮಣಿ, ಸರಗೂರು ಶಿವಶಂಕರ್, ಬೆಂಜಮಿನ್ ಇನ್ನಿತರರು ಸಭೆ ಮಗಿಯುತ್ತಿದ್ದಂತೆ ಧಿಕ್ಕಾರ ಕೂಗಿ ಖಂಡಿಸಿದರು.

ಏ.24ರ ಸಂಪುಟ ಸಭೆಗೆ ಮತ್ತೆ ದಿನಾಂಕದ ಗೊಂದಲ : ಶಿಲ್ಪಾನಾಗ್



ಶಿಲ್ಪಾನಾಗ್


ಚಾಮರಾಜನಗರ,ಏ4– ಏ. 24ರಂದು ಮಲೆ ಮಹದೇಶ್ವರ ಸ್ವಾಮಿ ಬೆಟ್ಟದಲ್ಲಿ ಸಂಪುಟ ಸಭೆ ನಡೆಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಹೇಳಿದ್ದರು. ಆದರೆ, ಸಭೆ ನಡೆಸುವ ಬಗ್ಗೆ ಅಧಿಕೃತವಾಗಿ ಸಿಎಂ ಕಚೇರಿಯಿಂದ ವೇಳಾಪಟ್ಟಿ ಬಂದಿಲ್ಲ ಎಂದು ಜಿಲ್ಲಾಧಿಕಾರಿ ಶಿಲ್ಪಾನಾಗ್ ತಿಳಿಸಿದ್ದಾರೆ.

ಜಿಲ್ಲೆಯ ಅಭಿವೃದ್ಧಿಯ ಕುರಿತು ಸಾಕಷ್ಟು ನಿರೀಕ್ಷೆ ಮೂಡಿಸಿರುವ ಮಲೆ ಮಹದೇಶ್ವರ ಸ್ವಾಮಿ ಬೆಟ್ಟದ ಸಚಿವ ಸಂಪುಟ ಸಭೆಯ ದಿನಾಂಕ ಈವರೆಗೆ ನಾಲ್ಕು ಬಾರಿ ಬದಲಾಗಿದ್ದು, ಪ್ರಸ್ತುತ ಮತ್ತೊಂದು ದಿನಾಂಕ ನಿಗದಿಯಾಗಿದೆ. ಹೀಗಾಗಿ, ಅಂದು ಕೂಡ ಸಭೆ ನಡೆಯುವುದು ಅನುಮಾನ ಮೂಡಿಸಿದೆ ಎಂದು ಹೇಳಿದರು

ಮೊದಲು ಫೆ.16ರಂದು ಚಾಮರಾಜನಗರದಲ್ಲಿ ಸಮಾವೇಶ ಫೆ.17, ಬಳಿಕ ಮಾ. 8ರಂದು ಸಂಪುಟ ಸಭೆ ಹಾಗೂ ಮಾ.9 ರಂದು ಚಾಮರಾಜನಗರದಲ್ಲಿ ಸಮಾವೇಶ ನಡೆಸಲು ದಿನಾಂಕ ಮುಂದೂಡಲಾಯಿತು. ಇದಲ್ಲದೇ ಇದಕ್ಕೂ ಮುಂಚೆ ಎರಡು ಬಾರಿ ದಿನಾಂಕ ಬದಲಾಗಿತ್ತು. ಇದೂ ಸೇರಿ ನಾಲ್ಕನೇ ಬಾರಿಗೆ ದಿನ ಬದಲಾವಣೆಯಾ ಗಿದೆ. ಪ್ರಸ್ತುತ ಏ.24ರಂದು ಸಭೆ ನಡೆಯಲಿದೆ ಎಂಬ ಸಚಿವರ ಸೂಚನೆ ಮೇರೆಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ. ಆದರೆ, ಸಭೆ ನಡೆಸುವ ಬಗ್ಗೆ ಸರ್ಕಾರದಿಂದ ಜಿಲ್ಲಾಡಳಿತಕ್ಕೆ ಯಾವುದೇ ಅಧಿಕೃತ ಮಾಹಿತಿ ಬಂದಿಲ್ಲ ಎಂದು ಅವರು 'ಮೈಸೂರು ಮಿತ್ರ' ನಿಗೆ ತಿಳಿಸಿದರು.

ಚಾಮರಾಜನಗರಕ್ಕೆ ಬಂದರೆ ಅಧಿಕಾರ ಹೋಗುತ್ತೆ ಎಂಬ ಭಯ ಈ ಹಿಂದೆ ರಾಜ್ಯದ ಬಹುತೇಕ ಮುಖ್ಯಮಂತ್ರಿಗಳಲ್ಲಿತ್ತು. ಆ ಮೌಢ್ಯಕ್ಕೆ ಸೆಡ್ಡು ಹೊಡೆದಿದ್ದ ಸಿಎಂ ಸಿದ್ದರಾಮಯ್ಯ ಸಾಕಷ್ಟು ಬಾರಿ ಜಿಲ್ಲೆಗೆ ಭೇಟಿ ನೀಡಿದ್ದಾರೆ. ಪದೇ ಪದೇ ದಿನಾಂಕ ಬದಲಾಗುತ್ತಿರುವುದ್ಯಾಕೆ? ಎಂಬುದು ಯಕ್ಷ ಪ್ರಶ್ನೆಯಾಗಿದೆ.

ಎಪಿಎಂಸಿಯ ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನ ಸ್ವಾಮಿ ನಿಧನ



ಕೊಳ್ಳೇಗಾಲ, ಏ4– ಎಪಿಎಂಸಿಯ ಮಾಜಿ ಅಧ್ಯಕ್ಷರಾದ ಮಲ್ಲಿಕಾರ್ಜುನಸ್ವಾಮಿ (84) ಅವರು ಇಂದು ನಿಧನರಾದರು


ಮೃತರು ಪತ್ನಿ ಸುಂದರಮ್ಮ ಹಾಗೂ ಪುತ್ರರಾದ ಬಸಪ್ಪ, ಚಿನ್ನಪ್ಪ ಪಾಪಣ್ಣ ಹಾಗೂ ಪುತ್ರಿ ಪಾರ್ವತಿ ಸೇರಿದಂತೆ ಅಪಾರ ಬಂಧು ಬಳಗದವರನ್ನು ಅಗಲಿದ್ದಾರೆ. ಅಂತಿಮ ವಿಧಿ ವಿಧಾನಗಳನ್ನು ಸ್ವಗ್ರಾಮ ಗುಂಡೆಗಾಲದಲ್ಲಿ ಶನಿವಾರ ಮಧ್ಯಾಹ್ನ 1ಗಂಟೆಗೆ ನೆರವೇರಿಸಲಾಗುತ್ತದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ವೀರಶೈವ ಮಹಾಸಭೆ ಮಾಜಿ ಅಧ್ಯಕ್ಷ ಮಹದೇವ ಪ್ರಸಾದ್, ಹನೂರು ಕ್ಷೇತ್ರದ ಬಿಜೆಪಿ ನಾಯಕ ನಿಶಾಂತ್ ಸೇರಿದಂತೆ ಇನ್ನಿತರ ಮುಖಂಡರು ಮೃತರಿಗೆ ಅಂತಿಮ ನಮನ ಸಲ್ಲಿಸಿದರು.

ಸಾಲ ತೀರಿಸಿದ ನಂತರವೂ ಕಿರುಕುಳ ನೀಡುತ್ತಿರುವ ಮೈಕ್ರೋ ಫೈನಾನ್ಸ್ ಸಿಬ್ಬಂದಿ

ಯಳಂದೂರು,ಏ4–ರಾಜ್ಯ ಸರ್ಕಾರ ಮೈಕ್ರೋ ಫೈನಾನ್ಸ್ ಕಂಪೆನಿಯವರ ಕಿರುಕುಳವನ್ನು ತಪ್ಪಿಸಲು ಕಾನೂನು ಜಾರಿಗೊಳಿಸಿದ್ದರೂ ಕೂಡ ಇವರ ಕಿರುಕುಳ ಇನ್ನೂ ತಗ್ಗಿದಂತೆ ಕಾಣುತ್ತಿಲ್ಲ. ಇದಕ್ಕೆ ನಿದರ್ಶನ ಎಂಬಂತೆ ಸಾಲ ಮರುಪಾವತಿ ಮಾಡಿ, ಕ್ಲಿಯರೆನ್ಸ್ ಪತ್ರವನ್ನು ಪಡೆದುಕೊಂಡಿದ್ದರೂ ಮತ್ತೆ ಹಣ ಕಟ್ಟುವಂತೆ ಫೈನಾನ್ಸ್ ಸಿಬ್ಬಂದಿ ಕಿರುಕುಳ ನೀಡುತ್ತಿರುವ ಪ್ರಕರಣವೊಂದು ತಾಲೂಕಿನ ದುಗ್ಗಹಟ್ಟಿ ಗ್ರಾಮದಲ್ಲಿ ನಡೆದಿದೆ.

ಸ್ಪಂದನ ಸ್ಫೂರ್ತಿ ಫೈನಾನ್ಷಿಯಲ್ ಲಿಮಿಟೆಡ್ ಶಾಖೆಯಿಂದ 2022ರ ನ. 26 ರಂದು ಲಕ್ಷ್ಮಿ ಶಿವನಂಜ ಎಂಬವರು 80 ಸಾವಿರ ರೂ. ಸಾಲ ಪಡೆದಿದ್ದರು. ಇದಕ್ಕೆ ಪ್ರತಿಯಾಗಿ ಇದುವರೆಗೂ 1.59 ಲಕ್ಷ ರೂ.ಗಳನ್ನು ಪಾವತಿ ಮಾಡಿದ್ದಾರೆ. ಅಲ್ಲದೆ, ಬಾಕಿ ಇರುವ ಒಟ್ಟು 61,500 ರೂ.ಗಳನ್ನು 2023ರ ಆ.22 ರಂದು ಒಂದೇ ಬಾರಿ ಸಂದಾಯ ಮಾಡಿ, ಸಾಲ ಕ್ಲಿಯರೆನ್ಸ್ ಪ್ರಮಾಣ ಪತ್ರ ಕೂಡ ಪಡೆದು ಕೊಂಡಿದ್ದಾರೆ.

ಇದಾದ ಬಳಿಕವೂ ನಿಮ್ಮ ಸಾಲ ಮುಗಿದಿಲ್ಲವೆಂದು ಮೈಕ್ರೋ ಫೈನಾನ್ಸ್ ಸಿಬ್ಬಂದಿ ಕಿರುಕುಳ ನೀಡುತ್ತಿರುವುದರಿಂದ ನನ್ನ ಕುಟುಂಬಕ್ಕೆ ಸಾಕಷ್ಟು ತೊಂದರೆಯಾಗಿ ಮಾನಸಿಕ ಯಾತನೆ ಅನುಭವಿಸುತ್ತಿರುವುದಾಗಿ ಲಕ್ಷ್ಮಿ ಶಿವನಂಜ ಆರೋಪಿಸಿದ್ದಾರೆ. ಕಂಪೆನಿಯ ಶಾಖಾ ಸಿಬ್ಬಂದಿಗೆ ಕೇಳಿದರೆ, ಈ ಹಿಂದೆ ಕೆಲಸ ನಿರ್ವಹಿಸುತ್ತಿದ್ದ ಸಿಬ್ಬಂದಿ ಹಣವನ್ನು ಪಾವತಿ ಮಾಡಿರುವುದಿಲ್ಲ ಆದ್ದರಿಂದ ಈ ಹಣವನ್ನು ಕಟ್ಟಬೇಕೆಂದು ಎಂದು ಹೇಳುತ್ತಿದ್ದಾರೆ. ಆದರೆ ಹಣಕಟ್ಟಿರುವ ರಶೀದಿಯೂ ಇದೆ. ಅಲ್ಲದೆ ಕಂಪೆನಿಯೇ ನೀಡಿರುವ ಕ್ಲಿಯರೆನ್ಸ್ ಸರ್ಟಿಫಿಕೇಟ್ ಕೂಡ ಇದೆ. ಇದಾದ ಬಳಿಕವೂ ಇನ್ನೂ ಹಣ ಕಟ್ಟಿ ಎನ್ನುತ್ತಿರುವ ಕಂಪೆನಿ ವಿರುದ್ಧ ಕಠಿಣ ಕ್ರಮ ವಹಿಸಬೇಕಿದೆ.



Loan Clearance Certificate

Name of the Borrower: Lakshmi
Husband Name: Shivananja
Client Contact No.
Village Name: Dugga Hatti
Centre No
MFI Name: Spandana Sphoorty
Date of disbursement of loan
Overdue Amount if any
Loan Amount: 80,000
Outstanding Amount on the date of issue of this letter
Present Loan ID
Last Repayment date
No. of installment not paid on time

I hereby declare that above mentioned details are correct as per our current record and borrower has closed her loan on

Branch Manager, Seal & Signature
BM Name
Mobile No
Other MFI

Branch Manager, Seal & Signature
BM Name: Mohan
Mobile No
Spandana Sphoorty Financial Ltd

ಲೋನ್ ಕ್ಲಿಯರೆನ್ಸ್ ಸರ್ಟಿಫಿಕೇಟ್.

ಜಿಲ್ಲಾಧಿಕಾರಿಗೆ ದೂರು ನೀಡಿದ್ದರೂ ಕ್ರಮವಿಲ್ಲ : ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಮಾ. 20 ರಂದು ಮನವಿ ಪತ್ರದ ಜತೆಗೆ ಸಂಬಂಧಪಟ್ಟ ಸ್ಪಂದನ ಸ್ಫೂರ್ತಿ ಫೈನಾನ್ಷಿಯಲ್ ಕಂಪನಿಗೆ ಸಂದಾಯ ಮಾಡಿರುವ ಹಣದ ದಾಖಲಾತಿಗಳ ಪ್ರತಿಗಳನ್ನು ನೀಡಲಾಗಿದೆ. ಆದರೂ ಈ ಬಗ್ಗೆ ಯಾವುದೇ ರೀತಿಯ ಕ್ರಮವಹಿಸಿಲ್ಲ, ಇದ್ದರಿಂದ ನನಗೆ ದಿಕ್ಕು ತೋಚದ ಪರಿಸ್ಥಿತಿ ನಿರ್ಮಾಣವಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಕ್ರಮವಹಿಸಿ ನನ್ನಿಂದ ಹೆಚ್ಚುವರಿಯಾಗಿ ಪಡೆದಿರುವ ಹಣವನ್ನು ಮರುಪಾವತಿ ಮಾಡಿ ಆ ಕಂಪನಿ ವಿರುದ್ಧ ಸೂಕ್ತ ಕಾನೂನು ಕ್ರಮವಹಿಸಬೇಕು ಎಂದು ಲಕ್ಷ್ಮಿ ಶಿವನಂಜ ಆಗ್ರಹಿಸಿದ್ದಾರೆ.

ಹಬ್ಬದಂತೆ ಅಂಬೇಡ್ಕರ್ ಜಯಂತಿ ಆಚರಿಸಲು ಕರೆ



ತುಂಬಲ ರಾಮಣ್ಣ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಚಾಮರಾಜನಗರ,ಏ4– ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಹುಟ್ಟು ಹಬ್ಬವನ್ನು ಮನೆ, ಮನದ ಹಬ್ಬವಾಗಿ ಸಮುದಾಯದ ಪ್ರತಿಯೊಬ್ಬರೂ ಆಚರಿಸಬೇಕು ಎಂದು ಅಂಬೇಡ್ಕರ್ ವಿವಿಧೋದ್ದೇಶ ಸೇವಾ ಸಂಸ್ಥೆ ತುಂಬಲ ರಾಮಣ್ಣ ಮನವಿ ಮಾಡಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಪ್ರತಿಯೊಬ್ಬರು ಅಂಬೇಡ್ಕರ್ ಹುಟ್ಟುಹಬ್ಬ ಆಚರಿಸಿ ನಾಡಿಗೆ ಸೌಹಾರ್ದಯುತ ಸಂದೇಶ ಸಾರಬೇಕು ಎಂದರು.

ಅಂಬೇಡ್ಕರ್, ಬಾಬು ಜಗಜೀವನ್ ರಾಮ್ ಹಾಗೂ ವಾಲ್ಮೀಕಿ ಭವನ ಸೇರಿದಂತೆ ಎಸ್‌ಸಿ, ಎಸ್‌ಟಿ ಜನಾಂಗದ ಸಮುದಾಯದ ಭವನಗಳನ್ನು ಸಮುದಾಯದ ಆಸ್ತಿಗಳನ್ನಾಗಿ ಮಂಜೂರು ಮಾಡಿಕೊಡಲು ಸರ್ಕಾರ ಸಂಪುಟ ಸಬೆಯಲ್ಲಿ ನಿರ್ಣಯಿಸಿ ನೋಂದಾಯಿತ ಎಸ್‌ಸಿ, ಎಸ್‌ಟಿ ಸಂಘ–ಸಂಸ್ಥೆಗಳಿಗೆ ನೀಡಲು ಆದೇಶಿಸಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಪ್ರಗತಿಪರ ಒಕ್ಕೂಟದ ಅಧ್ಯಕ್ಷ ಸಿ.ಎಂ. ಕೃಷ್ಣಮೂರ್ತಿ, ಜಿಪಂ ಮಾಜಿ ಸದಸ್ಯ ಕಮಲ್ ನಾಗರಾಜು, ಭಾರತೀಯ ಬೌದ್ಧ ಮಹಾಸಭಾದ ಗುಂಡ್ಲುಪೇಟೆ ತಾಲೂಕು ಅಧ್ಯಕ್ಷ ಗೋವಿಂದರಾಜು, ಬಹುಜನ ಸಮಾಜ ಪಕ್ಷದ ಉಸ್ತುವಾರಿ ಪ್ರಕಾಶ್ ಅಮಚವಾಡಿ, ಮುಖಂಡರಾದ ಸುಭಾಷ್ ಮಾಡ್ರಹಳ್ಳಿ, ಕಾಂತರಾಜ್ ಮಾಂಬಳ್ಳಿ, ಲಿಂಗಯ್ಯ ಉತ್ತಂಬಳ್ಳಿ ಹಾಜರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821– 2496522/23

SITE FOR SALE
45x60 Commercial site on 60ft road for sale in KBL gardenia layout. Attached to vijayanagara 4th stage.Total 2630 sqft 4750 per sqft Price 1.20 crore.
8884616461,8792235466

FOR RENT
3BHK House for rent opp speech and hearing Near Gangothri Public School Bogadi Road
9945049415

ನಿವೇಶನ ಮಾರಾಟಕ್ಕಿದೆ
20x30 W/F ಪ್ರಕೃತಿ ಲೇಔಟ್, ಟಿ.ನರಸೀಪುರ ಮೇನ್ ರೋಡ್, ರಿಂಗ್ ರಸ್ತೆಯಿಂದ 2KM
9591810822
9008570086

NEW HOUSE FOR SALE
In 40x60, East Facing at Vijayanagar, Ist Main 1st Stage, 60ft Road 4 Bed Rooms (All attached) Duplex One Big Hall (20x30) Vasthu CAR PARKING (Cellar) Price - 3.60 Cr (Slightly Negotiable)
9880718980

airtel
Sales Executive Salary 20000 Part time / Full time
9591501305

ಹೊಸ ಮನೆ ಮಾರಾಟಕ್ಕಿದೆ
3 BHK, East Face
MUDA APPROVED
Near St. Joseph School, Yelwala, Huyilalu.
Mob: 8217851695

ವೃದ್ಧಾಶ್ರಮ
ಹಿರಿಯ ಜೀವಗಳಿಗೆ, ಹಾಸಿಗೆ ಹಿಡಿದ ವೃದ್ಧರನ್ನು, ಪಾರ್ಶ್ವವಾಯು ಪೀಡಿತರು, ಹಾಗೂ ಕೈಲಾಗದ ವಯೋ ವೃದ್ಧರನ್ನು ಮನೆಯಂತೆಯೇ ನೋಡಿ ಕೊಳ್ಳುತ್ತಿರುವ ಸಂಸ್ಥೆ ನಮ್ಮ ಮೈಸೂರಿನಲ್ಲಿ ಊಟ, ವಸತಿ, ವೈದ್ಯಕೀಯ ಸೌಲಭ್ಯದೊಂದಿಗೆ ಇಚ್ಛೆವುಳ್ಳವರು ಸಂಪರ್ಕಿಸಿ
9110455297|9591557126

HOUSE FOR SALE
30X40 new house for sale west facing north door G+2 Somnathanagar dattagalli
9900251194
9738884777

12 ಲಕ್ಷ ಪಾವತಿಸಿ (ಉಳಿಕೆ ಲೋನ್) ಖರೀದಿಸಿ 30x40, 30x50ಸೈಟ್
ತಕ್ಷಣ ಮನೆ ಕಟ್ಟಲು ನಮ್ಮ ಬಡಾವಣೆಯಲ್ಲಿ
- ವಿಜಯನಗರ 4ನೇ ಸ್ಟೇಜ್ – 46.8ಲಕ್ಷ
- ವಸಂತನಗರ ಪಕ್ಕ– 55ಲಕ್ಷ
- Infosys ಹಿಂಭಾಗ – 30 ಲಕ್ಷ
- ವಿದ್ಯಾವಿಕಾಸ್ ಬನ್ನೂರು ರಸ್ತೆ–45 ಲಕ್ಷ
- ಶ್ರೀರಾಂಪುರ ರಿಂಗ್ ರಸ್ತೆ– 50 ಲಕ್ಷ

ಮಧ್ಯವರ್ತಿಗಳು ಕ್ಷಮಿಸಿ
8123075038

ಕೆಲಸಕ್ಕೆ ಬೇಕಾಗಿದ್ದಾರೆ
ಬುಕ್ ಸ್ಟೋರ್‌ನಲ್ಲಿ ಜೆರಾಕ್ಸ್ ಮತ್ತು ಕಂಪ್ಯೂಟರ್ (ಬೇಸಿಕ್) ವಿದ್ಯಾರಣ್ಯಪುರಂ ಸುತ್ತಮುತ್ತ ಇರುವವರಿಗೆ ಮೊದಲು ಆದ್ಯತೆ ಹುಡುಗ ಹಾಗೂ ಹುಡುಗಿಯರು ವಿದ್ಯಾರಣ್ಯಪುರಂ
9980135125
9880065039

Corner Site for Sale
30x40 East Facing Corner Site in Layout on Highway behind Airport. MUDA Khata and E-Khata Ready. Direct Owner
9342123373

SREENIDHI LUXURY HOLIDAY PACKAGES

Puri Jagannath -Konark	4days	May15,29
Shirdi-Mumbai	4days	
Delhi,Ayodhya, Prayag,Kashi	9days	May 16,29
Andaman	10days	July2
Tamilnadu,Kerala	10days	April,23

Well Planned 2/3 Day Tour Package By Train Flight
CHENNAI, HYDERABAD, TIRUVANNAMALAI, KANYA KUMARI, MADHURAI TANJORE, PANDICAHERY. TAILORED TO INDIVI DUAL GROUP.
RAMADOOT - SREENIDHI HOLIDAYS
K.H. Road, Mysore.
Mob : 8618766635

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

SITE FOR SALE
40x40 Corner Vishwamanava Enclave, Vijayanagar 4th Stage.
Mob: 8050821108

ಹೊಸ ಮನೆ ಮಾರಾಟಕ್ಕಿದೆ
20x30 ಮುಡಾ ಆಲನಹಳ್ಳಿ ರಿಂಗ್ ರಸ್ತೆಯ ಹತ್ತಿರ ನಂ.39, ವಿನಾಯಕ ಗಾರ್ಡನ್ ಸಿಟಿ, 3 ಬಿಹೆಚ್‌ಕೆ 78 ಲಕ್ಷ
9886675470

SITE FOR SALE
40x60 North Face Boomika Layout Elvala, Price 45 Lakhs (Negotiable)
7676794587

ಬೇಕಾಗಿದ್ದಾರೆ
ನ್ಯೂ ಶಾರದ ರೆಸಾರ್ಟ್ ಕೆ.ಆರ್.ಎಸ್ ಮೇನ್ ರೋಡ್ ನಿಯರ್ ಪಂಪ್ ಹೌಸ್ ಸರ್ಕಲ್
1) ಹೆಡ್ ಕುಕ್ ಆಲ್ ರೌಂಡರ್
2) ರಿಷಪ್ಶನ್ ಬಾಯ್ ಆರ್ ಗರ್ಲ್
3) ಅಕೌಂಟ್‌ಟೆಂಟ್

ಅನುಭವ ಉಳ್ಳವರಿಗೆ ಮಾತ್ರ ಆದ್ಯತೆ
9880185785

7-5-2025, 2-6-2025 ರಿಂದ 17 ದಿನಗಳು ಪುರಿ ಜಗನ್ನಾಥ್, ಕೊನಾರ್ಕ್, ಭುವನೇಶ್ವರ್, ಕಾಶಿ, ಗಯಾ, ಪ್ರಯಾಗ್‌ರಾಜ್, ಅಯೋಧ್ಯೆ, ನೇಪಾಳ, ಮುಕ್ತನಾಥ. 7-5-2025 ರಿಂದ 14 ದಿನಗಳು ದೆಹಲಿ, ಹರಿದ್ವಾರ್, ಯಮುನೋತ್ರಿ, ಗಂಗೋತ್ರಿ, ಬದರಿನಾಥ್, ಕೇದಾರ್‌ನಾಥ್. 28-6-2025 ರಿಂದ 13 ದಿನಗಳು ದೆಹಲಿ ಕುರುಕ್ಷೇತ್ರ, ವೈಷ್ಣೋದೇವಿ, ಗುಲ್‌ಮಾರ್ಗ್, ಕಾಶ್ಮೀರ್, ಅಮರನಾಥ್, ಅಮೃತ್‌ಸರ್, ವಾಘ ಬಾರ್ಡರ್. ಸಂಪರ್ಕಿಸಿ: ಏಷ್ಯನ್ ಟೂರ್ಸ್ ಅಂಡ್ ಟ್ರಾವೆಲ್ಸ್, ಬೆಂಗಳೂರು–70
9342287551, 9482239855

ಜಮೀನು ಮಾರಾಟಕ್ಕಿದೆ
ಮೈಸೂರಿನ ಕುವೆಂಪು ನಗರದಿಂದ ಕೇವಲ 6 ಕಿಲೋಮಿಟರ್ ದೂರದಲ್ಲಿರುವ ಪೆರಿಫೆರಲ್ ರಿಂಗ್ ರೋಡ್‌ಗೆ ಹೊಂದಿಕೊಂಡಿರುವ ಲೇಔಟ್‌ಗೆ ಸೂಕ್ತವಾದ 8.5 ಎಕರೆ ಜಮೀನು ಮಾರಾಟಕ್ಕಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಸಂಪರ್ಕಿಸಿ: ಡಾ.ಗುರುಪ್ರಸಾದ್
9036284426

ಸೋಲಾರ್ ವಾಟರ್ ಹೀಟರ್ Solar Water Heater


ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
Vinaykrishna
9611648636

SITE FOR SALE
30x55 North facing in Hale Kesare 9 & 11A khata, 500 mtrs to Ring Road & Mysore-Bangalore National Highway.
8105157208, 9986567571

SITES FOR SALE
Srirampura Ring Road Opposite to University Layout, Mysore 30x40, 30x50 MUDA APPROVED
9108528002

ಅಡುಗೆ ಮತ್ತು ಮನೆ ಕೆಲಸ ಮಾಡಲು ಬೇಕಾಗಿದ್ದಾರೆ
ಸಂಬಳ : 8000/– (ಮಹಿಳೆಯರಿಗೆ ಆದ್ಯತೆ) 4ನೇ ಹಂತ, ವಿಜಯನಗರ, ಮೈಸೂರು
7975269652

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

ಜೈ ಆಂಜನೇಯ ಬೋರ್‌ವೆಲ್ಸ್
(7A ನೋಂದಾಯಿಸಲಾಗಿದೆ) ®
ನಾವು ಮೈಸೂರು, ಚಾಮರಾಜನಗರ ಮತ್ತು ಮಂಡ್ಯ ಜಿಲ್ಲೆಗಳಲ್ಲಿ 6½" ಮತ್ತು 4¾" ಬೋರ್‌ವೆಲ್ ಕೊರೆಯುತ್ತೇವೆ

9900234477/9902361213
ಶ್ರೀರಾಮಪುರ ರಿಂಗ್ ರೋಡ್ ಸರ್ಕಲ್ ಮೈಸೂರು-570008

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

ಸುವರ್ಣಾವಕಾಶ
ಪ್ರಸಿದ್ಧ ಷೋರೂಮ್ ಮತ್ತು ಕಂಪನಿ & ವರ್ಕ್ ಫ್ರಮ್ ಹೋಂ ಕೆಲಸಕ್ಕೆ, ಯುವಕರು ಮತ್ತು ಯುವತಿಯರು, 22000/- salary. 100% ಗ್ಯಾರೆಂಟಿ ಕೆಲಸ.
9482369816, 9482360136

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9606838940

ಬೇಕಾಗಿದ್ದಾರೆ
ಕುವೆಂಪು ನಗರದಲ್ಲಿ ಇರುವ ನಿಧಿ ಬೋಟಿಕ್ ಅಲ್ಲಿ ಕೆಲಸ ಮಾಡಲು ಹುಡುಗಿ ಬೇಕಾಗಿದ್ದಾರೆ.
8296695765
7348843351

URGENT REQUIREMENT
Teachers Required for SRI JNANA BHARATHI SCHOOL, P.Hosahalli, KRS Road (3KM from J.K. Tyres Mysore) NST/MSc/BSc, B.Ed and Any Degree Maths / Science/Social
9620124567
8310245354
TRAVELLING FACIALITES AVAILABLE

CHANGE OF NAME
I, Vanshika, D/o Pavan Kumar, residing at #3220, Sai Krupa, Srikanta Mantapa Block, 18th Cross, Nanjangud-571301, have changed my name from Vanshika to Vanshika Jain, vide affidavit sworn before Notary Suresha Nanjangud, dated 11-3-25.
Sd/- Vanshika Jain

CHANGE OF NAME
I, Jathin, S/o Pavan Kumar, residing at #3220, Sai Krupa, Srikanta Mantapa Block, 18th Cross, Nanjangud-571301, have changed my name from Jathin to Jathin Jain, vide affidavit sworn before Notary Suresha, Nanjangud, dated 11-3-2025.
Sd/- Jathin Jain

ಬೇಕಾಗಿದ್ದಾರೆ
South Assistant (ಸೌತ್ ಅಸಿಸ್ಟೆಂಟ್ ಕುಕ್)
Counter /Packing (ಕೌಂಟರ್ / ಪ್ಯಾಕಿಂಗ್)
Dosa Chef (ದೋಸಾ ಭಟ್ರು)
Supplier /Waiter (ಸಪ್ಲೈಯರ್)
ಸಂಪರ್ಕಿಸಿ: ಮೈಸೂರ್‌ನಲ್ಲಿ ಕಾಳಿದಾಸ ರೋಡ್ –ಜಯಲಕ್ಷ್ಮೀಪುರಂ ಇರುವ ಶುದ್ಧ ಸಸ್ಯಾಹಾರಿ ರೆಸ್ಟೋರೆಂಟ್‌ಗೆ ಬೇಕಾಗಿದ್ದಾರೆ.
7899028086 / 7338392631

ಪ್ರಮಾಣ ಪತ್ರ
ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ಕಸಬಾ ಹೋಬಳಿ, ತೋಟದ ಮನೆ, ಸಿದ್ದಲಿಂಗಪುರ, ಮನೆ ನಂ. 325/5ರಲ್ಲಿ ವಾಸವಾಗಿರುವ ಬಲರಾಮು (ಆಧಾರ್ ನಂ. 5398 1677 5916) ಆದ ನಾನು ಪ್ರಮಾಣೀಕರಿಸುವುದೇನೆಂದರೆ, ನನ್ನ ಆಧಾರ್ ಕಾರ್ಡ್‌ನಲ್ಲಿ ನನ್ನ ಹೆಸರು ಬಲರಾಮು (Balaramu) ಎಂದಿರುತ್ತದೆ. ಆದರೆ ಡ್ರೈವಿಂಗ್ ಲೈಸನ್ಸ್‌ನಲ್ಲಿ ನನ್ನ ಹೆಸರು ರಾಮ ಪಿ.ಎನ್. (Rama P.N.) ಎಂದಿರುತ್ತದೆ. ಹುಟ್ಟಿದ ದಿನಾಂಕ 01-01-1978 ರ ಬದಲು ದಿನಾಂಕ: 01-06-1975 ರಂದು ಡ್ರೈವಿಂಗ್ ಲೈಸನ್ಸ್‌ನಲ್ಲಿ ತಪ್ಪಾಗಿರುತ್ತದೆ. ಬಲರಾಮು (Balaramu) ಮತ್ತು ರಾಮ ಪಿ.ಎನ್. (Rama P.N.) ಎಂಬ ಎರಡೂ ಹೆಸರುಗಳು ನನ್ನದೇ ಆಗಿರುತ್ತದೆ ಹಾಗೂ ನನ್ನ ಹುಟ್ಟಿದ ದಿನಾಂಕ 01-01-1978 ಆಗಿರುತ್ತದೆ ಎಂದು ನೋಟರಿ ಎಂ.ಎ. ಹೇಮಲತಾ ರವರ ಎದುರು ದಿನಾಂಕ 3-4-2025ರಂದು ಪ್ರಮಾಣೀಕರಿಸಿರುತ್ತೇನೆ.
ಸಹಿ/– ಬಲರಾಮು

ತಕ್ಷಣ ಬೇಕಾಗಿದ್ದಾರೆ
ಮೈಸೂರು ಸ್ಥಳೀಯ ಮತ್ತು ರಾತ್ರಿ ಪಾಳಿಯಲ್ಲಿ ಕೆಲಸ ಮಾಡಲು ಕಂಟೇನರ್ ವಾಹನಗಳಿಗೆ ಟ್ರಕ್ ಚಾಲಕರು ತಕ್ಷಣ ಬೇಕಾಗಿದ್ದಾರೆ. ಪಿಎಫ್ ಮತ್ತು ಇಎಸ್ಐ ಸೌಲಭ್ಯ ಲಭ್ಯವಿದೆ. ದಯವಿಟ್ಟು ಸಂಪರ್ಕಿಸಿ:
Mob: 9341623350

SK CONSTRUCTION
ಮನೆ ಕಟ್ಟಿಸಬೇಕೇ, ಚಿಂತೆ ಬೇಡ ನಿಮ್ಮ ಕನಸಿನ ಮನೆ ನಿಮ್ಮ ಕೈಗೆಟಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ Plan, 3D Elevation ಸಹಿತ ಕಟ್ಟಿಕೊಡುತ್ತೇವೆ.
All Engineering Service in one Roof
9620528490

ಪ್ರವಾಸ
22–4–2025 ಜಾರ್ಖಂಡ್ ವೈದ್ಯನಾಥ, ಕಾಶಿ, ಗಯ, ಪ್ರಯಾಗ್ ರಾಜ್, ಅಯೋಧ್ಯೆ: 8–4–25 ಪುರಿ ಜಗನ್ನಾಥ, ಕಲ್ಕತ್ತಾ: 3–5–25 ಶ್ರೀಶೈಲ, ಮಂತ್ರಾಲಯ, ಹೈದರಾಬಾದ್: ಮಲ್ಲಿಕಾರ್ಜುನ ಪ್ಯಾಕೇಜ್ ತುಮಕೂರು
8496044942

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

SBIT ಟ್ರಾವೆಲ್ಸ್
ದುಬೈ ಪ್ರವಾಸ 2025
22,24 ಏ | 3,10,26,30 ಮೇ
ವಿಮಾನ ಟಿಕೆಟ್‌ಗಳು | ಹೋಟೆಲ್ ವೀಸಾ | ಊಟ | ಪ್ರವೇಶ ಟಿಕೆಟ್‌ಗಳು | ಎಲ್ಲಾ ಪ್ರವಾಸಗಳು
9343524127
(ಸರಸ್ವತಿಪುರಂ, ಮೈಸೂರು)

PRAKRUTHI PROPERTIES
FOR SALE
40x60 Commercial Site @ Ramakrishna Ngr& Srirampura
30x45 Commercial Property @ Jayanagar
20x30,25x35 House @Giridharshni lyt, Srirampura
40x60 Shardha Lyt (JP Nagar)
30x40, 40x60 Duplex House Near Hari Vidyalaya Bogadi
Sites also available Near RT Nagar, Bogadi in & around Mysore
95386 90359, 90359 90359

ಮುಡಾ ಸೈಟು ಮಾರಾಟಕ್ಕಿದೆ
30x30 East Facing ಜೆ.ಪಿ. ನಗರ ರಿಂಗ್ ರಸ್ತೆ ಪಕ್ಕದಲ್ಲಿ ಕೊಪ್ಪಲೂರು, ಮೈಸೂರು
7411848108

SITE FOR SALE
40x60 E/F 60 Feet Road, Vishwa Pragna Layout.
Mob: 8050821108

ಮನೆ ಬಾಡಿಗೆಗೆ ಇದೆ
30x40 ಇಂಡಿಪೆಂಡೆಂಟ್ ಮನೆ ಮಧುವನ ಬಡಾವಣೆ ಶ್ರೀರಾಂಪುರ 2ನೇ ಹಂತದಲ್ಲಿ ಬಾಡಿಗೆಗೆ ಇದೆ (ಸಸ್ಯಹಾರಿ ಸರ್ಕಾರಿ ನೌಕರರಿಗೆ ಆದ್ಯತೆ) 60x40 ಕಮರ್ಷಿಯಲ್ ಜಾಗ ಬಾಡಿಗೆಗೆ ಇದೆ.
9036413529

ಬೇಕಾಗಿದ್ದಾರೆ
1) ಆಫೀಸ್ ಕೆಲಸಕ್ಕೆ ಕಂಪ್ಯೂಟರ್ ಜ್ಞಾನವುಳ್ಳ ಮಹಿಳಾ ಅಭ್ಯರ್ಥಿ
2) ಬಸವನಗುಡಿ ಹತ್ತಿರವಿರುವ ಹೋಟೆಲ್‌ಗೆ ಕ್ಲೀನಿಂಗ್ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ.
3) ವಿಜಯನಗರ ಆಸ್ಪತ್ರೆಗೆ ಹೌಸ್ ಕೀಪಿಂಗ್‌ಗೆ ಮಹಿಳೆಯರು ಮತ್ತು ಪುರುಷ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.

9353646312

ದಾಖಲಾತಿ ಕಳೆದಿದೆ
ಎಂ. ಲಿಂಗಣ್ಣ, #380, ತ್ಯಾಗ ಮಾರ್ಗ, 1ನೇ ಹಂತ, ಸಿದ್ಧಾರ್ಥನಗರ, ಮೈಸೂರು, ಈ ಮೇಲ್ಕಂಡ ಸ್ವತ್ತಿನ ನೋಂದಾಯಿತ ಮಂಜೂರಾತಿ ಪತ್ರವು ಕಳೆದು ಹೋಗಿರುತ್ತದೆ. ಸಿಕ್ಕಿದವರು ಸಂಪರ್ಕಿಸಿ:
Mob: 9740065587

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟ ಚಿನ್ನವನ್ನು ಬಿಡಿಸಿ ಉಳಿದ ಹಣವನ್ನು ತಕ್ಷಣ ನಿಮ್ಮ ಸ್ಥಳದಲ್ಲೇ ನೀಡುತ್ತೇವೆ. ಒಂದು ಗ್ರಾಂ ಚಿನ್ನಕ್ಕೆ Rs. 9,000 (24 CT)
Mob: 9108146123

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್ ಸೋಲಾರ್ ಸರ್ವೀಸ್
8197383645, 9008711654

ಸೈಟು ಬೇಕಾಗಿದೆ
ಚಿಕ್ಕಹಳ್ಳಿ / ವರುಣ / ವಾಜಮಂಗಲ / ಜೆಎಸ್‌ಎಸ್ / ಬಸವೇಶ್ವರ / ನಿರ್ಮಾಣ್ ಹಾಗೂ ಇತರೆ ಅಕ್ಕಪಕ್ಕದ ಬಡಾವಣೆಗಳಲ್ಲಿ ಟಿ. ನರಸೀಪುರ ರಸ್ತೆ / ಬನ್ನೂರು ರಸ್ತೆ.
Mob: 9686071750

WANTED
FEMALE RECEPTIONIST for a SHOWROOM Salary 25,000/- + Incentive.
Mob: 7406369369


SKANDA PROPERTIES
Construction starts from Rs. 1799* per sqft
(This Offer price valid till 30.04.2025)
Hurry Up!!! Book your Project !!!
Ph: 9379888558

ಮನೆ ಮಾರಾಟಕ್ಕಿದೆ
30x40
20x30
30x50 ಸೈಟು
40x30
9008711654

ಫಂಕ್ಷನ್ ಹಾಲ್
ಫಂಕ್ಷನ್ ಹಾಲ್ ತಿಂಗಳ ಬಾಡಿಗೆಗೆ / ಭೋಗ್ಯಕ್ಕೆ ಸರ್ಕಾರಿ ಆಸ್ಪತ್ರೆ ಮುಖ್ಯ ರಸ್ತೆ, ಪ್ರೈವೇಟ್ ಬಸ್ ಸ್ಟ್ಯಾಂಡ್ ಹತ್ತಿರ, ತಿ. ನರಸೀಪುರ

9448390643

ಹೊಸ ಮನೆ ಮಾರಾಟಕ್ಕಿದೆ
3 BHK, East Face
MUDA APPROVED
Near St. Joseph School, Yelwala, Huyilalu.
Mob: 8217851695

Solar Water Heaters


SUNZONE SOLAR SYSTEM
VM Double Road, Kuvempunagar, Mysuru
9845175443

ನಮ್ಮಲ್ಲಿ ಬಾದಾಮಿ, ಗೋಡಂಬಿ, ಪಿಸ್ತಾ, ಅಂಜೂರ, ಒಣದ್ರಾಕ್ಷಿ, ಖರ್ಜೂರ, ಮುಂತಾದ ಡ್ರೈಫ್ರೂಟ್ಸ್ ದೊರೆಯುತ್ತದೆ. (5 ಕಿ.ಮೀ ವರೆಗೂ ಉಚಿತ ಡೆಲಿವರಿ) ಸಂಪರ್ಕಿಸಿ: ರಾಜ್ ಗುರು ಡ್ರೈಫ್ರೂಟ್, ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು
7022293342
9845460211

HOUSE FOR SALE
30x40 North Face
Ground + First Floor (8 years old). 30,000 rent yield per month. Vijayanagar 4th Stage, 2nd face. Price: 2.1 Crore.
BROKERS EXCUSE.
Mob: 9972399939

ತಕ್ಷಣ ಬೇಕಾಗಿದ್ದಾರೆ
1) ಸೆಕ್ಯೂರಿಟಿ ಗಾರ್ಡ್–10th /PUC (ಹೂಟಗಳ್ಳಿ, ಹೆಬ್ಬಾಳು, ಕೂರ್ಗಳ್ಳಿ, ದಟ್ಟಗಳ್ಳಿ, ಕುವೆಂಪುನಗರ)
2) ಹೌಸ್ ಕೀಪಿಂಗ್ – ಹುಡುಗರು/ ಮಹಿಳೆಯರು (ಒಂಟಿಕೊಪ್ಪಲ್, ವಿಜಯನಗರ, ಹೆಬ್ಬಾಳ್, ಸಿದ್ಧಾರ್ಥನಗರ)

ESI & PF ಸೌಲಭ್ಯವಿರುತ್ತದೆ.
9739166772,9731663856

ಮಾರಾಟಕ್ಕಿದೆ
30x40 East ಫೇಸ್ ವಿಜಯನಗರ 4ನೇ ಸ್ಟೇಜು 2ನೇ ಫೇಸ್
9945622196

SITE FOR SALE
Anandasagara Layout 40x60 South Face 40 Feet Road. Excellent location. Brokers Excuse.
Mob: 9972399939

ತಕ್ಷಣ ಬೇಕಾಗಿದ್ದಾರೆ
ಹುಣಸೂರಿನ ಕಟ್ಟೆಮಳಲವಾಡಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಸಂಬಳ: 18000 (26 days) ESI & PF ಊಟ ತಿಂಡಿ ಸೌಲಭ್ಯವಿರುತ್ತದೆ.
9620667819
9880727819

ಬೇಕಾಗಿದ್ದಾರೆ
ಪೆಟ್ರೋಲ್‌ಬಂಕ್‌ನಲ್ಲಿ ಹೆಲ್ಪರ್ ಮತ್ತು ಕ್ಯಾಷಿಯರ್ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು ನಗರ
6364748485

ನಿವೇಶನ ಮಾರಾಟಕ್ಕಿದೆ
ಕೊಳ್ಳೇಗಾಲದ ಮುನೇಶ್ವರಗುಡಿ ಬೀದಿ ಸಂತೇಬೀದಿ ಕೊಳ್ಳೇಗಾಲ ಟೌನ್ ಬಸ್ ನಿಲ್ದಾಣದಿಂದ 100/150 ಮೀಟರ್ 840 ಚದರ ಅಡಿ (ಮಧ್ಯವರ್ತಿಗಳು ಕ್ಷಮಿಸಿ)
9980920320
6360186741

Property for sale
32X72 Semi Comercial Property for Sale in Agrahara Bulding Income 70,000 intrested Buyers contact:
9886387272

ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ
ಎಗ್ ರೈಸ್, ಕಬಾಬ್, ಮಾಡಲು ಬರುವವರು ಮತ್ತು Helper ಫಾಸ್ಟ್ ಫುಡ್ ಕೆಲಸಕ್ಕೆ ಬೇಕಾಗಿದ್ದಾರೆ. ಊಟ ವಸತಿ ಇರುತ್ತದೆ. ಸಂಬಳ: 12,000/- to 20,000/- ಮೈಸೂರು
6361671733

WANTED
1) Bolero driver Age 20 to 35 years Contact: century mattress distributor, hebbal industrial area, Mysore
8217411158
6364697759

ಕಟ್ಟಡ ನಿರ್ಮಾಣ ಕೆಲಸ
ವಸತಿ ಕಟ್ಟಡ ನಿರ್ಮಾಣ ಕೆಲಸ ಮತ್ತು ಎಲ್ಲಾ ತರಹದ ಗಾರೆ ಕೆಲಸಗಳನ್ನು ಮಾಡಿಸಲು ಸಂಪರ್ಕಿಸಿ:
9035335723
ನಿರ್ಮಾಣ ಕಾರ್ಯಗಳು ರೂ.35000/– ದಿಂದ ರೂ.1,99,000/– ತನಕ

ಬೇಕಾಗಿದ್ದಾರೆ
ಮೈಸೂರು ನಗರದ ರೆಸ್ಟೋರೆಂಟ್ ಒಂದಕ್ಕೆ ಕೌಂಟರ್ ಹುಡುಗರು ಮತ್ತು ಕಾಫೀ ಮಾಸ್ಟರ್ ಬೇಕಾಗಿದ್ದಾರೆ
9900661620

ಡ್ರೈವರ್ ಬೇಕಾಗಿದ್ದಾರೆ
ಸಂಬಳ: 16,000/– ವಯೋಮಿತಿ 55 ವರ್ಷಗಳು ಸಂಪರ್ಕಿಸಿ: ಹರೀಶ್
9663311557

ಬೇಕಾಗಿದ್ದಾರೆ
ಹೋಟೆಲ್‌ವೊಂದಕ್ಕೆ ಕಿಚನ್ ವರ್ಕರ್ಸ್ & ಸಪ್ಲೆಯರ್ಸ್ ಬೇಕಾಗಿದ್ದಾರೆ. ಸಂಪರ್ಕಿಸಿ
9986669892
6362610799

ಹೊಸ ಹೋಟೆಲ್ ಒಂದಕ್ಕೆ ತಕ್ಷಣ ಬೇಕಾಗಿದ್ದಾರೆ
1) ನಾನ್‌ವೆಜ್ ಭಟ್ರು–1,
2) ಕೌಂಟರ್ ಬಾಯ್ಸ್–4,
3) ಕ್ಯಾಪ್ಟನ್ –4,
5) ಸರ್ವಿಸ್ ಬಾಯ್–4,
6) ರುಬ್ಬುವ & ಹಚ್ಚುವವರು–2,
7) ಸೌತ್ ಕುಕ್ –2,
8) ಕಿಚನ್ ಸೂಪರ್‌ವೈಸರ್–1

GP HO 9901506954

ಜಮೀನು ಮಾರಾಟಕ್ಕಿದೆ
10 ಗುಂಟೆ ಜಮೀನು ರಿಂಗ್ ರಸ್ತೆ ಇಂದ 15KM ದೂರದಲ್ಲಿ 14 ಲಕ್ಷಗಳಿಗೆ ಹಾಗೂ 1.5 ಎಕರೆ ಜಮೀನು ಹುಲ್ಲಹಳ್ಳಿ ಇಂದ 6 ಕಿ.ಮೀ ದೂರದಲ್ಲಿ 80 ಲಕ್ಷಗಳಿಗೆ ಮಾರಾಟಕ್ಕಿದೆ.
(OWNER)
8197665413

COMMERCIAL SPACE FOR RENT
2nd floor, Available for Rent 7000 sqft, New kanthraj Urs Road Kuvempunagar, Mysuru Separate Stairs, Lift and Parking available. Can be Made Convenient.
7204559999
9880151303

WANTED
Marketing Person Male Candidate Drop your Resume
8548880033

ಬೇಕಾಗಿದ್ದಾರೆ
ವಿರಾಜಪೇಟೆ ಹೆಸರಾಂತ ಸಸ್ಯಹಾರಿ ಹೋಟೆಲ್ ಒಂದಕ್ಕೆ ಕಾರ್ಯನಿರ್ವಹಿಸಲು ಸಪ್ಲೆಯರ್, ಹೆಲ್ಪರ್, ಹಾಗೂ ಬೇಕರಿ ಸ್ವೀಟ್ ಮಾಸ್ಟಾರ್ ಕೂಡಲೇ ಬೇಕಾಗಿದ್ದಾರೆ, ಆಸಕ್ತರು ಸಂಪರ್ಕಿಸಿ.
9740173054
7204375392

SITE FOR SALE
30X40
30X50
Sri Rampura Ring Road, Mysore
8050345574

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ನಂಜನಗೂಡು ನಗರಸಭೆಗೆ 75.73 ಲಕ್ಷ ಉಳಿತಾಯ ಬಜೆಟ್

• 63.99 ಕೋಟಿ ಆದಾಯ ಸಂಗ್ರಹ • 63.24 ಕೋಟಿ ಖರ್ಚು

ನಂಜನಗೂಡು, ಏ.4– ಇಲ್ಲಿನ ನಗರಸಭೆಯ 2025–26ನೇ ಸಾಲಿನ ಸುಮಾರು 64 ಕೋಟಿ ಗಾತ್ರದ 75.73 ಲಕ್ಷ ರೂ. ಉಳಿತಾಯ ಬಜೆಟ್ ಅನ್ನು ನಗರಸಭಾಧ್ಯಕ್ಷ ಶ್ರೀಕಂಠಸ್ವಾಮಿ ಮಂಡಿಸಿದರು.

ನಗರಸಭೆ ಸಭಾಂಗಣದಲ್ಲಿ ಶುಕ್ರವಾರ ನಡೆದ ಆಯವ್ಯಯ ಸಭೆಯಲ್ಲಿ ಬಜೆಟ್ ಮಂಡಿಸಿ ಮಾತನಾಡಿದ ಅವರು, ನಗರ ಸಭೆಗೆ ಸರ್ಕಾರದ ವಿವಿಧ ಅನುದಾನ ಹಾಗೂ ಆಸ್ತಿ ತೆರಿಗೆ, ವಾಣಿಜ್ಯ ಮಳಿಗೆ ಗಳ ಬಾಡಿಗೆ, ನೀರಿನ ತೆರಿಗೆ ಮುಂತಾದ ಬಾಬ್ತುಗಳಿಂದ 63 ಕೋಟಿ 99 ಲಕ್ಷದ 85 ಸಾವಿರ ಆದಾಯ ಸಂಗ್ರಹವಾಗ ಲಿದೆ. ಅದರಲ್ಲಿ ಅಭಿವೃದ್ಧಿ ಕಾಮಗಾರಿ, ನೌಕರರ ವೇತನ ಕಳೆದು ನಗರಸಭೆಗೆ 75.73 ಲಕ್ಷ ರೂ. ಉಳಿತಾಯ ಬಜೆಟ್ ಮಂಡಿಸಲಾಗಿದೆ. ಅಲ್ಲದೆ ಈ ಬಾರಿ ಬಜೆಟ್‌ನಲ್ಲಿ ವಿಶೇಷವಾಗಿ ನಗರಸಭೆ ಯಿಂದ ತರಕಾರಿ ಮತ್ತು ನಾನ್ ವೆಜ್ ಆಹಾರ ಒಳಗೊಂಡಂತೆ ಇನ್ನು 2 ಕಡೆ ಫುಡ್‌ಜೋನ್ ನಿರ್ಮಿಸಲು 50 ಲಕ್ಷ ಮೀಸಲಿಡಲಾಗಿದೆ. ನಂಜನಗೂಡು ನಗರಸಭಾ ಕಚೇರಿಯಲ್ಲಿ ಸಾರ್ವಜನಿಕರ ಕುಂದುಕೊರತೆ ಪರಿಹರಿಸಲು ಸಮಗ್ರ ಮಾಹಿತಿ ವಿವರಗಳನ್ನು ಒಳಗೊಂಡ ಕ್ಯೂಆರ್ ಕೋಡ್ ವ್ಯವಸ್ಥೆ ಅನುಷ್ಠಾನ ಗೊಳಿಸಲು 10 ಲಕ್ಷ ಮೀಸಲಿಡಲಾಗಿದೆ. ವಿಶೇಷವಾಗಿ ಪೇ ಅಂಡ್ ಪಾರ್ಕಿಂಗ್ ವ್ಯವಸ್ಥೆ ಅಭಿವೃದ್ಧಿಗೊಳಿಸಲು 10 ಲಕ್ಷ ಮತ್ತು ಪೈಲೆಟ್ ಮಾದರಿ ಒಂದು ಥೀಮ್ ಪಾರ್ಕ್ ನಿರ್ಮಾಣ ಮಾಡಲು 25 ಲಕ್ಷ ಮೀಸಲಿಡಲಾಗಿದೆ. ಜೊತೆಗೆ ಪೌರ ಕಾರ್ಮಿಕರ ವಿಶ್ರಾಂತಿ ಗೃಹ ನಿರ್ಮಾಣಕ್ಕಾಗಿ 20 ಲಕ್ಷ, ಅಲ್ಲದೇ ಒಳಚರಂಡಿ ವ್ಯವಸ್ಥೆ ಸಮರ್ಪಕವಾಗಿ ಸಾರ್ವಜನಿಕರ ಸೇವೆಗೆ ಲಭ್ಯವಾಗುವಂತೆ ಮಾಡಲು ಈ ಬಾರಿಯ ಬಜೆಟ್‌ನಲ್ಲಿ ಒತ್ತು ನೀಡಲಾಗಿದೆ ಎಂದರು.

ನಗರಸಭಾ ವ್ಯಾಪ್ತಿಯ ವೃತ್ತಗಳ ಅಭಿ ವೃದ್ಧಿ, ತಡೆಗೋಡೆ ನಿರ್ಮಾಣ, ಸ್ವಾಗತ ಕಮಾನುಗಳಿಗಾಗಿ 1 ಕೋಟಿ, ರಸ್ತೆ ಚರಂಡಿ, ಪಾದಚಾರಿ ರಸ್ತೆ ಅಭಿವೃದ್ಧಿಗಾಗಿ 600 ಲಕ್ಷ, ಘನತಾಜ್ಯ ಸಂಸ್ಕರಣಾ ಘಟಕ ನಿರ್ಮಾಣಕ್ಕಾಗಿ ನಿವೇಶನ ಖರೀದಿಗೆ 1 ಕೋಟಿ, ನೈರ್ಮಲ್ಯ ಯಂತ್ರೋಪಕರಣ ಗಳ ಖರೀದಿಗಾಗಿ 65 ಲಕ್ಷ, ವಾಣಿಜ್ಯ ಮಳಿಗೆ, ಅಂಗನವಾಡಿ ಕಟ್ಟಡ, ಸಮು ದಾಯ ಭವನ ನಿರ್ಮಾಣಕ್ಕಾಗಿ 1 ಕೋಟಿ, ಸೇತುವೆ, ಸಾರ್ವಜನಿಕ ಶೌಚಾಲಯಗಳ ನಿರ್ಮಾಣಕ್ಕಾಗಿ 1 ಕೋಟಿ, ಬೀದಿ ದೀಪ, ವಿದ್ಯುತ್ ಚಿತಾಗಾರ ನಿರ್ಮಾಣಕ್ಕಾಗಿ 1 ಕೋಟಿ, ನೈರ್ಮಲ್ಯ ವಾಹನಗಳ ಖರೀದಿಗಾಗಿ 75 ಲಕ್ಷ, ಘನತಾಜ್ಯ ನಿರ್ವ ಹಣಾ ಘಟಕಕ್ಕಾಗಿ 1 ಕೋಟಿ, ಬೋರ್ ವೆಲ್, ಓವರ್ ಹೆಡ್‌ಟ್ಯಾಂಕ್ ನಿರ್ಮಾಣ ಕ್ಕಾಗಿ 1 ಕೋಟಿ, ಅಧಿಕಾರಿ ಮತ್ತು ಸಿಬ್ಬಂದಿ ಗಳ ವೇತನಕ್ಕಾಗಿ 599 ಲಕ್ಷ, ನಗರಸಭೆ ಸದಸ್ಯರ ಗೌರವಧನ 25 ಲಕ್ಷ, ಬೀದಿ ದೀಪಗಳ ವಿದ್ಯುತ್ ವೆಚ್ಚ 624 ಲಕ್ಷ, ರಸ್ತೆ ದುರಸ್ಥಿ, ಗುಂಡಿ ಮುಚ್ಚಲು 1 ಕೋಟಿ ಸೇರಿದಂತೆ ಒಟ್ಟು 5166.35 ಲಕ್ಷಗಳು ವೆಚ್ಚವಾಗಲಿದ್ದು, ನಗರಸಭೆ ಪ್ರಾರಂಭಿಕ ಶಿಲ್ಕು 16.59 ಕೋಟಿ ಸೇರಿದಂತೆ ಒಟ್ಟು 63 ಕೋಟಿ 24 ಲಕ್ಷ, 12 ಸಾವಿರ ಖರ್ಚಾಗಲಿದ್ದು 75.73 ಲಕ್ಷ ಉಳಿತಾಯವಾಗಲಿದೆ ಎಂದರು.


ನಗರಸಭೆ ಅಧ್ಯಕ್ಷ ಶ್ರೀಕಂಠಸ್ವಾಮಿ ಆಯವ್ಯಯ ಮಂಡಿಸಿದರು.

ಸದಸ್ಯ ಹೆಚ್.ಎಸ್.ಮಹದೇವಸ್ವಾಮಿ ಮಾತನಾಡಿ, ಕಳೆದ ಬಜೆಟ್‌ನಲ್ಲಿ ಪೌರಕಾರ್ಮಿಕರ ಅಭಿವೃದ್ಧಿಗಾಗಿ 1 ಕೋಟಿ ಅನುದಾನ ಮೀಸಲಿಡಲಾಗಿತ್ತು. ಈ ಬಾರಿ ಪೌರ ಕಾರ್ಮಿಕರ ಅಭಿವೃದ್ಧಿಗೆ ಮಾನ್ಯತೆ ನೀಡಲಾಗಿಲ್ಲ. ರೆವಿನ್ಯೂ ಬಡಾವಣೆಗಳ 8 ಸಾವಿರ ಮನೆಗಳಿಂದ 2 ಪಟ್ಟು ಆಸ್ತಿ ತೆರಿಗೆ ಸಂಗ್ರಹವಾಗುತ್ತದೆ. ಆದರೂ ಬಡಾವಣೆಗಳಿಗೆ ಮೂಲ ಸೌಲಭ್ಯ ಕಲ್ಪಿಸಿಲ್ಲ ಎಂದು ದೂರಿದರು.

ಆಯುಕ್ತ ವಿಜಯ್ ಮಾತನಾಡಿ, ಕಳೆದ ನವೆಂಬರ್‌ನಲ್ಲಿ ಸರ್ಕಾರ ರೆವಿನ್ಯೂ ಬಡಾವಣೆಗಳ ಆಸ್ತಿ ತೆರಿಗೆ ಬಗ್ಗೆ ತಿದ್ದುಪಡಿ ಮಸೂದೆ ಮಂಡಿಸಿದ್ದು, ಆ ಬಡಾವಣೆ ಗಳಿಂದ ದುಪ್ಪಟ್ಟು ತೆರಿಗೆ ವಸೂಲಿ ಮಾಡುತ್ತಿಲ್ಲ ಎಂದು ಸ್ಪಷ್ಟನೆ ನೀಡಿದರು.

ಈ ವೇಳೆ ಸದಸ್ಯ ಹೆಚ್.ಎಸ್.ಮಹ ದೇವಸ್ವಾಮಿ ನಮ್ಮ ಪ್ರಶ್ನೆಗಳಿಗೆ ಸಮಂಜಸ ಉತ್ತರ ದೊರಕುತ್ತಿಲ್ಲ ಎಂದು ಆರೋಪಿಸಿ ಸಭಾತ್ಯಾಗ ಮಾಡಿದರು.

ನಗರಸಭಾಧ್ಯಕ್ಷ ಶ್ರೀಕಂಠಸ್ವಾಮಿ ಮಾತನಾಡಿ, ಬಜೆಟ್ ಮಂಡನೆಗೂ ಮುಂಚೆ 2 ಬಾರಿ ಬಜೆಟ್ ಪೂರ್ವಭಾವಿ ಸಭೆ ನಡೆಸಲಾಗಿತ್ತು. ಸದಸ್ಯರು ಪೂರ್ವ ಭಾವಿ ಸಭೆಯಲ್ಲಿ ಭಾಗವಹಿಸದೆ ಬಜೆಟ್ ಮಂಡನೆ ಸಭೆಯಲ್ಲಿ ತಕರಾರು ತೆಗೆಯುವುದು ಸರಿಯಲ್ಲ ಎಂದರು.

ಸದಸ್ಯ ಕಪಿಲೇಶ್ ಮಾತನಾಡಿ, ನಗರ ಸಭೆ ಚುನಾವಣೆ ನಡೆದು ಫಲಿತಾಂಶ ಬಂದ ನಂತರ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆ ನಡೆಸಲು ಸರ್ಕಾರ 18 ತಿಂಗಳು ವಿಳಂಬ ಮಾಡಿತ್ತು. ಎರಡನೇ ಅವಧಿಗೂ ಅಧ್ಯಕ್ಷ ಸ್ಥಾನದ ಚುನಾವಣೆ ಗಾಗಿ ಮೀಸಲಾತಿ ನಿಗದಿಪಡಿಸಲು ವಿಳಂಭ ಧೋರಣೆ ಮುಂದುವರೆದಿದ್ದರಿಂದ ನಮ್ಮ ಅಧಿಕಾರದ ಅವಧಿ ಮೊಟಕುಗೊಂಡಿತು. ಸರ್ಕಾರ ಇನ್ನೂ ಮುಂದಾದರೂ ನಗರಸಭೆ ಚುನಾವಣೆ ಮುಗಿದ ನಂತರ ಶೀಘ್ರ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆ ನಡೆಸಬೇಕು ಎಂದು ಆಗ್ರಹಿಸಿದರು.

ಸದಸ್ಯ ಸಿದ್ದರಾಜು ಮಾತನಾಡಿ, ಕೆಲವು ವಾರ್ಡ್‌ಗಳಿಗೆ 50 ಲಕ್ಷಗಳಿಗಿಂತಲೂ ಹೆಚ್ಚಿನ ಅನುದಾನ ನೀಡಿ, ಬಿಜೆಪಿ ಸದಸ್ಯರ ವಾರ್ಡ್‌ಗಳಿಗೆ ಕೇವಲ 10 ಲಕ್ಷ ಅನುದಾನ ನೀಡಲಾಗಿದೆ. ಈ ತಾರತಮ್ಯ ಸರಿ ಇಲ್ಲ ಎಂದು ಆಪಾದಿಸಿದರು.

ಇದಕ್ಕೆ ಉತ್ತರಿಸಿದ ಅಧ್ಯಕ್ಷ ಶ್ರೀಕಂಠ ಸ್ವಾಮಿ ಕೆಲವು ವಾರ್ಡ್‌ಗಳಲ್ಲಿ ಸಮಸ್ಯೆ ಗಳು ಹೆಚ್ಚಿರುವುದರಿಂದ ಅನಿವಾರ್ಯತೆಗೆ ಅನುಗುಣವಾಗಿ ಅನುದಾನ ಹೆಚ್ಚುವರಿ ಬಿಡುಗಡೆ ಮಾಡಲಾಗಿದೆ. ಮಿಕ್ಕ ಎಲ್ಲಾ ವಾರ್ಡ್‌ಗಳಿಗೂ ಸಮಾನಾಂತರವಾಗಿ 10 ಲಕ್ಷ ನಿಗದಿಗೊಳಿಸಲಾಗಿದೆ. ಇದರಲ್ಲಿ ತಾರತಮ್ಯ ಮಾಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದರು.

ಸಭೆಯಲ್ಲಿ ಉಪಾಧ್ಯಕ್ಷೆ ರೆಹೆನಾಬಾನು, ಸದಸ್ಯರಾದ ಎಸ್.ಪಿ.ಮಹೇಶ್, ಗಂಗಾಧರ್, ಮಹೇಶ್ ಅತ್ತಿಖಾನೆ, ಮೀನಾಕ್ಷಿ, ಮಂಜುಳ, ಪ್ರದೀಪ್, ಸಿದ್ದರಾಜು, ನಾಗಮಣಿ, ಮಂಗಳಮ್ಮ, ಖಾಲೀದ್, ಗಾಯಿತ್ರಿ, ಯೋಗೇಶ್, ಮಹದೇವ ಪ್ರಸಾದ್, ವಸಂತ, ಶ್ವೇತಲಕ್ಷ್ಮಿ, ಗಿರೀಶ್ ಬಾಬು, ಪಿ.ದೇವ, ನಂದಿನಿ, ಸಿದ್ದಿಕ್, ನಗರಸಭಾ ಆಯುಕ್ತ ವಿಜಯ್, ಎಇಇ ಮಹೇಶ್, ಪರಿಸರ ಇಂಜಿನಿಯರ್ ಮೈತ್ರಾದೇವಿ, ಆರೋಗ್ಯಾಧಿಕಾರಿಗಳಾದ ರೇಖಾ, ವಂಸತ್ ಕುಮಾರ್ ಸೇರಿದಂತೆ ನಗರಸಭಾ ಕಚೇರಿ ಸಿಬ್ಬಂದಿ ಉಪಸ್ಥಿತರಿದ್ದರು.

ನಗರಸಭೆ ಆದಾಯ ಹೆಚ್ಚಿಸಲು ವಾಣಿಜ್ಯ ಸಂಕೀರ್ಣ ನಿರ್ಮಾಣಕ್ಕಾಗಿ ಬಜೆಟ್‌ನಲ್ಲಿ 50 ಲಕ್ಷ ಮೀಸಲಿಡಲಾಗಿದೆ. ಬಜಾರ್ ರಸ್ತೆಯ ತರಕಾರಿ ಮಾರ್ಕೆಟ್ ಜಾಗದಲ್ಲಿ ಬಹು ಮಹಡಿ ಕಾಂಪ್ಲೆಕ್ಸ್ ನಿರ್ಮಿಸಲು ಸರ್ಕಾರದಿಂದ ಅನುದಾನ ಪಡೆಯಲಾಗುವುದು. ನಗರದಲ್ಲಿ ರಸ್ತೆ ಬದಿ ಆಹಾರ ಮಳಿಗೆಗಳಿಂದ ವಾಹನ ಸವಾರರಿಗೆ ಉಂಟಾಗುತ್ತಿದ್ದ ತೊಂದರೆ ನಿವಾರಿಸಲು ನಗರಸಭೆ ವ್ಯಾಪಾರಿಗಳಿಗೆ ಫುಡ್‌ಜೋನ್ ಆರಂಭಿಸಿದ್ದು, ಒಳ್ಳೆಯ ಬೆಳವಣಿಗೆ. ನಗರದ ಇನ್ನೂ ಎರಡು ಕಡೆ ಫೂಡ್ ಜೋನ್ ನಿರ್ಮಿಸಲಾಗುವುದು. ಮುಖ್ಯಮಂತ್ರಿ ಸಿದ್ದರಾಮಯ್ಯ ಕಳೆದ ಬಾರಿ ಕ್ಷೇತ್ರದ ಅಭಿವೃದ್ಧಿಗಾಗಿ 25 ಕೋಟಿ ವಿಶೇಷ ಅನುದಾನ ನೀಡಿದ್ದರು. ಈ ಬಾರಿ ರಾಜ್ಯ ಬಜೆಟ್‌ನಲ್ಲಿ ಮುಖ್ಯಮಂತ್ರಿಗಳು ವಿಶೇಷ ಅನುದಾನಕ್ಕಾಗಿ 8 ಸಾವಿರ ಕೋಟಿ ರೂ.ಗಳನ್ನು ಮೀಸಲಿಟ್ಟಿದ್ದಾರೆ. ಅವರಿಂದ ಕ್ಷೇತ್ರದ ಅಭಿವೃದ್ಧಿಗಾಗಿ ಹೆಚ್ಚಿನ ಅನುದಾನ ಪಡೆದು ನಗರದ ಅಭಿವೃದ್ಧಿಗಾಗಿ ಹೆಚ್ಚಿನ ಪಾಲನ್ನು ಬಳಸಲಾಗುವುದು. - **ದರ್ಶನ್, ಶಾಸಕ.**

ವ್ಯವಸಾಯದಲ್ಲಿ ನಷ್ಟ: ರೈತ ಆತ್ಮಹತ್ಯೆ



ತಿ.ನರಸೀಪುರ, ಏ.4– ವ್ಯವಸಾಯ ದಲ್ಲಿ ನಷ್ಟವಾದ ಹಿನ್ನಲೆಯಲ್ಲಿ ರೈತ ರೊಬ್ಬರು ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಹಿಟ್ಟುವಳ್ಳಿ ಗ್ರಾಮ ದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ನಿರಂಜನ್ (40) ಆತ್ಮಹತ್ಯೆ ಮಾಡಿಕೊಂಡವರು. ಈತ ತಮ್ಮ ಜಮೀನಿನಲ್ಲಿ ಬಾಳೆ ಸೇರಿದಂತೆ ಸೊಪ್ಪು, ತರಕಾರಿಗಳನ್ನು ಬೆಳೆದಿದ್ದರು. ಆದರೆ ಬೆಳೆ ಸರಿಯಾಗಿ ಬಾರದೆ ನಷ್ಟ ಅನುಭವಿಸಿದ್ದರು ಎನ್ನಲಾಗಿದೆ. ಇದರಿಂದ ಬೇಸತ್ತ ನಿರಂಜನ್ ಮನೆಯಲ್ಲಿ ಕ್ರಿಮಿ ನಾಶಕ ಸೇವಿಸಿ ಅಸ್ವಸ್ಥಗೊಂಡಿದ್ದರು. ತಕ್ಷಣ ಆತನನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ ಚಿಕಿತ್ಸೆ ಫಲಕಾರಿ ಯಾಗದೇ ಶುಕ್ರವಾರ ಸಂಜೆ ಸಾವನ್ನಪ್ಪಿ ದ್ದಾನೆ. ಈ ಸಂಬಂಧ ಬನ್ನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸರ್ಕಾರದ ಸವಲತ್ತುಗಳನ್ನು ಸದುಪಯೋಗಪಡಿಸಿಕೊಳ್ಳಿ


ಫಲಾನುಭವಿಗಳಿಗೆ ಬೋರ್‌ವೆಲ್ ಪರಿಕರಗಳನ್ನು ಶಾಸಕ ಡಿ.ರವಿಶಂಕರ್ ವಿತರಿಸಿದರು.

ಕೆ.ಆರ್.ನಗರ, ಏ.4– ಫಲಾನುಭವಿ ಗಳು ಸರ್ಕಾರದ ಸವಲತ್ತುಗಳನ್ನು ಸದುಪ ಯೋಗಪಡಿಸಿಕೊಳ್ಳಬೇಕು ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ಪಟ್ಟಣದ ಶಾಸಕರ ಕಚೇರಿಯಲ್ಲಿ ಶುಕ್ರವಾರ ಅಂಬೇಡ್ಕರ್ ಮತ್ತು ಭೋವಿ ಅಭಿವೃದ್ಧಿ ನಿಗಮದಿಂದ ನೀಡಲಾದ ಬೋರ್‌ವೆಲ್ ಪರಿಕರಗಳನ್ನು ವಿತರಿಸಿ ಅವರು ಮಾತನಾಡಿದರು.

7 ಫಲಾನುಭವಿಗಳು ತಮ್ಮ ಜಮೀನಿ ನಲ್ಲಿ ಕೊರೆಸಿರುವ ಕೊಳವೆ ಬಾವಿಗಳಲ್ಲಿ ಪರಿಕರಗಳನ್ನು ಅಳವಡಿಸಿಕೊಳ್ಳಲು ನಿಗಮದ ಅಧಿಕಾರಿಗಳು ಸಹಾಯ ಮತ್ತು ಸಹಕಾರ ನೀಡಲಿದ್ದಾರೆ. ಮುಂದಿನ ದಿನ ಗಳಲ್ಲಿ ಮತ್ತಷ್ಟು ಅರ್ಹರಿಗೆ ಬೋರ್‌ವೆಲ್ ಪರಿಕರಗಳು ಮತ್ತು ಇತರ ಅನುಕೂಲ ಗಳನ್ನು ಸರ್ಕಾರದ ವತಿಯಿಂದ ನೀಡ ಲಿದ್ದು, ಆಸಕ್ತರು ಸೂಕ್ತ ದಾಖಲೆಗಳೊಂ ದಿಗೆ ಸಂಬಂಧಿತ ಇಲಾಖೆಗಳಿಗೆ ಅರ್ಜಿ ಸಲ್ಲಿಸಬೇಕು ಎಂದು ಸಲಹೆ ನೀಡಿದರು.

ನಂತರ ಶಾಸಕರು ಲೋಕೋಪಯೋಗಿ ಇಲಾಖೆ ಸಹಾಯಕ ಅಭಿಯಂತರೆ ಸುಮಿತ ಅವರೊಂದಿಗೆ ಕಚೇರಿ ಆವರಣ ಪರಿ ಶೀಲಿಸಿ ರಸ್ತೆಗೆ ಹೊಂದಿಕೊಂಡಂತಿರುವ ಭಾಗದಲ್ಲಿ ವಾಣಿಜ್ಯ ಮಳಿಗೆ ನಿರ್ಮಿಸಲು ಅಂದಾಜು ಪಟ್ಟಿ ತಯಾರಿಸಿ ವರದಿ ನೀಡಬೇಕೆಂದು ಸೂಚಿಸಿದರು.

ಈ ಸಂದರ್ಭ ಫಲಾನುಭವಿಗಳಾದ ಹೆಚ್.ಎಸ್.ಸ್ವಾಮಿ, ಕಾಳಯ್ಯ, ಅಕ್ಕಯ್ಯಮ್ಮ, ಸಣ್ಣಸ್ವಾಮಿ, ಗೌರಮ್ಮ, ರಾಮಮ್ಮ ಮತ್ತು ಮೂರ್ತಿ ಅವರುಗಳಿಗೆ ಬೋರ್‌ವೆಲ್ ಪರಿಕರಗಳನ್ನು ಶಾಸಕರು ವಿತರಿಸಿದರು.

ಅಂಬೇಡ್ಕರ್ ಅಭಿವೃದ್ಧಿ ನಿಗಮದ ತಾಲೂಕು ಅಧಿಕಾರಿ ಕೆಸುನೀಲ್ ಕುಮಾರ್, ತಾಲೂಕು ಸಮಾಜ ಕಲ್ಯಾಣಾಧಿಕಾರಿ ಶಂಕರಮೂರ್ತಿ, ಸಾಲಿಗ್ರಾಮ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಉದಯಶಂಕರ್, ಕಾಂಗ್ರೆಸ್ ಕಾಂಗ್ರೆಸ್ ವಕ್ತಾರ ಸೈಯದ್ ಜಾಬೀರ್, ದಲಿತ ಮುಖಂಡ ಬಲ ರಾಮು, ಎಪಿಎಂಸಿ ಮಾಜಿ ಉಪಾಧ್ಯಕ್ಷ ನಾಗೇಂದ್ರ, ಟಿಎಪಿಸಿಎಂಎಸ್ ಮಾಜಿ ನಿರ್ದೇಶಕ ಜಿ.ಆರ್.ಮಹದೇವ್, ಕುಪ್ಪೆ ಗ್ರಾಪಂ ಸದಸ್ಯ ಮಹೇಂದ್ರ, ಮುಖಂಡರಾದ ಗಂಗಾಧರ್, ಶಂಕರ್, ರಾಜು ನಾಯಕ ಮತ್ತಿತರರಿದ್ದರು.

ಶ್ರೀಗುಂಜಾ ನರಸಿಂಹಸ್ವಾಮಿ ಬ್ರಹ್ಮ ರಥೋತ್ಸವ



ತಿ.ನರಸೀಪುರ, ಏ.4– ಪಟ್ಟಣದ ಶ್ರೀಗುಂಜಾ ನರಸಿಂಹಸ್ವಾಮಿ ಬ್ರಹ್ಮ ರಥೋತ್ಸವ ಏ.12ರಂದು ನಡೆಯಲಿದ್ದು, ಪ್ರತಿ ವರ್ಷದಂತೆ ಈ ಬಾರಿಯೂ ರಥೋತ್ಸವಕ್ಕೆ ಎಲ್ಲಾ ಸಮುದಾಯ ದವರು ಸಹಕಾರ ನೀಡುವಂತೆ ಪಾರುಪತ್ತೇಗಾರ್ ತಿರುಮಕೂಡಲು ದಿಲೀಪ್ ಮನವಿ ಮಾಡಿದ್ದಾರೆ.

ದೇವಾಲಯದ ಆವರಣದಲ್ಲಿ ಸುದ್ದಿ ಗಾರರೊಂದಿಗೆ ಮಾತನಾಡಿದ ಅವರು, ತಿ.ನರಸೀಪುರ, ಆಲಗೂಡು, ಗೋಪಾಲ ಪುರ, ಕೆಬ್ಬೆ, ವ್ಯಾಸರಾಜಪುರ ಯಜ ಮಾನರು, ಗ್ರಾಮಸ್ಥರು ಹಾಗೂ ಭಕ್ತರ ಸಮ್ಮುಖದಲ್ಲಿ ಮಹಾಲಕ್ಷ್ಮಿ ಸಮೇತ ಶ್ರೀ ಗುಂಜಾನರಸಿಂಹಸ್ವಾಮಿ ಅವರ ರಥೋತ್ಸವ ಜರುಗಲಿದೆ ಎಂದರು.

ಇಂದು ದೇವಾಲಯದಲ್ಲಿ ಮುಹೂರ್ತ ಕಂಬಕ್ಕೆ ಪೂಜೆ ಸಲ್ಲಿಸುವ ಮೂಲಕ ರಥೋತ್ಸವದ ಧಾರ್ಮಿಕ ಕಾರ್ಯಕ್ರಮಗಳು ಆರಂಭಗೊಂಡಿವೆ ಎಂದ ಅವರು ರಥೋತ್ಸವ ಅಂಗ ವಾಗಿ ಏ.5ರಂದು ಅಂಕುರಾರ್ಪಣ, ಏ.6ರಂದು ಧ್ವಜಾರೋಹಣ, ಚಂದ್ರಮಂಡಲರೋಹಣ, ಏ.7ರಂದು ತಿರುನಾಳ್ ಕಟ್ಟೆ ಉತ್ಸವ, ಅನಂತ ಪೀಠಾರೋಹಣ, ಏ.8 ರಂದು ಹಂಸಾ ರೋಹಣ, ಏ.9 ರಂದು ಪುಷ್ಪ ಮಂಟಪ ಆರೋಹಣ, ಏ.10ರಂದು ಪ್ರಹಲ್ಲಾದ ಪರಿಪಾಲನೋತ್ಸವ, ಏ.11ರಂದು ಲಕ್ಷ್ಮಿ ಕಲ್ಯಾಣೋತ್ಸವ, ಗಜೇಂದ್ರ ಪರಿಪಾಲ ನೋತ್ಸವ, ಏ.12 ರಂದು ಮೀನ ಶುದ್ಧ ಪೌರ್ಣಮಿ 12.23 ರಿಂದ 12.53ರ ಅಭಿಜಿನ್ ಮುಹೂರ್ತದಲ್ಲಿ ಶ್ರೀಗುಂಜಾ ನರಸಿಂಹಸ್ವಾಮಿ ದಿವ್ಯ ಬ್ರಹ್ಮ ರಥೋ ತ್ಸವ ನಡೆಯಲಿದ್ದು, ಭಕ್ತರು ಹಾಗೂ ಯುವಕ ಮಿತ್ರರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಬ್ರಹ್ಮರಥೋತ್ಸವವನ್ನು ಯಶಸ್ವಿಗೊಳಿಸಿ ಎಂದರು. ಏ.13ರಂದು ತಿರುನಾಳ್ ಕಟ್ಟೆ ಉತ್ಸವ, ಡೋಲೋ ತ್ಸವ ಶಯೋತ್ಸವ, ಏ.14ರಂದು ಅವಾಮೃತ ಸ್ನಾನ, ಏ.15ರಂದು ಮಹಾಭಿಷೇಕ ಹನು ಮಂತೋತ್ಸವ, ಏ.16ರಂದು ವೈಮಾ ಳಿಗೆ ಉತ್ಸವ ನಡೆಯಲಿವೆ ಎಂದರು.

ಮಾಜಿ ಕೇಂದ್ರ ಸಚಿವ ಅನಂತಕುಮಾರ್ ಪುಣ್ಯಸ್ಮರಣೆ


ಕೇಂದ್ರ ಮಾಜಿ ಸಚಿವ ಅನಂತ್ ಕುಮಾರ್ ಪುಣ್ಯಸ್ಮರಣೆ ನಡೆಯಿತು.

ತಿ.ನರಸೀಪುರ, ಏ.4– ಪಟ್ಟಣದಲ್ಲಿ ಶುಕ್ರವಾರ ಹಿರಿಯ ರಾಜಕೀಯ ಮುತ್ಸದ್ದಿ, ಬಿಜೆಪಿ ಹಿರಿಯ ಸಂಘಟಕ ಅನಂತ್ ಕುಮಾರ್ ಪುಣ್ಯಸ್ಮರಣೆ ಕಾರ್ಯಕ್ರಮ ನಡೆಯಿತು.

ಪಟ್ಟಣದ ಬಿಜೆಪಿ ಹಿರಿಯ ಮುಖಂಡ ತೋಟದಪ್ಪ ಬಸವರಾಜು ನಿವಾಸದಲ್ಲಿ ಮಾಜಿ ಕೇಂದ್ರ ಸಚಿವ ಅನಂತಕುಮಾರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಗೌರವ ಸಲ್ಲಿಸಿದರು.

ಬಸವರಾಜು ಮಾತನಾಡಿ, ಅನಂತ ಕುಮಾರ್ ಸರಳ ಸಜ್ಜನಿಕೆ ವ್ಯಕ್ತಿ. ಸಂಘಟನಾ ಚತುರ. ರಾಜ್ಯ ಮತ್ತು ಕೇಂದ್ರ ಬಿಜೆಪಿ ನಾಯಕರ ನಡುವೆ ಕೊಂಡಿಯಂತಿದ್ದ ಅದ್ವಿತೀಯ ನಾಯಕ. ದೇಶಕ್ಕೆ ಅವರ ಸೇವೆ ಅತ್ಯಂತ ಸ್ಮರ ಣೀಯ. ನನ್ನ ರಾಜಕೀಯ ಗುರು ಗಳಾಗಿದ್ದ ಅನಂತ್ ಕುಮಾರ್ ಅವರು ಪುಣ್ಯ ಸ್ಮರಣೆಯಿಂದ ಮನಸ್ಸು ಬಹಳ ಹಗುರವಾಗಿದೆ ಎಂದರು.

80ರ ದಶಕದಲ್ಲಿ ರಾಜ್ಯದಲ್ಲಿ ಬಿಜೆಪಿ ಯನ್ನು ಅಧಿಕಾರಕ್ಕೆ ತರಬೇಕ್ಕೆನ್ನುವ ದೂರದೃಷ್ಟಿಯಿಂದ ರಾಜ್ಯಾದ್ಯಂತ ಸಂಚರಿಸಿ ಪಕ್ಷ ಸಂಘಟನೆ ಮಾಡಿದ್ದರು. ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ತರಲು ಅವರು ಭದ್ರ ಬುನಾದಿ ಹಾಕಿದ್ದರು. ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದು, ರಾಜ್ಯದ ಎಲ್ಲಾ ವರ್ಗದ ಜನರ ಸರ್ವತೋಮುಖ ಅಭಿವೃದ್ಧಿ ಆಗಲಿದೆ ಎಂಬ ಆಶಯ ವ್ಯಕ್ತಪಡಿಸಿದರು. ಈ ವೇಳೆ ಟಿಎಪಿ ಸಿಎಂಎಸ್ ನಿರ್ದೇಶಕ ಮೂಗೂರು ಎಂ.ಜಯಣ್ಣ, ಅಗಸ್ತ್ಯೇಗೌಡ, ಪುನೀತ್, ಅಂದಾನಿ ಇತರರಿದ್ದರು.

ನರೇಗಾ ಯೋಜನೆಯಡಿ ಮಹಿಳೆಯರು ಪಾಲ್ಗೊಳ್ಳಲು

ಗ್ರಾಪಂ ವ್ಯಾಪ್ತಿಯಲ್ಲಿ ಸ್ತ್ರೀಚೇತನ ಅಭಿಯಾನ ಆರಂಭ



ಹುಣಸೂರು, ಏ.4– ನರೇಗಾ ಯೋಜನೆ ಯಡಿ ಗ್ರಾಪಂಗಳಲ್ಲಿ ಅನು ಷ್ಠಾನಗೊಳ್ಳುವ ಕಾಮಗಾರಿಗಳಲ್ಲಿ ಶೇ.60 ರಷ್ಟು ಮಹಿಳೆ ಯರು ಪಾಲ್ಗೊಳ್ಳುವಂತೆ ಪ್ರೇರೇಪಿಸಲು ಏಪ್ರಿಲ್‌ನಿಂದ ಜೂನ್‌ವರೆಗೂ ತಾಲೂಕಿನ ಎಲ್ಲಾ ಗ್ರಾಪಂಗಳಲ್ಲಿ ಸ್ತ್ರೀ ಚೇತನ ಅಭಿಯಾನ ಪ್ರಾರಂಭಿಸಲಾಗಿದೆ ಎಂದು ತಾಪಂ ಇಒ ಕೆ. ಹೊಂಗಯ್ಯ ತಿಳಿಸಿದರು.

ತಾಪಂ ಸಭಾಂಗಣದಲ್ಲಿ ಎಲ್ಲಾ ಗ್ರಾಪಂನ ಎನ್‌ಆರ್‌ಎಲ್‌ಎಂ ಸಂಜೀವಿನಿ ಒಕ್ಕೂಟದ ಎಂಬಿಕೆ ಮತ್ತು ಪದಾಧಿಕಾರಿ ಗಳಿಗಾಗಿ ನಡೆದ ತಾಲೂಕು ಒಕ್ಕೂಟದ ಸಭೆಯಲ್ಲಿ ನರೇಗಾ ಯೋಜನೆಯಡಿ ಮಹಿಳಾ ಪಾಲ್ಗೊ ಳ್ಳುವಿಕೆ ಹೆಚ್ಚಿಸಲು ಸ್ತ್ರೀ ಚೇತನ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಪ್ರಸಕ್ತ ವರ್ಷದಿಂದ ನರೇಗಾ ಕೂಲಿ ದರ 349 ರಿಂದ 370 ರೂ.ಗೆ ಹೆಚ್ಚಳ ವಾಗಿದ್ದು, ಮಹಿಳಾ ಫಲಾನುಭವಿಗಳು ಇದರ ಸದುಪಯೋಗ ಪಡೆದುಕೊಳ್ಳ ಬೇಕು. ಯೋಜನೆಯಡಿ ಹಲವು ವೈಯಕ್ತಿಕ ಕಾಮಗಾರಿಗಳ ಅನುಷ್ಠಾನಕ್ಕೆ ಅವಕಾಶ ವಿದ್ದು, ತಮ್ಮ ವ್ಯಾಪ್ತಿಯ ಗ್ರಾಪಂ ಸಂಪರ್ಕಿಸಿ ಯೋಜನೆ ಸೌಲಭ್ಯ ಪಡೆದುಕೊಳ್ಳಬೇ ಕೆಂದು ತಿಳಿಸಿದರು. ತಾಲೂಕಿನಲ್ಲಿ ಈಗಾ ಗಲೇ ಮಾದರಿಯಾಗಿ 17 ಕೂಸಿನ ಮನೆ ಗಳು ಪ್ರಾರಂಭವಾಗಿದ್ದು, 6 ತಿಂಗಳ ಮಗುವಿ ನಿಂದ 3 ವರ್ಷದೊಳಗಿನ ಮಕ್ಕಳ ಲಾಲನೆ ಪಾಲನೆಗೆ ಅವಕಾಶವಿದೆ. ಹಾಗಾಗಿ ದುಡಿಯುವ ಪೋಷಕರು ಇದರ ಸೌಲಭ್ಯ ಪಡೆದುಕೊಳ್ಳುವಂತೆ ತಿಳಿಸಿದರು.

ಇನ್ನು, ಸಂಜೀವಿನಿ ಒಕ್ಕೂಟದ ಮಹಿಳೆಯರು ಸರ್ಕಾರದ ಸೇವೆಗಾಗಿ ಗ್ರಾಪಂನೊಂದಿಗೆ ಕಾರ್ಯ ನಿರ್ವಹಿಸು ತ್ತಿದ್ದು, ಮುಂದಿನ ದಿನಗಳಲ್ಲಿ ಇದೇ ರೀತಿ ಸಹಕಾರ ನೀಡುವಂತೆ ಹೇಳಿದರು. ಅಲ್ಲದೇ ಕುಡಿಯುವ ನೀರು ಹಾಗೂ ಇತರೆ ಯಾವುದೇ ಸಮಸ್ಯೆಗಳಿಗಾಗಿ ಉಚಿತ ಸಹಾಯವಾಣಿ 8277506000 ಅನ್ನು ಸಂಪರ್ಕಿಸಬಹುದಾಗಿದೆ ಎಂದರು.

ಈ ವೇಳೆ ಸಂಜೀವಿನಿ ಒಕ್ಕೂಟದ ತಾಲೂಕು ಅಧ್ಯಕ್ಷೆ ನಳಿನ, ಜಿಪಂ ಕಾರ್ಯ ಕ್ರಮ ವ್ಯವಸ್ಥಾಪಕಿ ಆಶಾರಾಣಿ, ನರೇಗಾ ತಾಂತ್ರಿಕ ಸಂಯೋಜಕ ಅರವಿಂದ. ಎಂ, ತಾಪಂ ಕಾರ್ಯಕ್ರಮ ವ್ಯವಸ್ಥಾಪಕಿ ಮಂಜುಳಾ, ನರೇಗಾ ಐಇಸಿ ಸಂಯೋ ಜಕಿ ಪುಷ್ಪವತಿ, ಕ್ಲಸ್ಟರ್ ಸೂಪರ್ ವೈಸರ್ ಫರ್ಹದ್ ಭಾನು, ಹೆಚ್.ಎನ್.ಪ್ರವೀಣ್ ಸೇರಿದಂತೆ ಒಕ್ಕೂಟದ ಸಿಬ್ಬಂದಿ ಇದ್ದರು.

ಸಹಾಯಧನದಲ್ಲಿ ಬಿತ್ತನೆ ಬೀಜ ವಿತರಣೆ

ನಂಜನಗೂಡು, ಏ.4– ಪೂರ್ವ ಮುಂಗಾರು ಹಂಗಾಮಿಗೆ ಅವಶ್ಯಕತೆ ಇರುವ ಹೆಸರು, ಉದ್ದು, ಅಲಸಂದೆ, ಜೋಳ, ಮೆಕ್ಕೆಜೋಳ ಹಾಗೂ ಸೂರ್ಯಕಾಂತಿ ಬಿತ್ತನೆ ಬೀಜಗಳನ್ನು ರೈತ ಸಂಪರ್ಕ ಕೇಂದ್ರಗಳಲ್ಲಿ ದಾಸ್ತಾನು ಮಾಡಲಾಗಿದ್ದು, ರೈತರಿಗೆ ಸಹಾಯಧನದಲ್ಲಿ ವಿತರಿಸಲಾಗುವುದು ಎಂದು ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಎಸ್.ಕೆ.ರವಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾಮಾನ್ಯ ವರ್ಗದ ರೈತರಿಗೆ ಶೇ.50 ರಷ್ಟು, ಪ.ಜಾತಿ ಮತ್ತು ಪಂಗಡ ರೈತರಿಗೆ ಶೇ.75 ರಷ್ಟು ಸಹಾಯಧನದಲ್ಲಿ ಬಿತ್ತನೆ ಬೀಜ ವಿತರಣೆ ಮಾಡಲಾಗುವುದು. ರೈತರು ಆಧಾರ್ ಹಾಗೂ ಪಹಣಿಯೊಂದಿಗೆ ರೈತ ಸಂಪರ್ಕ ಕೇಂದ್ರಗಳಿಗೆ ಭೇಟಿ ನೀಡಿ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ಪಡೆಯಬಹುದಾಗಿದೆ ಎಂದರು. ರೈತರು ಬಿತ್ತನೆಗೆ ಮುಂಚೆ ಬೀಜೋಪಚಾರ ಕೈಗೊಂಡಲ್ಲಿ ಅನೇಕ ಕೀಟ ಹಾಗೂ ರೋಗದಿಂದ ಬೆಳೆ ರಕ್ಷಿಸಿಕೊಳ್ಳಬಹುದು. ಜೊತೆಗೆ ಹೆಚ್ಚಿನ ಇಳುವರಿ ಪಡೆಯ ಬಹುದಾಗಿದೆ, ಬೀಜೋಪಚಾರ ಕ್ರಮಗಳಿಗೆ ಹತ್ತಿರದ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿಗಳನ್ನು ಹಾಗೂ ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ ಭೇಟಿ ನೀಡಿ ತಾಂತ್ರಿಕ ಮಾಹಿತಿ ಪಡೆದುಕೊಳ್ಳಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೋಟೆಯಲ್ಲಿ ಲಕ್ಷ್ಮೀದೇವಿ ದೇವಾಲಯ ಪುನರ್ ಪ್ರತಿಷ್ಠಾಪನೆ

ಹೆಚ್.ಡಿ.ಕೋಟೆ, ಏ.4– ಪಟ್ಟಣದ ಶ್ರೀಲಕ್ಷ್ಮೀ ವರದರಾಜಸ್ವಾಮಿ ದೇವಸ್ಥಾನ ಹಲವು ಇತಿಹಾಸ ಹೇಳುವ ಪುರಾತನ ಪ್ರಸಿದ್ಧ ದೇಗುಲ ಎಂದು ಶಾಸಕ ಅನಿಲ್ ತಿಳಿಸಿದರು.

ಪಟ್ಟಣದ ಲಕ್ಷ್ಮೀ ವರದರಾಜಸ್ವಾಮಿ ದೇವಸ್ಥಾನದ ಆವರಣದಲ್ಲಿರುವ ಲಕ್ಷ್ಮೀದೇವಿ ಅಮ್ಮನವರ ದೇವಸ್ಥಾನ ಪುನರ್ ಪ್ರತಿಷ್ಠಾಪನೆ ಧಾರ್ಮಿಕ ಕಾರ್ಯ ಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸ್ಥಳೀಯರು ಕಾಲಕಾಲಕ್ಕೆ ನಿರ್ವಹಣೆಯೊಂದಿಗೆ ಜೀರ್ಣೋ ದ್ಧಾರ ಮಾಡಿದ್ದು, ಇದೀಗ ಭಕ್ತರೇ ಕೋಟ್ಯಾಂತರ ರೂ. ವೆಚ್ಚ ಮಾಡಿ ದೇಗುಲಕ್ಕೆ ರಾಜಗೋಪುರ ನಿರ್ಮಾಣ ಮಾಡಿದ್ದಾರೆ. ಸರ್ಕಾರದಿಂದ ಅಲ್ಪ ಪ್ರಮಾಣದಲ್ಲಿ ನೆರವು ದೊರೆತಿದೆ ಎಂದರು.

ಇತಿಹಾಸ ಹೇಳುವ ಈ ದೇಗುಲ ಸ್ಮಾರಕವಿ ದ್ದಂತೆ. ಇಂತಹ ದೇಗುಲಗಳನ್ನು ಮುಂದಿನ ಪೀಳಿಗೆಗೆ ಉಳಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಅಧಿಕಾರಿ ಗಳ ಸಮ್ಮುಖದಲ್ಲಿ ಸಭೆ ಕರೆದು ರಥ ನಿಲ್ಲಿಸಿಕೊಳ್ಳಲು ಸ್ಥಳಾವಕಾಶ ಕಲ್ಪಿಸಲು ಸೂಕ್ತ ಕ್ರಮ ಕೈಗೊಳ್ಳುತ್ತೇನೆ ಎಂದರು. ದೇವಸ್ಥಾನದ ಧರ್ಮದರ್ಶಿ ತಿರುಮಲಾಚಾರ್ ಮಾತನಾಡಿ, ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನದ ಜಾಗದಲ್ಲಿದ್ದ ರಥದ ಶೆಡ್ ಅನ್ನು ತಹಶೀಲ್ದಾರ್ ಶ್ರೀನಿವಾಸ್ ಮತ್ತು ಪುರಸಭೆ ಮುಖ್ಯಾಧಿಕಾರಿ ಸುರೇಶ್ ಏಕಾಏಕಿ ತೆರವುಗೊಳಿಸಿದ್ದಾರೆ ಎಂದು ಆರೋಪಿಸಿದರು.


ಕಾರ್ಯಕ್ರಮವನ್ನು ಶಾಸಕ ಅನಿಲ್ ಚಿಕ್ಕಮಾದು ಉದ್ಘಾಟಿಸಿದರು.

ತಹಸೀಲ್ದಾರ್ ಶ್ರೀನಿವಾಸ ಮಾತನಾಡಿ, ದೇವ ಸ್ಥಾನದ ಮುಂಭಾಗದ ಸ್ಥಳ ಸರ್ಕಾರಿ ಸ್ವತ್ತಾಗಿದ್ದು, ಇಲ್ಲಿ ರಥ ನಿಲ್ಲಿಸಿರುವ ಸ್ಥಳದಿಂದ ಸಾರ್ವಜನಿಕರ ಸಂಚಾರಕ್ಕೆ ಅಡಚಣೆ ಇದೆ ಎಂದು ಕೆಲವರು ಲೋಕಾಯುಕ್ತ ಇಲಾಖೆಗೆ ದೂರು ನೀಡಿದ್ದರು. ಈ ಹಿನ್ನೆಲೆಯಲ್ಲಿ ರಥ ನಿಲ್ಲಿಸಲು ಬದಲಿ ಸ್ಥಳಕ್ಕೆ ವ್ಯವಸ್ಥೆ ಕಲ್ಪಿಸಿ ಅಲ್ಲಿಂದ ಬೇರೆಡೆಗೆ ಸ್ಥಳಾಂತರಿಸಲು ಪುರಸಭೆಗೆ ತಿಳಿಸಲಾಗಿದೆ. ಸದ್ಯದಲ್ಲೇ ಕ್ರಮ ವಹಿಸಲಾಗುವುದು ಎಂದರು.

ಮುಖ್ಯಮಂತ್ರಿಗಳ ಚಿನ್ನದ ಪದಕ ಪಡೆದ ಪೊಲೀಸ್ ಗುಪ್ತಚರ ಇಲಾಖೆಯ ರಮೇಶ್ ರಾವ್, ಪಟ್ಟಣದ ಪೊಲೀಸ್ ಪೇದೆ ಸೈಯ್ಯದ್ ಕಬೀರುದ್ದಿನ್ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ತಾಲೂಕು ನಾಯಕ ಸಂಘದ ಅಧ್ಯಕ್ಷ ಎಂ.ಸಿ.ದೊಡ್ಡ ನಾಯಕ, ಎಸ್‌ಕೆಡಿಆರ್‌ಡಿಪಿ ಜಿಲ್ಲಾ ನಿರ್ದೇಶಕ ವಿಜಯ ಕುಮಾರ್ ನಾಗನಾಳ, ತಾಲೂಕು ಯೋಜನಾಧಿಕಾರಿ ಭಾಸ್ಕರ್, ಮೈಮುಲ್ ನಿರ್ದೇಶಕ ಕೆ.ಈರೇಗೌಡ, ಆದಿ ಕರ್ನಾಟಕ ಮಹಾಸಭಾ ಅಧ್ಯಕ್ಷ ಹೆಚ್.ಸಿ.ನರಸಿಂಹಮೂರ್ತಿ, ಕಾಂಗ್ರೆಸ್ ಮುಖಂಡ ಹೆಚ್.ಸಿ.ಮಂಜುನಾಥ್, ಪರಶಿವಮೂರ್ತಿ, ದೇವಸ್ಥಾನ ಸಮಿತಿಯ ಶ್ರೀಕಾಂತ್, ಸಿ.ಎನ್.ನಾಗಣ್ಣ, ಕನ್ನಡ ಪ್ರಮೋದ, ಜಯಂತ್, ಪೂರ್ಣೇಶ್, ಸಂತೋಷ್, ರಾಜು, ಕೆಂಡಗಣ್ಣ, ವೀರಪ್ಪ, ಅರ್ಚಕರಾದ ವಿನಯ್ ವಾದ್ಯಾರ್, ಶ್ರೀಧರ್, ಶ್ರೀನಿಧಿ, ಸುಧಾಕರ್, ವೆಂಕಟೇಶ್ ಪ್ರಸಾದ್ ಇದ್ದರು.

ಐಪಿಎಲ್ ಹಂಗಾಮ

ಜಿದ್ದಾಜಿದ್ದಿನ ಪಂದ್ಯದಲ್ಲಿ ಮುಂಬೈ ಮಣಿಸಿದ ಲಕ್ನೋ



ಲಕ್ನೊ, ಏ.4– ಜಿದ್ದಾಜಿದ್ದಿಯಿಂದ ಕೂಡಿದ್ದ ಪಂದ್ಯದಲ್ಲಿ ಮಿಚೆಲ್ ಮಾರ್ಷ್ ಹಾಗೂ ಏಡೆನ್ ಮಾರ್ಕ್ರಮ್ ಅವರ ಅರ್ಧಶತಕ ನೆರವಿನಿಂದ ಲಕ್ನೋ ಸೂಪರ್ ಜೈಂಟ್ಸ್, ಮುಂಬೈ ಇಂಡಿಯನ್ಸ್ ವಿರುದ್ಧ 12 ರನ್‌ಗಳ ಜಯ ಗಳಿಸಿದೆ. ಇಲ್ಲಿನ ಅಟಲ್ ಬಿಹಾರಿ ವಾಜಪೇಯಿ ಏಕನಾ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಲಕ್ನೋ ನೀಡಿದ 204 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಮುಂಬೈ ಇಂಡಿಯನ್ಸ್ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 191 ರನ್ ಗಳಿಸಿ ಸೋಲು ಅನುಭವಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ವಿಲ್ ಜಾಕ್ಸ್ 5, ರಯಾನ್ ರಿಕಲ್ಟನ್ 10 ರನ್ ಗಳಿಸಿ ಬಹುಬೇಗ ವಿಕೆಟ್ ಒಪ್ಪಿಸಿದರು. ಈ ವೇಳೆ 3ನೇ ವಿಕೆಟ್‌ಗೆ ಜೊತೆಯಾದ ನಮನ್ ಧೀರ್ ಹಾಗೂ ಸೂರ್ಯಕುಮಾರ್ ಯಾದವ್ 69ರನ್ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಈ ವೇಳೆ 24 ಎಸೆತಗಳಲ್ಲಿ 3 ಸಿಕ್ಸರ್, 4 ಬೌಂಡರಿ ಒಳಗೊಂಡ 48 ರನ್ ಗಳಿಸಿದ್ದ ನಮನ್ ಧೀರ್ ನಿರ್ಗಮಿಸಿದರು. ಮತ್ತೊಂದೆಡೆ ಅರ್ಧಶತಕ ಸಿಡಿಸಿ ತಂಡವನ್ನು ಗೆಲುವಿನತ್ತ ಕೊಂಡೊಯ್ಯುತ್ತಿದ್ದ ಸೂರ್ಯಕುಮಾರ್ ಯಾದವ್ 67 ರನ್ ಗಳಿಸಿ ಔಟಾದರು. ಉಳಿದಂತೆ ತಿಲಕ್ ವರ್ಮಾ 25, ನಾಯಕ ಹಾರ್ದಿಕ್ ಪಾಂಡ್ಯ 28 ರನ್ ಗಳಿಸಿದರಾದರೂ ತಂಡಕ್ಕೆ ಜಯ ತಂದುಕೊಡಲಾಗಲಿಲ್ಲ. ಲಕ್ನೋ ಪರ ಶಾರ್ದೂಲ್ ಠಾಕೂರ್, ಆಕಾಶ್ ದೀಪ್, ಆವೇಶ್ ಖಾನ್ ಹಾಗೂ ದಿಗ್ವೇಶ್ ಸಿಂಗ್ ರಾಠಿ ತಲಾ ಒಂದೊಂದು ವಿಕೆಟ್ ಪಡೆದರು.

ಇದಕ್ಕೂ ಮುನ್ನ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಲಕ್ನೋ ಸೂಪರ್ ಜೈಂಟ್ಸ್ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 203 ರನ್ ಕಲೆ ಹಾಕಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಮಿಚೆಲ್ ಮಾರ್ಷ್ ಹಾಗೂ ಏಡೆನ್ ಮಾರ್ಕ್ರಮ್ ಮೊದಲ ವಿಕೆಟ್‌ಗೆ 76 ರನ್ ಜೊತೆಯಾಟವಾಡುವ ಮೂಲಕ ಉತ್ತಮ ಆರಂಭ ಒದಗಿಸಿದರು. ಮಿಂಚಿನ ಬ್ಯಾಟಿಂಗ್ ನಡೆಸಿದ ಮಾರ್ಷ್ 31 ಎಸೆತಗಳಲ್ಲಿ 2 ಸಿಕ್ಸ್, 9 ಬೌಂಡರಿ ಒಳಗೊಂಡ 60 ರನ್ ಗಳಿಸಿ ನಿರ್ಗಮಿಸಿದರು. ನಂತರ ಬಂದ ನಿಕೋಲಸ್ ಪೂರನ್ ಬಿರುಸಿನ ಬ್ಯಾಟಿಂಗ್‌ಗೆ ಮುಂದಾಗಿ 12 ರನ್ ಗಳಿಸಿ ಔಟಾದರು. ಇದರ ಬೆನ್ನಲ್ಲೇ ರಿಷಬ್ ಪಂತ್ 2 ರನ್‌ಗಳಿಸಿ ಔಟಾಗುವ ಮೂಲಕ ಅಭಿಮಾನಿಗಳಿಗೆ ಮತ್ತೊಮ್ಮೆ ನಿರಾಸೆ ಮಾಡಿದರು. ಬಳಿಕ ಕ್ರೀಸ್‌ಗೆ ಆಗಮಿಸಿದ ಆಯುಷ್ ಬದೋನಿ 30, ಡೇವಿಡ್ ಮಿಲ್ಲರ್ 27 ರನ್ ಗಳಿಸಿ ವಿಕೆಟ್ ಒಪ್ಪಿಸಿದರೆ, ಏಡೆನ್ ಮಾರ್ಕ್ರಾಮ್ 38 ಎಸೆತಗಳಲ್ಲಿ 4 ಸಿಕ್ಸ್, 2 ಬೌಂಡರಿ ಒಳಗೊಂಡ 53 ರನ್ ಗಳಿಸಿ ಔಟಾಗುವ ತಂಡದ ಬೃಹತ್ ಮೊತ್ತಕ್ಕೆ ಕಾರಣ ರಾದರು. ಮುಂಬೈ ಪರ ಹಾರ್ದಿಕ್ ಪಾಂಡ್ಯ 5, ವಿಘ್ನೇಶ್ ಪುತ್ತೂರು, ಅಶ್ವನಿ ಕುಮಾರ್ ಹಾಗೂ ಟ್ರೆಂಟ್ ಬೌಲ್ಟ್ ತಲಾ ಒಂದೊಂದು ವಿಕೆಟ್ ಕಬಳಿಸಿದರು. ಲಕ್ನೋ ಪರ ದಿಗ್ವೇಶ್ ಸಿಂಗ್ ರಾಠಿ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ತಂಡದ ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಪಂಜಾಬ್	2	2	0	0	4
ಡೆಲ್ಲಿ	2	2	0	0	4
ಬೆಂಗಳೂರು	3	2	1	0	4
ಗುಜರಾತ್	3	2	1	0	4
ಕೋಲ್ಕತ್ತಾ	4	2	2	0	4
ಲಕ್ನೋ	4	2	2	0	4
ಮುಂಬೈ	4	1	3	0	2
ಚೆನ್ನೈ	3	1	2	0	2
ರಾಜಸ್ಥಾನ್	3	1	2	0	2
ಹೈದರಾಬಾದ್	4	1	3	0	2

ಇಂದಿನ ಪಂದ್ಯಗಳು

ಚೆನ್ನೈ ಸೂಪರ್ ಕಿಂಗ್ಸ್
V/S
ಡೆಲ್ಲಿ ಕ್ಯಾಪಿಟಲ್ಸ್
ಸಮಯ: ಮಧ್ಯಾಹ್ನ 3.30
ಸ್ಥಳ : ಎಂ.ಎ. ಚಿದಂಬರಂ ಕ್ರೀಡಾಂಗಣ, ಚೆನ್ನೈ

ಪಂಜಾಬ್ ಕಿಂಗ್ಸ್
V/S
ರಾಜಸ್ಥಾನ್ ರಾಯಲ್ಸ್
ಸಮಯ: ಸಂಜೆ 7.30
ಸ್ಥಳ : ಯಾದವೀಂದ್ರ ಸಿಂಗ್ ಕ್ರೀಡಾಂಗಣ, ಚಂಡೀಗಢ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ವೀರ ಧೀರ ಶೂರನ್–2 (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಮನದ ಕಡಲು (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸಿಕಂದರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ನಿಂಬಿಯಾ ಬನಾದಾ ಮ್ಯಾಗ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಅಪ್ಪು (ಕ)	4 ಪ್ರದರ್ಶನಗಳು
ರಾಜಕಮಲ್	
ರಾಬಿನ್ ಹುಡ್ (ತೆ)	4 ಪ್ರದರ್ಶನಗಳು
ಸಂಗಂ	
ಸಿಕಂದರ್ (ಹಿಂ)	4 ಪ್ರದರ್ಶನಗಳು
ಲಿಡೋ	
ನಿಮ್ದೇ ಕಥೆ (ಕ–2), ಬೆಂಕಿಯ ಬಲೆ (ಕ–2)	4 ಪ್ರದರ್ಶನಗಳು
ತಿಬ್ಬಾದೇವಿ	
ಭಗೀರಥ (ಕ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1 ಡಿಸ್ನಿ ಸ್ನೋ ವೈಟ್ (ಇಂ): ಬೆ.9.55ಕ್ಕೆ, ಮ.12.20ಕ್ಕೆ, ಮ.2.40ಕ್ಕೆ, ಸಂ.5ಕ್ಕೆ, ದಿ ಡಿಪ್ಲೊಮೆಟ್ (ಹಿಂ): ರಾ.7.20ಕ್ಕೆ, ಯಾರಿಯನ್ (ಹಿಂ): ರಾ.10.10ಕ್ಕೆ.

ಸ್ಕ್ರೀನ್ 2 ಬರ್ಗೆಟ್ ಬಸ್ಯಾ (ಕ): ಬೆ10.20ಕ್ಕೆ, ಅಸ್ತ್ರಂ (ತ): ಮ.1.10ಕ್ಕೆ, ಕೋರ್ಟ್ ಸ್ಟೇಟ್ V/s ಎ ನೋಬಡಿ (ತೆ): ಮ.3.55ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ರಾ.7ಕ್ಕೆ, ರಾ.10.20ಕ್ಕೆ.

ಸ್ಕ್ರೀನ್ 3 ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲೂಕು ಗ್ರಾಮ ಯಾಳ್ಪಿ (ಕ): ಬೆ.10.35ಕ್ಕೆ, ಡ್ರ್ಯಾಗನ್ (ತ): ಮ.1.05ಕ್ಕೆ, ಪಿಂಟು ಕಿ ಪಪ್ಪಿ (ಹಿಂ): ಸಂ.4.15ಕ್ಕೆ, ಛಾವಾ (ಹಿಂ): ರಾ.7ಕ್ಕೆ, ಘಾತಕ್ (ಹಿಂ): ಬೆ.10.15ಕ್ಕೆ.

ಸ್ಕ್ರೀನ್ 4 ಡ್ರ್ಯಾಗನ್ (ತ): ಬೆ10.20ಕ್ಕೆ, ಅಪ್ಪು (ಕ): ಮ.1.30ಕ್ಕೆ, ಷಣ್ಮುಖ (ತೆ): ಸಂ.4.15ಕ್ಕೆ, ರಾ.9.45ಕ್ಕೆ, ಡಿಸ್ನಿ ಸ್ನೋ ವೈಟ್ (ಇಂ): ರಾ.7.05ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1 ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.

ಸ್ಕ್ರೀನ್ 2 ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.

ಸ್ಕ್ರೀನ್ 3 ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.

ಸ್ಕ್ರೀನ್ 4 ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1 ಫಾರೆಸ್ಟ್ (ಕ): ಮ.1.45ಕ್ಕೆ, ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲೂಕು ಗ್ರಾಮ ಯಾಳ್ಪಿ (ಕ): ಸಂ.6.35ಕ್ಕೆ ಅಸ್ತ್ರಂ (ತ): ರಾ.7ಕ್ಕೆ, ಷಣ್ಮುಖ (ತೆ): ರಾ.9.15ಕ್ಕೆ.

ಸ್ಕ್ರೀನ್ 2 ಪಿಂಟು ಕಿ ಪಪ್ಪಿ (ಹಿಂ): ಮ.1.15ಕ್ಕೆ, ಮ.3.55ಕ್ಕೆ, ಛಾವಾ (ಹಿಂ): ಸಂ.6.30ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ರಾ.9.30ಕ್ಕೆ.

ಸ್ಕ್ರೀನ್ 3 ಡಿಸ್ನಿ ಸ್ನೋ ವೈಟ್ (ಇಂ): ಮ.1.30ಕ್ಕೆ, ಸಂ.4.05ಕ್ಕೆ, ರಾ.9.20ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ಸಂ.6.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಸನ್ಮಾನ



ಮೈಸೂರಿಗೆ ಭೇಟಿ ನೀಡಿದ್ದ ವಿಧಾನ ಪರಿಷತ್ ಸದಸ್ಯ ರಾಜೇಂದ್ರ ಅವರನ್ನು ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡರು ತಮ್ಮ ಕಚೇರಿಯಲ್ಲಿ ಸನ್ಮಾನಿಸಿದರು. ಈ ವೇಳೆ ಮಾಜಿ ಕಾರ್ಪೋರೇಟರ್ ಲೋಕೇಶ್ ಪಿಯಾ, ಚಾಮರಾಜ ಕ್ಷೇತ್ರದ ಬ್ಲಾಕ್ ಅಧ್ಯಕ್ಷ ರವಿ ಮಂಚೇಗೌಡನ ಕೊಪ್ಪಲು, ಹಿರಿಯ ಕಾಂಗ್ರೆಸ್ ಮುಖಂಡ ಬಸವರಾಜು ಇತರರು ಉಪಸ್ಥಿತರಿದ್ದರು.

ಭೋವಿ ಅಭಿವೃದ್ಧಿ ನಿಗಮದಲ್ಲಿನ ಬಹುಕೋಟಿ ಹಗರಣ

ರಾಜ್ಯದ ಹತ್ತಕ್ಕೂ ಹೆಚ್ಚು ಸ್ಥಳಗಳಲ್ಲಿ ಇಡಿ ದಾಳಿ; ಮಹತ್ವದ ದಾಖಲೆ ವಶಕ್ಕೆ

ಬೆಂಗಳೂರು, ಏ.4(ಕುಂಶಿ)– ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಕೋಟ್ಯಂತರ ರೂ. ಹಗರಣ ಸಂಬಂಧ ಜಾರಿ ನಿರ್ದೇಶನಾಲಯದ (ಇ.ಡಿ.) ಅಧಿಕಾರಿಗಳು ಇಂದು ಬೆಂಗಳೂರು, ಶಿವಮೊಗ್ಗ ಸೇರಿದಂತೆ ರಾಜ್ಯದ ಹತ್ತಕ್ಕೂ ಹೆಚ್ಚು ಸ್ಥಳಗಳಲ್ಲಿ ದಾಳಿ ನಡೆಸಿದ್ದಾರೆ.

ನಿಗಮದ ಮಾಜಿ ಪ್ರಧಾನ ವ್ಯವಸ್ಥಾಪಕ, ನಿರ್ದೇಶಕರ ಕಚೇರಿ, ನಿವಾಸ ಸೇರಿ ಹಲವೆಡೆ ದಾಳಿ ನಡೆಸಿದ ಅಧಿಕಾರಿಗಳು ಕೆಲವು ಮಹತ್ವದ ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ.

ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದಿದೆ ಎನ್ನಲಾದ ಬಹುಕೋಟಿ ರೂ. ಹಗರಣ ಸಂಬಂಧ ಎಸ್‌ಐಟಿ ಮೂಲಕ ತನಿಖೆ ನಡೆಸಿ ವರದಿ ನೀಡುವಂತೆ ಹೈಕೋರ್ಟ್ ಆದೇಶಿಸಿತ್ತು. ಇದಕ್ಕೂ ಮುನ್ನ ರಾಜ್ಯ ಸರ್ಕಾರ ಸಿಐಡಿ ತನಿಖೆ ನಡೆಸಿ ನಿಗಮದಲ್ಲಿ ಕೆಲಸ ಮಾಡಿದ್ದ ಕೆಲವು ಅಧಿಕಾರಿಗಳ ನಿವಾಸ ಮತ್ತು ಕಚೇರಿಗಳ ಮೇಲೆ ದಾಳಿ ನಡೆಸಿತ್ತು.

ಭೋವಿ ನಿಗಮದ ಪ್ರಧಾನ ವ್ಯವಸ್ಥಾಪಕರಾಗಿದ್ದ ಡಾ.ಬಿ.ಕೆ.ನಾಗರಾಜಪ್ಪ ಮತ್ತು ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಲೀಲಾವತಿ ಅವರಿಗೆ ಸೇರಿದ ನಿವಾಸ ಮತ್ತು ಕಚೇರಿಗಳ ಮೇಲೆ ದಾಳಿ ನಡೆಸಿ ದಾಖಲೆಗಳು, ಬ್ಯಾಂಕ್ ಖಾತೆಗಳ ವಿವರ, ಚರ–ಸ್ಥಿರ ಆಸ್ತಿಗಳು, ಸಂಬಂಧಿಕರ ಹೆಸರಿನಲ್ಲಿ ಸಂಪಾದನೆ ಮಾಡಿದ್ದ ಆಸ್ತಿ ಮತ್ತಿತರ ದಾಖಲೆಗಳನ್ನು ಇ.ಡಿ. ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ. ನಿಗಮದಲ್ಲಿ ನಡೆದ ಅಕ್ರಮಗಳನ್ನು ಮರೆಮಾಚಲು ಲೆಕ್ಕಪತ್ರಗಳು, ನಗದು, ನೋಂದಣಿ ಪುಸ್ತಕಗಳು, ಯೋಜನಾ ಕಡತ, ಬ್ಯಾಂಕ್ ಚೆಕ್‌ಗಳು ಸೇರಿದಂತೆ 30ಕ್ಕೂ ಹೆಚ್ಚು ಕಡತಗಳನ್ನು ಕಳವು ಮಾಡಿರುವ ಆರೋಪವಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

5.04.2025 ಶನಿವಾರ, ಮಳೆ ನಕ್ಷತ್ರ: ರೇವತಿ 31.03.2025 ರಿಂದ 12.04.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ,
ತಿಥಿ: ಅಷ್ಟಮಿ, ನಕ್ಷತ್ರ: ಆರಿದ್ರಾ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಕುತ್ತಿಗೆ ಹಾಗೂ ಬೆನ್ನು ನೋವಿಗೆ ಆಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಅಧಿಕ ರಕ್ತದೊತ್ತಡ ಚಿಕಿತ್ಸಾ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ,. ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ.

■ **ಅಭ್ಯುದಯ ಮಹಿಳಾ ಸಮಾಜ :** ವಾರ್ಷಿಕೋತ್ಸವ, ಉದ್ಘಾಟನೆ : ಶಾಸಕ ಟಿ.ಎಸ್. ಶ್ರೀವತ್ಸ, ಮುಖ್ಯ ಅತಿಥಿಗಳು : ಅದಮ್ಯ ಚೇತನ ಫೌಂಡೇಷನ್ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಚಿಂತಕ ಪ್ರೊ.ಕೃಷ್ಣೇಗೌಡ, ಪತ್ರಕರ್ತೆ ಶ್ರೀಮತಿ ರಶ್ಮಿ ಕೋಟಿ, ಮಾಜಿ ಮೇಯರ್ ಬಿ.ಎಲ್. ಭೈರಪ್ಪ, ಉಪಸ್ಥಿತರು: ಅಭ್ಯುದಯ ಮಹಿಳಾ ಸಮಾಜ ಗೌರವಾಧ್ಯಕ್ಷೆ ಶ್ರೀಮತಿ ಲೋಕೇಶ್ವರಿ ಬೆಳ್ಳಿಯ್ಯ, ಅಧ್ಯಕ್ಷತೆ : ಅಭ್ಯುದಯ ಮಹಿಳಾ ಸಮಾಜದ ಅಧ್ಯಕ್ಷೆ ಡಾ. ಸುಶೀಲ ನಾಗರಾಜು, ಸ್ಥಳ: ಮೈಸೂರು ಬಿಲ್ಡರ್ಸ್ ಚಾರಿಟಬಲ್ ಟ್ರಸ್ಟ್, ವಿಶ್ವೇಶ್ವರನಗರ, ಬೆಳಗ್ಗೆ 9.30ಕ್ಕೆ.

■ **ಶ್ರೀ ಶಂಕರ ಜಯಂತಿ ಸಭಾ :** ಶ್ರೀರಾಮನವಮಿ ಕಾರ್ಯಕ್ರಮಗಳು, ಬೆಳಗ್ಗೆ 9.30 ರಿಂದ ಅಭಿಷೇಕ, ಅರ್ಚನೆ, ಪೂಜಾ ಕಾರ್ಯಕ್ರಮ, ಮಹಾಮಂಗಳಾರತಿ, ಸಂಜೆ 5 ರಿಂದ ವಿದ್ವಾನ್ ಹರೀಶ್ ಪಾಂಡವ್ ಮತ್ತು ಸಂಗಡಿಗರಿಂದ ಸ್ಯಾಕ್ಸೋಫೋನ್ ವಾದನ, ಸ್ಥಳ: ಸಮುದಾಯ ಭವನ, ತೆಂಗಿನ ತೋಪು, ಸರಸ್ವತಿಪುರಂ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ಮೈಸೂರು ವಿವಿ, ಯುವರಾಜ ಕಾಲೇಜು :** ಉಪನ್ಯಾಸ ಸರಣಿ, ಉದ್ಘಾಟನೆ : ಕಾಲೇಜು ಪ್ರಿನ್ಸಿಪಾಲ್ ಪ್ರೊ. ಎಸ್. ಮಹದೇವಮೂರ್ತಿ, ಅಧ್ಯಕ್ಷತೆ : ಜಿ. ಕೃಷ್ಣಮೂರ್ತಿ, ಉಪಸ್ಥಿತರು : ಪ್ರೊ. ಕೆ. ಅಜಯ್ ಕುಮಾರ್, ಪ್ರೊ. ಸಿ. ನಾಗೇಶ್‌ಬಾಬು, ಪ್ರೊ. ಬಿ.ಎಂ. ವೆಂಕಟೇಶ್, ಡಾ. ಎನ್. ವಸಂತ್‌ಕುಮಾರ್, ಸ್ಥಳ: ಪ್ಲಾಟಿನಂ ಜ್ಯೂಬಿಲಿ ಸಭಾಂಗಣ, ಬೆಳಗ್ಗೆ 10ಕ್ಕೆ

■ **ವಿದ್ಯಾವರ್ಧಕ ಕಾನೂನು ಕಾಲೇಜು :** ಎನ್. ನಂಜೇಗೌಡ ಸ್ಮಾರಕ ಉಪನ್ಯಾಸ ಸರಣಿ, ಉದ್ಘಾಟನೆ : ಇಂಡಿಯನ್ ಇಂಟರ್‌ನ್ಯಾಷನಲ್ ಯೂನಿವರ್ಸಿಟಿ ಆಫ್ ಲೀಗಲ್ ಕುಲಪತಿ ಪ್ರೊ ಆರ್. ವೆಂಕಟರಾವ್, ಮುಖ್ಯ ಅತಿಥಿಗಳು : ಬೆಂಗಳೂರು ವಿವಿ ವಿಶ್ರಾಂತ ಕುಲಪತಿ ಪ್ರೊ ಕೆ.ಆರ್. ವೇಣುಗೋಪಾಲ್, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಸ್ಥಳ: ಪಿ.ಎಂ.ಚಿಕ್ಕಬೋರಯ್ಯ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಎಐಡಿಎಸ್‌ಓ ಮೈಸೂರು ಜಿಲ್ಲಾ ಸಮಿತಿ :** ಜಿಲ್ಲಾ ಮಟ್ಟದ ವ್ಯಕ್ತಿತ್ವ ವಿಕಸನ ಶಿಬಿರ, ಸ್ಥಳ: ಎಐಡಿಎಸ್‌ಓ ಕಚೇರಿ, ಡಿ. ಸುಬ್ಬಯ್ಯ ರಸ್ತೆ, ಬೆಳಗ್ಗೆ 11ಕ್ಕೆ

■ **ಬಾಬು ಜಗಜೀವನರಾಮ್ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ :** ಡಾ. ಬಾಬು ಜಗಜೀವನರಾಮ್ 118ನೇ ಜನ್ಮ ದಿನಾಚರಣೆ ಪ್ರಯುಕ್ತ ವಿಶೇಷ ಉಪನ್ಯಾಸ ಕಾರ್ಯಕ್ರಮ, ಉದ್ಘಾಟನೆ : ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ಎಂ.ಕೆ. ಸವಿತಾ, ಉಪಸ್ಥಿತರು : ರಾಜ್ಯ ಮಾಹಿತಿ ಆಯುಕ್ತ ಡಾ. ಹರೀಶ್ ಕುಮಾರ್, ಪ್ರೊ.ಬಿ. ಗಂಗಾಧರ, ಅಧ್ಯಕ್ಷತೆ : ಕೇಂದ್ರದ ನಿರ್ದೇಶಕ ಪ್ರೊ ಆರ್. ತಿಮ್ಮರಾಯಪ್ಪ, ಸ್ಥಳ: ಡಾ. ಬಾಬು ಜಗಜೀವನರಾಮ್ ಅಧ್ಯಯನ ಕೇಂದ್ರದ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ

■ **ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ :** ಹಸಿರು ಕ್ರಾಂತಿ ಹರಿಕಾರನ 117ನೇ ಜಯಂತ್ಯೋತ್ಸವ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಉಪಸ್ಥಿತರು : ಶಾಸಕ ತನ್ವೀರ್ ಸೇಠ್, ವಿಶ್ವ ಮೈತ್ರಿ ಬುದ್ಧ ವಿಹಾರದ ಡಾ. ಕಲ್ಯಾಣ ಸಿರಿ ಭಂತೇಜಿ, ನಿವೃತ್ತ ಸೇನಾಧಿಕಾರಿ ಕರ್ನಲ್ ಕೆ.ಪಿ. ನರೇಂದ್ರನ್ನಾ, ಬಿ.ಜೆ. ವಿಜಯಕುಮಾರ್, ಮುಖ್ಯ ಭಾಷಣ : ರಾಜ್ಯಸಭಾ ಮಾಜಿ ಸದಸ್ಯ ಎಲ್. ಹನುಮಂತಯ್ಯ, ಸ್ಥಳ: ಕಾಂಗ್ರೆಸ್ ಭವನ, ಮಧ್ಯಾಹ್ನ 12.30ಕ್ಕೆ.

■ **ಮೈಸೂರು ಶರಣ ಮಂಡಲಿ :** ಡಾ. ಶ್ರೀ ಶಿವಕುಮಾರ ಸ್ವಾಮಿಗಳ 118ನೇ ಜಯಂತಿ ಕಾರ್ಯಕ್ರಮ, ಉಪಸ್ಥಿತರು : ಹಿರಿಯ ಸಹಕಾರಿ ಹೆಚ್.ವಿ. ರಾಜೀವ್, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಮೈಸೂರು ಶರಣ ಮಂಡಲಿ ಕಾರ್ಯಾಧ್ಯಕ್ಷ ಎ.ಸಿ. ಜಗದೀಶ್, ಜೈಶಂಕರ್, ಮೂಗೂರು ನಂಜುಂಡಸ್ವಾಮಿ, ಸ್ಥಳ: ಜಿಲ್ಲಾ ಪತ್ರಕರ್ತರ ಸಂಘ, ತ್ಯಾಗರಾಜ ರಸ್ತೆ, ಮಧ್ಯಾಹ್ನ 12.30ಕ್ಕೆ

■ **ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ :** 30ನೇ ವಾರ್ಷಿಕ ಘಟಿಕೋತ್ಸವ, ಅಧ್ಯಕ್ಷತೆ : ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ, ಘಟಿಕೋತ್ಸವ ಭಾಷಣ : ಟಿವಿಎಸ್ ಆಟೋಮೊಬೈಲ್ ಸೆಲ್ಯೂಷನ್ಸ್ ಚೀಫ್ ಎಕ್ಸಿಕ್ಯೂಟಿವ್ ಆಫೀಸರ್ ನಟರಾಜನ್ ಶ್ರೀನಿವಾಸನ್, ಸ್ಥಳ: ಸಂಸ್ಥೆ ಆವರಣ, ಮಧ್ಯಾಹ್ನ 3ಕ್ಕೆ.

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್ :** 16ನೇ ವರ್ಷದ ವಸಂತ ನವರಾತ್ರಿ ಮಹೋತ್ಸವ, ಬೆಳಗ್ಗೆ 8.30 ರಿಂದ ಮಹಾಭಿಷೇಕ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀ ನವಾವರಣ ಪೂಜೆ, ಶ್ರೀಚಕ್ರಾರ್ಚನೆ, ಸಂಜೆ 5.30 ರಿಂದ ಶ್ರೀ ವಿದ್ಯಾ ಷೋಡಶ ದುರ್ಗಾ ಹೋಮ, ಸ್ಥಳ: ತ್ರಯೀನ್ಯಾಸ್, ಜಯಲಕ್ಷ್ಮಿಪುರಂ.

■ **ಶ್ರೀರಾಮಮಂದಿರ :** ಶ್ರೀ ರಾಮಚಂದ್ರಸ್ವಾಮಿಗಳವರ 50ನೇ ವರ್ಧಂತ್ಯುತ್ಸವ, ಸೀತಾ ಕಲ್ಯಾಣ, ಶ್ರೀರಾಮ ಪಟ್ಟಾಭಿಷೇಕ, ಹನುಮಂತೋತ್ಸವ, ಕುಂಭಾಭಿಷೇಕ ಮಹೋತ್ಸವ, ಬೆಳಗ್ಗೆ 9ಕ್ಕೆ ಶ್ರೀ ಸತ್ಯನಾರಾಯಣ ಹೋಮ, ಸಂಜೆ 6.30ಕ್ಕೆ ಎಸ್. ಸತೀಶ್ ಮತ್ತು ವೃಂದದವರಿಂದ ಭಕ್ತಿಗೀತೆಗಳು, ಸ್ಥಳ: ಶ್ರೀರಾಮಮಂದಿರ, ಜಯನಗರ.

■ **ಕನ್ನಡ ಸಾಹಿತ್ಯ ಕಲಾಕೂಟ, ಭದ್ರಶೆಟ್ಟಿ ಬಳಗ :** ಹಿರಿಯ ವೈದ್ಯ ಡಾ. ಭ. ನಾಗರಾಜ್ ಅವರ ಟ್ವಿನ್ಸ್ ಮತ್ತು ಕೆವೋಸ್ ಡೊಂಟ್ ಡೆಸ್ಟ್ರಾಯ್ ಆಂಗ್ಲ ಕಾದಂಬರಿಗಳ ಬಿಡುಗಡೆ ಸಮಾರಂಭ, ಅಧ್ಯಕ್ಷತೆ : ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ. ಚಂದ್ರಶೇಖರ್, ಕೃತಿಗಳ ಬಿಡುಗಡೆ : ಜೆಎಸ್‌ಎಸ್ ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ ಮೊರಬದ ಮಲ್ಲಿಕಾರ್ಜುನ, ಕೃತಿ ಕುರಿತು ಮಾತನಾಡುವವರು : ಆಂಗ್ಲ ಭಾಷಾ ಉಪನ್ಯಾಸರಾದ ಶ್ರೀಮತಿ ಹೆಚ್. ನಿವೇದಿತಾ, ಇನ್‌ಫೋಸಿಸ್‌ನ ಭ.ಚೇತನ್, ಉಪಸ್ಥಿತರು: ನಿವೃತ್ತ ಪ್ರಿನ್ಸಿಪಾಲ್ ಡಾ. ಕೆ.ಎಸ್.ಶಾಂತರಾಮ್, ಲೇಖಕ ನಗರ್ಲೆ ಶಿವಕುಮಾರ್, ಕೃತಿಗಳ ಲೇಖಕ ಡಾ. ಭ ನಾಗರಾಜ್, ಸ್ಥಳ: ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 5.30ಕ್ಕೆ

■ **ಶ್ರೀರಾಮ ಸೇವಾ ಮಂಡಲಿ ಚಾರಿಟಬಲ್ ಟ್ರಸ್ಟ್:** 31ನೇ ಶ್ರೀ ರಾಮನವಮಿ ಸಂಗೀತೋತ್ಸವ, ಸಂಜೆ 5.15 ರಿಂದ ಅಂಕುಶ್ ಕಡಬ–ಶ್ರೀ ಲಲಿತ – ಸುಹಾಸ್ ಅವರಿಂದ ಕೊಳಲು ವಾದನ, ಸಂಜೆ 6.15ಕ್ಕೆ ವಿದ್ವಾನ್ ಎ. ಚಂದನ್ ಕುಮಾರ್ ಅವರಿಂದ ಕೊಳಲು ವಾದನ, ವಿದುಷಿ ಸಿಂಧು ಸುಚೇತನ್–ಪಿಟೀಲು, ವಿದ್ವಾನ್ ಹೆಚ್.ಎಲ್. ಸುಧೀಂದ್ರ–ಮೃದಂಗ, ವಿದ್ವಾನ್ ಜಿ.ಎಸ್. ರಾಮಾನುಜನ್–ಘಟಂ, ಸ್ಥಳ: ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ವಿ.ವಿ.ಮೊಹಲ್ಲಾ.

■ **ವಿಶ್ವ ಮೈತ್ರಿ ಬುದ್ಧ ವಿಹಾರ, ತಥಾಗತ ಬುದ್ಧ ವಿಹಾರ, ದಲಿತ ವಿದ್ಯಾರ್ಥಿ ಒಕ್ಕೂಟ ಮತ್ತು ಸಂಶೋಧಕರ ಸಂಘ, ಮೈಸೂರು ವಿವಿ :** ಮಾನವ ಮೈತ್ರಿ ಸಂಪದ ಸಮ್ಮೇಳನ, ಬೆಳಗ್ಗೆ 9.40 ರಿಂದ ವಿಷಯ : ಬುದ್ಧ ಮತ್ತು ಮಾನವ ಪ್ರೇಮ), ಧಮ್ಮೋಪದೇಶ ಪಂಚಶೀಲ ತಿಸರಣ ಪೂಜ್ಯ ಬಿಕ್ಕು ಆನಂದ ಥೇರೋ ಬಂತೇಜಿ, ಸಾನ್ನಿಧ್ಯ : ಸುಗತಪಾಲ ಬಂತೇಜಿ, ಬಂತೇ ಸುಮನ, ಭಂತೆ ಮಾತೆ ಗೌತಮಿ; ಗೋಷ್ಠಿ–1 (ವಿಷಯ : ಬುದ್ಧ ಮತ್ತು ಆತನ ಧಮ್ಮದ ಮೂಲಕ ಬಾಬಾ ಸಾಹೇಬರು ನೀಡಿರುವ ಜವಾಬ್ದಾರಿಗಳು): ಬೆಳಗ್ಗೆ 11 ರಿಂದ ಸಾನ್ನಿಧ್ಯ : ಪೂಜ್ಯ ಭಂತೇ ಬೋಧಿರತ್ನ, ಉದ್ಘಾಟನೆ : ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಪುರುಷೋತ್ತಮ್ ಬಿಳಿಮಲೆ, ಪುಷ್ಪಾರ್ಚನೆ : ನಿವೃತ್ತ ಪೊಲೀಸ್ ಕಮೀಷನರ್ ಮರಿಸ್ವಾಮಿ, ಮುಖ್ಯ ಅತಿಥಿಗಳು : ಚಿಂತಕ ಮೂಡ್ನಾಕೂಡು ಚಿನ್ನಸ್ವಾಮಿ, ಡಾ.ಹೆಚ್.ಟಿ. ಪೋತೆ, ಪತ್ರಕರ್ತೆ ರಶ್ಮಿ ಕೋಟಿ, ಮಜಿ ಮೇಯರ್ ಪುರುಷೋತ್ತಮ್; ಗೋಷ್ಠಿ–2 : ಮಧ್ಯಾಹ್ನ 2 ರಿಂದ (ಬಾಬಾ ಸಾಹೇಬರ ಜ್ಞಾನೋದಯದನಂತರ ಧಮ್ಮ ಮತ್ತು ನಾವು–ನೀವು), ಸಾನಿಧ್ಯ : ಸುಗತಪಾಲ ಬಂತೇಜಿ, ಅಧ್ಯಕ್ಷತೆ : ಸಂಸ್ಕೃತಿ ಚಿಂತಕ ಬಂಜಗೆರೆ ಜಯಪ್ರಕಾಶ್; ಗೋಷ್ಠಿ –3 ಸಂಜೆ 4 ರಿಂದ ಸಾನ್ನಿಧ್ಯ : ಬಂತೆ ಮಾತೆ ಗೌತಮಿ, ಅಧ್ಯಕ್ಷತೆ : ಮಾಜಿ ಸಚಿವೆ ಬಿ.ಟಿ. ಲಲಿತಾನಾಯಕ್, ಉಪಸ್ಥಿತರು : ಸಾಮಾಜಿಕ ಕಾರ್ಯಕರ್ತೆ ದು. ಸರಸ್ವತಿ; ಗೋಷ್ಠಿ–4 ಸಂಜೆ 5.30 ರಿಂದ ಸಾನ್ನಿಧ್ಯ : ಬಂತೆ ಸುಮನ, ಅಧ್ಯಕ್ಷತೆ : ಪತ್ರಕರ್ತ ಶಿವಕುಮಾರ್, ಸ್ಥಳ:ವಿಜ್ಞಾನ ಭವನ, ಮಾನಸಗಂಗೋತ್ರಿ.

■ **ರೋಟರಿ ಮೀನ್ಸ್ ಬ್ಯುಸಿನೆಸ್ ಫೆಲೋಶಿಪ್ :** ಪದಗ್ರಹಣ ಸಮಾರಂಭ, ಮುಖ್ಯ ಅತಿಥಿಗಳು : ಆಟೋಮೋಟಿವ್ ಆಕ್ಸೆಲ್ ಲಿಮಿಟೆಡ್ ಛೇರ್ಮನ್ ನಾಗರಾಜ ಗರ್ಗೇಶ್ವರಿ, ಪದಗ್ರಹಣ ಅಧಿಕಾರಿ : ಪಿ.ಕೆ. ರಾಮಕೃಷ್ಣ, ಗೌರವ ಅತಿಥಿಗಳು : ಡಾ. ಬಿ. ಚಂದ್ರ, ಸ್ಥಳ: ಗೋಲ್ಡನ್ ಲ್ಯಾಂಡ್‌ಮಾರ್ಕ್ ರೆಸಾರ್ಟ್, ಕೆ.ಆರ್.ಎಸ್. ರಸ್ತೆ, ಸಂಜೆ 6.30ಕ್ಕೆ.

■ **ನಯನ ಮ್ಯೂಸಿಕಲ್ ಗ್ರೂಪ್ :** ಅಪ್ಪು ಸವಿನೆನಪಿಗಾಗಿ ಗೀತಲಹರಿ ಸಂಗೀತ ಕಾರ್ಯಕ್ರಮ, ಅಧ್ಯಕ್ಷತೆ : ಕರ್ನಾಟಕ ಸುಗಮ ಸಂಗೀತ ಪರಿಷತ್ ಜಿಲ್ಲಾಧ್ಯಕ್ಷ ನಾಗರಾಜ್ ವಿ. ಭೈರಿ, ಉದ್ಘಾಟನೆ : ಶಾಸಕ ಕೆ. ಹರೀಶ್‌ಗೌಡ, ಅತಿಥಿಗಳು : ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಮೈಸೂರು ಹೋಟೆಲ್ ಮಾಲೀಕರ ಧರ್ಮದತ್ತಿ ಮಾಲೀಕ ರವಿಶಾಸ್ತ್ರಿ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಅನಿಲ್ ಕುಮಾರ್, ಸಮಾಜ ಸೇವಕ ಡಾ. ರಘುರಾಂ ವಾಜಪೇಯಿ, ಮಂಜುನಾಥ್, ಸ್ಥಳ: ನಾದಬ್ರಹ್ಮ ಸಂಗೀತ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 5.30 ರಿಂದ.

■ **ಜನ ಚೈತನ್ಯ ಫೌಂಡೇಷನ್ :** ಆರೋಗ್ಯ ಪೂರ್ಣ ಜೀವನ ಕ್ರಮ ಕುರಿತು ವಿಚಾರ ಸಂಕಿರಣ, ಸ್ಥಳ:ಹಳೆ ಸಮುದಾಯ ಭವನ, ಟಿ. ಸುಬ್ಬಣ್ಣ ಹಾಸ್ಟೆಲ್ ಹಿಂಭಾಗ, ವಿದ್ಯಾರಣ್ಯಪುರಂ, ಸಂಜೆ 6ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ನಖ ಶಿಖಾಂತ ಅಂದ ಆರೋಗ್ಯಗಳ ಆಪ್ತ ಮಾಹಿತಿ, ಪ್ರಸ್ತುತಿ : ಡಾ. ಕೇಶವ ಕೊರಸೆ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಟಿ. ಎಸ್. ಸ್ನೇಹಾ, ದೀಪಿಕಾ ಪಾಂಡುರಂಗಿ, ವ್ಯಾಖ್ಯಾನ–ಡಾ. ಹೆಚ್.ಎಂ. ಕಲಾಶ್ರೀ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30ಯೋಗ ಕುರಿತ ವಿಶೇಷ ಸರಣಿ– ಮಹಾಯೋಗ, 8.35 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ನಮ್ಮೂರ್ ಹೆಸರು', ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ–ಟಿ. ನರಸೀಪುರ ತಾಲೂಕು ಬನ್ನೂರು ಹೋಬಳಿ ಯಾಚೇನಹಳ್ಳಿಯ ನಾಗಮ್ಮ ಮತ್ತು ಸಂಗಡಿಗರಿಂದ ಮುಡುಕುತೊರೆ ಪಾರ್ವತಮ್ಮನ ಹಾಡು, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಹಳ್ಳಿ ಹಾಡು, ಭಾಗವಹಿಸುತ್ತಾರೆ–ಡಾ.ಪಿ.ಕೆ. ರಾಜಶೇಖರ್ ಮತ್ತು ಸಂಗಡಿಗರು, ಐದನೇ ಭಾಗ, ಪ್ರಸ್ತುತಿ : ಡಾ. ಮೈಸೂರು ಉಮೇಶ್, 3.30 ಮಕ್ಕಳ ಮಂಟಪ–ನಂಜನಗೂಡು ಹಳ್ಳದಕೇರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ನಾಟಕ, 4.30 ನೆನಪಿನಂಗಳ (ಧ್ವನಿ ಭಂಡಾರದಿಂದ) ಮಂದ್ರ ಕಾದಂಬರಿಗಾಗಿ ಸರಸ್ವತಿ ಸಮ್ಮಾನ್ ಪ್ರಶಸ್ತಿ ಪಡೆದ ಹಿರಿಯ ಕಾದಂಬರಿಕಾರರಾದ ಡಾ.ಎಸ್.ಎಲ್.ಭೈರಪ್ಪ ಅವರೊಂದಿಗೆ ಡಾ. ಹನುಮಣ್ಣನಾಯಕ್ ದೊರೆ ಹಾಗೂ ಜಿ.ಕೆ. ರವೀಂದ್ರ ಕುಮಾರ್ ಅವರು ನಡೆಸಿದ್ದ ಸಂವಾದ, 6.50 ಕೃಷಿರಂಗ : ಕಿಸಾನ್ ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ. ಭಾಗವಹಿಸುತ್ತಾರೆ–ಕೆ.ಆರ್. ನಗರ ತಾಲೂಕು ಕಾಳೇನಹಳ್ಳಿ ಗ್ರಾಮದ ಕೃಷಿಕ ದಂಪತಿ ಕೆ.ಜೆ. ಪುಟ್ಟಸ್ವಾಮಿಗೌಡ ಹಾಗೂ ಜಯದೇವಮ್ಮ. ಪ್ರಸ್ತುತಿ: ಎನ್. ಕೇಶವಮೂರ್ತಿ, 8.15 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ

ಶ್ರೀ ದುರ್ಗಾದೇವಿ ಯುಗಾದಿ ಜಾತ್ರಾ ಮಹೋತ್ಸವ; ಭವ್ಯ ಮೆರವಣಿಗೆ



ಮೈಸೂರು ಗಾಂಧಿನಗರದಲ್ಲಿ ಶ್ರೀ ದುರ್ಗಾದೇವಿ ಯುಗಾದಿ ಜಾತ್ರಾ ಮಹೋತ್ಸವದಲ್ಲಿ ಜರುಗಿದ ಭವ್ಯ ಮೆರವಣಿಗೆ.

ಮೈಸೂರು, ಏ.4(ಎಸ್‌ಬಿಡಿ)– ಮೈಸೂರು ಗಾಂಧಿನಗರದ ಶಿವಯೋಗಿಸ್ವಾಮಿ ಮೂರನೇ ಮುಖ್ಯರಸ್ತೆಯಲ್ಲಿ ಶ್ರೀ ದುರ್ಗಾದೇವಿ ಯುಗಾದಿ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ಜರುಗಿತು.

ಯುಗಾದಿಯಂದು ದೇವಸ್ಥಾನ ಸೇರಿದಂತೆ ಇಡೀ ಮೊಹಲ್ಲಾವನ್ನು ಹಸಿರು ತೋರಣಗಳಿಂದ ಸಿಂಗರಿಸಿ, ಶ್ರೀದುರ್ಗಾದೇವಿ ಶಿಲಾ ಮೂರ್ತಿಗೆ ಪಂಚಾಮೃತ ಅಭಿಷೇಕವನ್ನು ನೆರವೇರಿಸಲಾಯಿತು. ಮಹಾಮಂಗಳಾರತಿ ಬಳಿಕ ಕಾರಂಜಿಕೆರೆ ಬಳಿಯಿರುವ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಲ್ಲಿ ಹೋಮ ಇನ್ನಿತರ ಪೂಜಾ ಕೈಂಕರ್ಯಗಳನ್ನು ನಡೆಸಲಾಯಿತು. ಇದರೊಂದಿಗೆ ಶ್ರೀ ದುರ್ಗಾದೇವಿ ಜಾತ್ರಾ ಮಹೋತ್ಸವದ ಭವ್ಯ ಮೆರವಣಿಗೆಗೆ ಚಾಲನೆ ದೊರಕಿತು.

ಶ್ರೀ ದುರ್ಗಾದೇವಿ ಉತ್ಸವ ಮೂರ್ತಿಯನ್ನು ಮೆರವಣಿಗೆ ಮೂಲಕ ನಜರ್‌ಬಾದ್‌ನಲ್ಲಿರುವ ಶ್ರೀಮರಗಮ್ಮ(ಶ್ರೀ ದುರ್ಗಾದೇವಿ ತಂಗಿ) ದೇವಸ್ಥಾನದ ಬಳಿ ಕರೆತಂದು, ಮಂಗಳಾರತಿ ಪಡೆದ ನಂತರ ಗಾಂಧಿನಗರದ ಪ್ರಮುಖ ಬೀದಿಗಳಲ್ಲಿ ಉತ್ಸವ ಮಾಡ ಲಾಯಿತು. ನಗಾರಿ, ಬ್ಯಾಂಡ್ ಸೆಟ್, ಪಂಚವಾದ್ಯ, ಪೂಜಾ ಕುಣಿತ, ಡೊಳ್ಳು ಕುಣಿತ ಇನ್ನಿತರದೊಂದಿಗೆ ಸಾಂಸ್ಕೃತಿಕ ಕಲಾ ತಂಡಗಳು ಮೆರವಣಿಗೆ ಮೆರುಗು ಹೆಚ್ಚಿಸಿದ್ದವು. ಮೆರವಣಿಗೆ ದೇವಸ್ಥಾನವನ್ನು ತಲುಪಿದ ನಂತರ ಶ್ರೀ ದುರ್ಗಾದೇವಿ ಉತ್ಸವ ಮೂರ್ತಿ ಯನ್ನು ಉಯ್ಯಾಲೆಯಲ್ಲಿ ಇಟ್ಟು, ಪೂಜೆ ಸಲ್ಲಿಸಲಾಯಿತು. ಶ್ರೀ ದುರ್ಗಾದೇವಿ ಯುಗಾದಿ ಜಾತ್ರಾ ಮಹೋತ್ಸವದ ಮೆರವಣಿಗೆಯಲ್ಲಿ ದೇವರ ಕರಗವನ್ನು ಪುಷ್ಪಮಿ, ಶ್ರೀನಿಕಾ ಹಾಗೂ ಚೈತನ್ಯ ಅವರು ಹೊತ್ತು ಸಾಗಿದರು. ಶ್ರೀದುರ್ಗಾದೇವಿ ಸೇವಾ ಸಮಿತಿ ಪದಾಧಿಕಾರಿಗಳು, ಮೊಹಲ್ಲಾ ನಿವಾಸಿಗಳು ಸೇರಿದಂತೆ ಸಾವಿರಾರು ಭಕ್ತರು ಉತ್ಸವದಲ್ಲಿ ಪಾಲ್ಗೊಂಡು ದೇವಿಯ ಕೃಪೆಗೆ ಪಾತ್ರರಾದರು.

ಜಾತ್ರೆಗೆ ತೆರೆ: ಇಂದು(ಏ.4) ಶ್ರೀದುರ್ಗಾದೇವಿ ಉತ್ಸವ ಮೂರ್ತಿಯನ್ನು ಭಕ್ತಿಭಾವದೊಂದಿಗೆ ಉಯ್ಯಾಲೆಯಿಂದ ಹೊತ್ತು ಸ್ವಸ್ಥಾನದಲ್ಲಿಟ್ಟು, ಮರುಪೂಜೆ ನೆರವೇರಿಸುವುದರೊಂದಿಗೆ ಯುಗಾದಿ ಜಾತ್ರಾ ಮಹೋತ್ಸವಕ್ಕೆ ತೆರೆ ಎಳೆಯಲಾಯಿತು.

ನಾಳೆ ರಾಮ ತಾರಕ ಹೋಮ; ಶನಿ ಶಾಂತಿ ಹೋಮ

ಮೈಸೂರು, ಏ. 4– ಇರ್ವಿನ್ ರಸ್ತೆಯಲ್ಲಿರುವ ಪಂಚಮುಖಿ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಮೈಸೂರು ಧಾರ್ಮಿಕ ದತ್ತಿ ಇಲಾಖೆ ಸಹಯೋಗದೊಂದಿಗೆ ಚಾಂದ್ರಮಾನ ಶ್ರೀ ರಾಮನವಮಿ ಪ್ರಯುಕ್ತ ಶನಿ ಮಹಾಶಾಂತಿ ನವಗ್ರಹ ಹೋಮ ಮಹಾಗಣಪತಿ ಹೋಮವನ್ನು ಭಾನುವಾರ ಏಪ್ರಿಲ್ 6 ರಂದು ಬೆಳಗ್ಗೆ 8.30 ರಿಂದ 10ವರೆಗೂ ಹಾಗೂ ಬೆಳಗ್ಗೆ 11:30ಕ್ಕೆ ಪೂರ್ಣಾಹುತಿ ಮಹಾಮಂಗಳಾರತಿ ಆನಂತರ ಭಕ್ತಾದಿಗಳಿಗೆ ತೀರ್ಥ ಪ್ರಸಾದ ವಿನಿಯೋಗವಿದೆ. ಪ್ರತ್ಯೇಕ ಸಂಕಲ್ಪ ಪೂಜೆ ನೆರವೇರಿಸಲಾಗುವುದು ಎಂದು ಶ್ರೀ ಪಂಚಮುಖಿ ಆಂಜನೇಯ ಸ್ವಾಮಿ ದೇವಸ್ಥಾನದ ಪ್ರಧಾನ ಅರ್ಚಕ ವಿದ್ವಾನ್ ಎಸ್ ಕೃಷ್ಣಮೂರ್ತಿ ತಿಳಿಸಿದ್ದಾರೆ.



ಕೆ.ಪಿ.ಸಿ.ಸಿ. ಪ್ರಧಾನ ಕಾರ್ಯದರ್ಶಿ ಹಾಗೂ ನಾಗವಾಲ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರು, ನಾಗವಾಲ ಗ್ರಾಮ ಪಂಚಾಯಿತಿ
ಮಾಜಿ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು, ಬಡವರ ಬಂಧು, ಯುವಕರ ಕಣ್ಮಣಿ, ಸ್ನೇಹಜೀವಿ, ಸದಾ ಹಸನ್ಮುಖಿಯಾದ
ಸನ್ಮಾನ್ಯ ಶ್ರೀ ಸಿ. ನರೇಂದ್ರಣ್ಣ ರವರಿಗೆ
ಹುಟ್ಟು ಹಬ್ಬದ ಶುಭಾಶಯಗಳು
ಚೇತನ್
ಯುವ ಮುಖಂಡರು
ಅವಿನಾಶ್
ಯುವ ಮುಖಂಡರು
ಹಿನಕಲ್ ಮಂಜು
ಮಾಜಿ ಜಿಲ್ಲಾಧ್ಯಕ್ಷರು
ಮೈಸೂರು ಜಿಲ್ಲಾ ಗ್ರಾಮಾಂತರ
ಯುವ ಕಾಂಗ್ರೆಸ್ ಸಮಿತಿ
ಬಿಳಿಕೆರೆ ಸ್ವಾಮಿ
ಮಾಜಿ ಉಪಾಧ್ಯಕ್ಷರು
ಮೈಸೂರು ಜಿಲ್ಲಾ ಗ್ರಾಮಾಂತರ
ಯುವ ಕಾಂಗ್ರೆಸ್ ಸಮಿತಿ
ವಿನೋದ್ ಎಸ್.ಆರ್.ಎಸ್.
ಉಪಾಧ್ಯಕ್ಷರು
ಚಾಮುಂಡೇಶ್ವರಿ ಕ್ಷೇತ್ರ
ಯುವ ಕಾಂಗ್ರೆಸ್ ಸಮಿತಿ
ಪೈ|| ನವೀನ್ ಕುಮಾರ್
ಜಿಲ್ಲಾ ಉಪಾಧ್ಯಕ್ಷರು
ಮೈಸೂರು ಜಿಲ್ಲಾ ಗ್ರಾಮಾಂತರ
ಯುವ ಕಾಂಗ್ರೆಸ್ ಸಮಿತಿ
ಹೊಸಕೋಟೆ ಗಿರೀಶ್
ಮಾಜಿ ಅಧ್ಯಕ್ಷರು
ತಗಡೂರು ಬ್ಲಾಕ್
ಯುವ ಕಾಂಗ್ರೆಸ್ ಸಮಿತಿ
ಎಸ್.ಆರ್.ಎಸ್. ಮಂಜು
ಉಪಾಧ್ಯಕ್ಷರು
ಚಾಮುಂಡೇಶ್ವರಿ ಬ್ಲಾಕ್
ಯುವ ಕಾಂಗ್ರೆಸ್ ಸಮಿತಿ
ಮಹದೇವಸ್ವಾಮಿ
ಸದಸ್ಯರು
ಗ್ರಾಮ ಪಂಚಾಯಿತಿ
ದೊಡ್ಡೇಬಾಗಿಲು, ಟಿ.ನರಸೀಪುರ
ಪಡುವಾರಹಳ್ಳಿ ಹರೀಶ್
ಕಾರ್ಯದರ್ಶಿ
ಕೆ.ಪಿ.ಸಿ.ಸಿ. ಕಾರ್ಮಿಕ ವಿಭಾಗ
ಕೋಟೆ ಸುರೇಶ್
ಕಾರ್ಯದರ್ಶಿ
ಕೆ.ಪಿ.ಸಿ.ಸಿ. ಕಾರ್ಮಿಕ ವಿಭಾಗ
ಪ್ರದೀಪ್ ನಂಜನಗೂಡು
ಅಧ್ಯಕ್ಷರು, ಅಖಿಲ ಕರ್ನಾಟಕ
ಡಾ.ಮಲ್ಲಿಕಾರ್ಜುನ ಖರ್ಗೆ
ಅಭಿಮಾನಿಗಳ ಬಳಗ, ಮೈಸೂರು
ಮಂಜು ಬೆಳವಾಡಿ
ಕಾಂಗ್ರೆಸ್ ಯುವ
ಮುಖಂಡರು
ಧನಗಳ್ಳಿ ಪ್ರವೀಣ್
ಮಾಜಿ ಉಪಾಧ್ಯಕ್ಷರು
ಮೈಸೂರು ಜಿಲ್ಲಾ ಗ್ರಾಮಾಂತರ
ಯುವ ಕಾಂಗ್ರೆಸ್ ಸಮಿತಿ
ಪ್ರಕಟಣೆ : ಸಿ. ನರೇಂದ್ರಣ್ಣ ಅಭಿಮಾನಿಗಳ ಬಳಗ, ಮೈಸೂರು
ಗ್ರಾಫಿಕ್ ವರ್ಲ್ಡ್
GRAPHIC WORLD
9535370787